ಅಧ್ಯಕ್ಷರು:- ಮಂಡಿಸಲಾಯಿತು.

4) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಅ) ವಿಷಯ:- ಬ್ಯಾಕ್‌ಲಾಗ್ ವಿಚಾರದ ಕುರಿತು.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್):- ಸನ್ಮಾನ್ಯ ಅಧ್ಯಕ್ಷರೇ, ನಾನು ಬಹುಶಃ ಇದನ್ನು ನಿಲುವಳಿ ಸೂಚನೆಯಾಗಿ ತೆಗೆದುಕೊಳ್ಳುತ್ತೀರಿ ಎಂದು ಭಾವಿಸಿದ್ದೆ. ಆದರೆ ತಾವು ಹೇಳಿದಮೇಲೆ ಚರ್ಚೆಯ ನಂತರವೇ ಇದನ್ನು ತೆಗೆದುಕೊಳ್ಳಬೇಕು ಎಂದಮೇಲೆ ನಾನು ಪುನಃ ತಮ್ಮ ಅಪ್ಪಣೆ ಪಡೆದು ಪ್ರಸ್ತಾಪ ಮಾಡುತ್ತಿದ್ದೇನೆ. ಕಳೆದ ವಾರದಲ್ಲಿ ನಾನು ಈ ವಿಷಯವನ್ನು ಪ್ರಸ್ತಾಪ ಮಾಡಿದಾಗ ತಾವು ಹೇಳಿದಿರಿ, ಇದು ಬಹಳ ಗಂಭೀರವಾದ ವಿಷಯ ಇದೆ, ಅದಕ್ಕಾಗಿ ಇದರ ಬಗ್ಗೆ ಒಂದು ಸವಿಸ್ತಾರ ಚರ್ಚೆ ಆಗುವುದು ಸೂಕ್ತ, ಅದಕ್ಕಾಗಿ ಅರ್ಧ ಗಂಟೆಯಾಗಲಿ ಒಂದು ಗಂಟೆಯಾಗಲಿ ಚರ್ಚೆ ಮಾಡೋಣ ಎನ್ನುವ ಅಭಿಪ್ರಾಯದ ಮೇರೆಗೆ ಆ ದಿವಸ ಸಂಪೂರ್ಣವಾಗಿ ಇದರ ಬಗ್ಗೆ ಚರ್ಚೆ ಆಗಲಿಲ್ಲ. ಇವತ್ತು ನಮ್ಮ ಮುಂದೆ ಇರತಕ್ಕಂಥ ಪ್ರಶ್ನೆ ಬಹಳ ಗಂಭೀರವಾಗಿದೆ. ಈ ಷೆಡ್ಯೂಲ್ಡ್ ಕಾಸ್ಟ್, ಷೆಡ್ಯೂಲ್ಡ್ ಟ್ರೈಬ್ಸ್ ಎಂಪ್ಲಾಯೀಸ್ ಅಪಾಯಿಂಟ್‌ಮೆಂಟ್ ಏನು ಇದೆ, ಇದು ಬ್ಯಾಕ್‌ಲಾಗ್ ಫಿಲಪ್ ಆಗುವುದು ಒಂದು ಕಡೆ. ಎರಡನೆಯದು ರಿಸರ್ವೇಷನ್ ಇನ್ ಪ್ರಮೋಷನ್ ಅದು ಬ್ಯಾಕ್‌ಲಾಗ್ ಇರುವುದು ಇನ್ನೊಂದು ಕಡೆ ಮತ್ತು ಈಗ ಇರುವ ಸರ್ಕಾರಿ ಆಜ್ಞೆ ಏನಿದೆ; 1992ರಲ್ಲಿ ರಿಸರ್ವೇಷನ್ ಇನ್ ಪ್ರಮೋಷನ್ ಆರ್ಡರ್ ಈಗಾಗಲೇ ಕೆ.ಎ.ಟಿ.ಯವರು ಸ್ಟ್ರೈಕ್ ಡೌನ್ ಏನು ಮಾಡಿದ್ದಾರೆ, ಆ ಕೆ.ಎ.ಟಿ.ಯ ಸ್ಟ್ರೈಕ್ ಡೌನ್ ಮಾಡಿದ ಮೇಲೆ ಸರ್ಕಾರದವರು ಏನು ಅಪೀಲು ಹಾಕಬೇಕಾಗಿತ್ತು, ಆ ಅಪೀಲು ಕೂಡ ಇನ್ನೂವರೆಗೆ ಅನೇಕ ಕೇಸ್‌ಗಳಲ್ಲಿ ಹಾಕಿಲ್ಲ. ಆ ದಿವಸ ಅಂದರೆ ಮೊನ್ನೆ ನಾನು ಈ ಸಿರಿಕಲ್ಚರ್ ಒಂದೇ ಒಂದು ಇಲಾಖೆಯದು ತಮ್ಮ ಗಮನಕ್ಕೆ ತಂದೆ. ಆಗ ಸ್ಪಷ್ಟವಾಗಿ ಸರ್ಕಾರದವರೂ ಕೂಡ ಒಪ್ಪಿಕೊಂಡರು. ಆ ಒಂದು ಕೌಂಟರ್ ಅಫಿಡವಿಟ್ ಹಾಕತಕ್ಕಂಥದ್ದು ಅಥವಾ ಕೌಂಟರ್ ಸ್ಟೇಟ್‌ಮೆಂಟ್ ಮಾಡುವಂಥ ಕೆಲಸವನ್ನು ನಮ್ಮವರು ಮಾಡಿಲ್ಲ, ಅಲ್ಲಿ ಲೋಪವಾಗಿದೆ ಎಂದು ನಾವು ಒಪ್ಪಿಕೊಳ್ಳುತ್ತೇವೆ ಎನ್ನುವ ಮಾತನ್ನು ಸರ್ಕಾರದವರು ಹೇಳಿದರು. ಆದರೆ ಆ ಒಂದು ಕೇಸ್‌ನಲ್ಲಿ ಅಲ್ಲ, ನಾನು ನೋಡಿದ್ದೇನೆ, ಉಳಿದಂಥ ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟ್‌ನಲ್ಲಾಗಲಿ ಮತ್ತು ಕೆಲವು ಬೇರೆ ಇಲಾಖೆಗಳಲ್ಲೂ ಕೂಡ ಈ ಪರಿಸ್ಥಿತಿ ಇವತ್ತು ಉದ್ಭವಿಸಿದೆ. ಮೊನ್ನೆ ಸುಮಾರು 10-15 ದಿವಸಗಳ ಹಿಂದೆ ಮಾತ್ರ ಈ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರಿಂಗ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಪೋಸ್ಟ್‌ಗೆ ಅಥವಾ ಕ್ಲಾಸ್–(1) ಸೀನಿಯರ್ ಸ್ಕೇಲ್ ಪೋಸ್ಟ್‌ಗೂ ಕೂಡ ಪ್ರಮೋಷನ್ ಕೊಡುವುದರ ಬಗ್ಗೆ ಒಂದು ಅಪೀಲು ಫೈಲ್ ಮಾಡಿದ್ದಾರೆ ಎನ್ನತಕ್ಕಂಥದ್ದನ್ನು ನಾನು ಕೇಳಿದ್ದೇನೆ.

1.20 ಪಿ.ಎಂ

ಆದರೆ ಅದು ಕೂಡ ಇವತ್ತು ಪೂರ್ತಿ ಆಗಿಲ್ಲ. ಇವತ್ತು ಒಂದು ವಾದ ನಮ್ಮ ಮುಂದೆ ಏನು ಬರುತ್ತಿದೆ

ಎಂದರೆ ಈ ರಿಸರ್ವೇಷನ್ ಇನ್ ಪ್ರೊಮೋಷನ್ ಕೊಡಬೇಕು ಎನ್ನತಕ್ಕದ್ದು ಕಡ್ಡಾಯ ಇಲ್ಲ. ಅದು ಈಗ ಕಾನೂನು ಬಾಹಿರವಾಗಿ ಆಗಿದೆ. ಇಂದಿರಾ ಸಹಾನಿ ಕೇಸ್ ಎಂದರೆ ಮಂಡಲ್ ರಿಸರ್ವೇಷನ್ ಬಂದ ಮೇಲೆ ಆ ಒಂದು ಮಂಡಲ್ ಕಮೀಷನ್ ಆಧಾರದ ಮೇಲೆ ಏನು 27 ಪರ್ಸೆಂಟ್ ರಿಸರ್ವೇಷನನ್ನು ಬ್ಯಾಕ್‌ವರ್ಡ್ ಕ್ಲಾಸಸ್‌ರವರಿಗೆ ಕೊಟ್ಟರು. ಕೊಟ್ಟ ಮೇಲೆ ಅದೇ ಕೇಸ್‌ನಲ್ಲಿ ಆ 9 ಜಜ್ಜಸ್‌ನಲ್ಲಿ ಸುಮಾರು ಏಳೆಂಟು ಜಜ್ಜಸ್ ಈ ರಿಸರ್ವೇಷನ್ ಇನ್ ಪ್ರೊಮೋಷನ್ ಬಗ್ಗೆ ಒಂದು ಮಾತನ್ನು ಹೇಳಿಬಿಟ್ಟರು. ಪ್ರಮೋಷನ್‌ನಲ್ಲಿ ಈ ರಿಸರ್ವೇಷನ್ ಅವಶ್ಯಕತೆ ಇಲ್ಲ ಎನ್ನತಕ್ಕ ವಾದವನ್ನು ಇಟ್ಟ ಮೇಲೆ ಒಂದು ಗೊಂದಲ ಎಲ್ಲ ಕಡೆ ಸೃಷ್ಟಿ ಆಯಿತು. ಆ ಒಂದು ಇಂದಿರಾ ಸಹಾನಿ ಕೇಸಸ್ ಆಧಾರದ ಮೇಲೆ ಆ ಒಂದು ಮಂಡಲ್ ಕಮೀಷನ್ ಕೇಸಸ್ ಆಧಾರದ ಮೇಲೆ, ರಿಸರ್ವೇಷನ್ ಆಧಾರದ ಮೇಲೆ ಇವತ್ತು ಎಲ್ಲಾ ಸರ್ಕಾರಿ ನೌಕರರು ಅಲರ್ಟ್ ಆಗಿ ಏನು ಶ್ರೀಮಾನ್ ದೇವ-ರಾಜ್ ಅರಸ್‌ರವರ ಕಾಲದಲ್ಲಿ 25ನೇ ಜೂನ್ 1978ರಲ್ಲಿ ಆ ಒಂದು ಗವರ್ನಮೆಂಟ್ ಆರ್ಡರ್ ಇಶ್ಯೂ ಆಗಿತ್ತು, ಆ ಒಂದು ಗವರ್ನಮೆಂಟ್ ಆರ್ಡರ್ ಮುಂದೆ ಎರಡು ವರ್ಷಕ್ಕೊಮ್ಮೆ ಕಂಟಿನ್ಯೂ ಆಗುತ್ತಾ ಹೋಯಿತು. ಅದಕ್ಕೆ ಕೊಡಲಿ ಪೆಟ್ಟನ್ನು ಹಾಕತಕ್ಕಂಥ ಕೆಲಸವನ್ನು ಡಿಪಿಎಆರ್‌ನವರು ಸಿಸ್ಟಮ್ಯಾಟಿಕ್ ಆಗಿ ಮಾಡಿಕೊಂಡು ಬಂದಿದ್ದಾರೆ. ಆ ಜನಾಂಗಕ್ಕೆ ಸಿಗತಕ್ಕ ಹಕ್ಕುಗಳನ್ನು ಇಸಿದು-ಕೊಡತಕ್ಕ ಪ್ರಯತ್ನ ಮಾಡುವುದು ಬಿಟ್ಟು ಎಲ್ಲಿ ವೇಕೆನ್ಸಿಗಳು ಕಡಿಮೆ ಇದೆ, ಅದನ್ನು ಫಿಲಪ್ ಮಾಡುವುದಕ್ಕೆ ಪ್ರೋತ್ಸಾಹ ನೀಡುವುದು ಬಿಟ್ಟು ಆ ಒಂದು ಪ್ರಮೋಷನ್ ಜಿ ಓ ಅನ್ನು ಯಾವ ರೀತಿಯಾಗಿ ಸ್ಕಟಲ್ ಮಾಡಬೇಕು ಅಥವಾ ಯಾವ ರೀತಿಯಾಗಿ ಆ ಒಂದು ಜಿ ಓ ಅನ್ನು ಕ್ವಾಶ್ ಮಾಡಿಸಬೇಕು ಎನ್ನುವ ಕಡೆ ಗಮನ ಹೆಚ್ಚಿಗೆ ಕೊಟ್ಟು ಕೊನೆಗೆ ಈ ಒಂದು 1978ರ ರಿಸರ್ವೇಷನ್ ಇನ್ ಪ್ರಮೋಷನ್ ಜಿ ಓ ಏನು ಇದೆ ಅದು ಮುಂದೆ ಎಕ್ಸ್‌ಟೆಂಡ್ ಆಗಿ 1992ರವರೆಗೆ ಹೋಯಿತು. ಪುನಃ 1992ರಿಂದ 1994ಕ್ಕೆ ಬಂತು. ಬಂದ ಮೇಲೆ ಇವತ್ತಿನ ದಿವಸ ಕೆ.ಎ.ಟಿ.ನಲ್ಲಿ ಕೆಲವು ಜನ ಹೋಗಿ ಆ 1992ರ ಆರ್ಡರ್ ಏನು ಎಕ್ಸ್‌ಟೆಂಡ್ ಮಾಡಿದ್ದರು ಅದರ ಅವಶ್ಯಕತೆ ಇಲ್ಲ ಪ್ರಮೋಷನ್‌ನಲ್ಲಿ ರಿಸರ್ವೇಷನ್ ಕೊಡತಕ್ಕ ಅವಶ್ಯಕತೆ ಇಲ್ಲ ಎಂದು ಹೇಳಿ ಕೆ.ಎ.ಟಿ.ಯವರು ಕೊಟ್ಟ ಆಧಾರದ ಮೇಲೆ, ಇವತ್ತು ಎಲ್ಲಾ ಇಲಾಖೆಗಳಲ್ಲಿ ಆ ಪ್ರಮೋಷನ್ಸ್ ಅನ್ನು ನಿಲ್ಲಿಸಿ ಬಿಟ್ಟಿದ್ದಾರೆ. ಆದರೆ ಇದು ಮಾಡಿದ್ದು ಒಂದು ವಿಶೇಷ ಸಂದರ್ಭದಲ್ಲಿ, ವಿಶೇಷ ಸರ್ಕಂಸ್ಟೆನ್ಸಸ್‌ನಲ್ಲಿ. ಇದು ಯಾರ ಒಂದು ಮೆಹರ್‌ಬಾನಿಯಿಂದ ಆಗತಕ್ಕಾದ್ದು ಅಲ್ಲ. ಸಂವಿಧಾನದಲ್ಲಿ ಇಂತಹ ಅನೇಕ ಕಾಲಂಗಳನ್ನು ಇವತ್ತು ಜಾರಿಗೆ ತಂದಿದ್ದಾರೆ. ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿದ್ದ ಹಾಗೆ, ಆರ್ಟಿಕಲ್ 15(4), ಆರ್ಟಿಕಲ್ 16(4) ಪ್ರಕಾರ ಎಲ್ಲೆಲ್ಲಿ ಈ ಒಂದು ಅಡಿಕ್ವೇಟ್ ರೆಪ್ರಸೆಂಟೇಷನ್ ಕೊಡುವುದಕ್ಕೋಸ್ಕರ ಎಸ್‌ಸಿ: ಮತ್ತು ಎಸ್‌ಟಿ ಜನಾಂಗಕ್ಕೆ ಮತ್ತು ಅದರ್ ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೆ ಇಂತಹ ಪ್ರಾವಿಷನ್ಸ್‌ನ್ನು ಅಥವಾ ಇಂತಹ ಎಕ್ಸಿಕ್ಯೂಟೀವ್ ಆರ್ಡರ್ಸ್‌ನ್ನು ಮಾಡಬಹುದು ಎಂದು ಹೇಳಿದ ಮೇಲೆ, ಅದರ ಆಧಾರದ ಮೇಲೆ ಇವತ್ತಿನ ದಿವಸ ಆ ಆರ್ಡರನ್ನು ಇಶ್ಯೂ ಮಾಡಿದ್ದಾರೆ. ಇಶ್ಯೂ ಮಾಡಿದ್ದನ್ನು ಇಲ್ಲಿ-ಯವರೆಗೆ ಯಾರೂ ಕೂಡ ಛಾಲೆಂಜ್ ಮಾಡಿದ್ದಿಲ್ಲ. ಛಾಲೆಂಜ್ ಮಾಡಿದರೂ ಕೂಡ ಅದು

ಯಶಸ್ವಿಯಾಗಿ ಹೊರಗೆ ಬರಲಿಲ್ಲ. ಆದರೆ ಏಕೆ ಸರ್ಕಾರ ಇದನ್ನು ಅಪೀಲ್ ಮಾಡಲಿಲ್ಲವೋ ಗೊತ್ತಾಗಲಿಲ್ಲ. ಇಲ್ಲವೇ ಆ ಆರ್ಡರ್‌ನಲ್ಲಿ ಏನಾದರೂ ಡಿಫೆಕ್ಟ್ ಇದ್ದರೆ ಅದನ್ನು ರೆಕ್ಟಿಫೈ ಮಾಡತಕ್ಕ-ದ್ದಕ್ಕೆ ಸರ್ಕಾರ ಏಕೆ ಕಾಳಜಿ ವಹಿಸಲಿಲ್ಲ ಎನ್ನತಕ್ಕದ್ದನ್ನು ನಾನು ಇವತ್ತು ಕೇಳುತ್ತಿದ್ದೇನೆ. ಇವತ್ತು ಅದಕ್ಕೆ ಕಾನ್ಸ್‌ಸ್ಟಿಟ್ಯೂಷನಲ್ ಬ್ಯಾಂಕಿಂಗ್ ಇದ್ದರೂ ಕೂಡ ಆರ್ಟಿಕಲ್ 15(4) ಮತ್ತು 16(4) ಬ್ಯಾಂಕಿಂಗ್ ಒಂದು ಕಡೆ, ಇನ್ನೊಂದು ಕಡೆ ವಿಶೇಷವಾದಂತಹ ಆರ್ಟಿಕಲ್ 332, 333, 334 ಮತ್ತು 335. ಅಂದರೆ ಈ "Special provision relating to certain classes i.e., reservation of seats to SCs/STs in the House of people" ಅಂದರೆ ಅಸೆಂಬ್ಲಿಯಲ್ಲಿ ಪಾರ್ಲಿ-ಮೆಂಟಿನಲ್ಲಿ ಅವರಿಗೆ ರಿಸರ್ವೇಷನ್ ಕೊಡಬೇಕು ಎನ್ನತಕ್ಕದ್ದು ಕೂಡ ಇದೆ. ಮತ್ತು ಮುಂದೆ ಎಂ-ಪ್ಲಾಯ್‌ಮೆಂಟಿಗೋಸ್ಕರ ಸಹ ಅವರ ಕ್ವಾಲಿಫಿಕೇಶನ್ ನೋಡಿಕೊಂಡು ಅಲ್ಲಿಯೂ ಕೂಡ ಅಡಿ-ಕ್ವೇಟ್ ರೆಪ್ರಸೆಂಟೇಷನ್ ಕೊಡಬೇಕು ಎನ್ನತಕ್ಕದ್ದು ಆರ್ಟಿಕಲ್ 335ರಲ್ಲಿ ಕೂಡ ಸ್ಪಷ್ಟಪಡಿಸಿದ್ದಾರೆ. "Claims of SCs/STs in services and Posts" ಇದರಲ್ಲಿ ಸ್ಪಷ್ಟ ಹೇಳಿದ್ದಾರೆ.

> "The claims of the members of the SCs/STs shall be taken into consideration consistently with the maintenance of the efficiency of the administration in the making of appointments to services and posts in connection with the affairs of the Union and the State"

ಅಂದರೆ ಪ್ರತಿಯೊಂದು ರಾಜ್ಯದಲ್ಲಿ ಅವರಿಗೆ ಸರ್ವೀಸ್‌ನಲ್ಲಿ ಅಡಿಕ್ವೇಟಾಗಿ ರೆಪ್ರಸೆಂಟೇಷನ್ ಕೊಡ-ಬೇಕು. ಅವರಿಗೆ ಸಾಕಷ್ಟು ಸಹಾಯ ಮಾಡಬೇಕು. ಅದಕ್ಕೆ ಕ್ವಾಲಿಫಿಕೇಶನ್ ಇದೆ. ಯಾರು ಬಿ.ಇ. ಇರಲಾದವರಿಗೆ ಇಂಜಿನಿಯರ್ ಮಾಡು ಎಂದು ಯಾರೂ ಕೇಳುವುದಿಲ್ಲ. ಅಥವಾ ಡಾಕ್ಟರ್ ಜಾಗದಲ್ಲಿ ಬಿ.ಎ. ಗ್ರಾಜುಯೇಟ್ ಶೆಡ್ಯೂಲ್ಡ್ ಕಾಸ್ಟ್ ಅನ್ನು ತೆಗೆದುಕೋ ಎಂದು ಯಾರೂ ಹೇಳು-ವುದಿಲ್ಲ. ಮಿನಿಮಮ್ ಕ್ವಾಲಿಫಿಕೇಶನ್, ರಿಕ್ವೈರ್ಡ್ ಕ್ವಾಲಿಫಿಕೇಶನ್ ಏನು ಇದೆ, ಆ ರಿಕ್ವೈರ್ಡ್ ಕ್ವಾಲಿಫಿಕೇಶನ್ ಪ್ರಕಾರ ನೀವು ಪ್ರತಿಯೊಂದು ಇಲಾಖೆಯಲ್ಲಿ ತೆಗೆದುಕೊಳ್ಳಬೇಕೆಂದು ಹೇಳಿ ಆರ್ಟಿ-ಕಲ್ 335ರಲ್ಲಿ ಸ್ಪಷ್ಟಪಡಿಸಿದೆ. ಇದು ಡೈರೆಕ್ಟ್ ರಿಕ್ರೂಟ್‌ಮೆಂಟಿಗೆ ರಿಸರ್ವೇಷನ್ ಇನ್ ಪ್ರಮೋಷ-ನ್‌ಗೋಸ್ಕರ ಆರ್ಟಿಕಲ್ 15(4) ಮತ್ತು 16(4)ರ ಪ್ರಕಾರ ಎಲ್ಲಿ ಇನ್‌ಅಡಿಕ್ವೇಟ್ ಇದೆ, ಎಲ್ಲಿ ಡೆಫಿಷಿಯನ್ಸಿ ಇದೆ, ಎಲ್ಲಿ 18 ಪರ್ಸೆಂಟ್ ಫಿಲಪ್ ಆಗಿಲ್ಲ. ಅಂತಹ ಕಡೆ ಮಾಡಬೇಕು ಎನ್ನತಕ್ಕದ್ದು. ಅಂದರೆ ನಮ್ಮಲ್ಲಿ 18 ಪರ್ಸೆಂಟ್ ಇದೆ. ನಮ್ಮ ಸೆಂಟ್ರಲ್ ಗವರ್ನಮೆಂಟಿನಲ್ಲಿ 22.5 ಪರ್ಸೆಂಟ್ ಇದೆ. ಮತ್ತು ಗುಜರಾತ್‌ನಲ್ಲಿ 27 ಪರ್ಸೆಂಟ್ ಇದೆ, ಮಹಾರಾಷ್ಟ್ರದಲ್ಲಿ 14 ಪರ್ಸೆಂಟ್ ಇದೆ. ಅಂದರೆ ಜನಸಂಖ್ಯೆ ಆಧಾರದ ಮೇಲೆ ಅವರಿಗೆ ವಿಶೇಷವಾದಂತಹ ಸಂಪತ್ತನ್ನು ಕೊಡಬೇಕು ಎಂದು ಹೇಳಿ ಸ್ಪೆಷಲ್ ಪ್ರಾವಿಜನ್ಸ್ ಇವತ್ತು ಸಂವಿಧಾನದಲ್ಲಿಯೇ ಮಾಡಿದ್ದಾರೆ. ಅಂದಾಗ ಅಂತಹದನ್ನು ಬದಿಗಿಟ್ಟು ಅದರ ಬಗ್ಗೆ ನಾವು ಲಕ್ಷ್ಯ ಕೊಡದೇ ಮತ್ತು ನಮ್ಮ ಸರ್ಕಾರಿ ವಕೀಲರೂ ಕೂಡ ಇದರ ಬಗ್ಗೆ ಅಪಿಯರ್ ಆಗದೇ, ಅದು ಕೆ.ಎ.ಟಿ.ನೇ ಇರಬಹುದು. ಅಲ್ಲಿಗೆ ಅಪಿಯರ್ ಆಗದೇ ಕೌಂಟರ್

ಅಫಿಡವಿಟ್ ಫೈಲ್ ಮಾಡದೇ ಮತ್ತು ಅವರು ಸುಪ್ರೀಂ ಕೋರ್ಟಿಗೂ ಇನ್‌ಟೈಂ ಅಪೀಲ್ ಫೈಲ್ ಮಾಡಿಲ್ಲ. ಇವತ್ತಿನ ದಿವಸ ನಾವು ಪ್ರತಿಯೊಂದು ಇಲಾಖೆಯ ಅಂಕಿ ಸಂಖ್ಯೆ ಕೊಡುವುದಕ್ಕೆ ಆಗುವುದಿಲ್ಲ. ಸುಮಾರು 36 ಇಲಾಖೆಗಳು ಇವೆ. ಯಾವ್ಯಾವ ಡಿಪಾರ್ಟ್‌ಮೆಂಟಿನಲ್ಲಿ ಅಪೀಲ್ ಫೈಲ್ ಮಾಡಿದ್ದಾರೆ, ಯಾವ್ಯಾವ ಡಿಪಾರ್ಟ್‌ಮೆಂಟ್‌ನಲ್ಲಿ ಇವರು ಪ್ರಮೋಷನ್ ಕೊಟ್ಟಿದ್ದಾರೆ, ಯಾವ್ಯಾವ ಡಿಪಾರ್ಟ್‌ಮೆಂಟ್‌ನಲ್ಲಿ ಇವರು ನೆಗ್ಲೆಕ್ಟ್ ಮಾಡಿದ್ದಾರೆ ಎನ್ನತಕ್ಕ ಎಲ್ಲಾ ಮಾಹಿತಿ ನನ್ನಲ್ಲಿ ಇಲ್ಲ. ನನ್ನ ಹತ್ತಿರ ಇರತಕ್ಕದ್ದು ಮೊನ್ನೆ ನಾನು ಸೆರಿಕಲ್ಚರ್ ಡಿಪಾರ್ಟ್‌ಮೆಂಟ್‌ದು ಹೇಳಿದೆ. ಕ್ಲಾಸ್-(2)ನಿಂದ ಕ್ಲಾಸ್-(1)ಗೆ ಅವರು ಪ್ರಮೋಷನ್ ಕೊಡಬೇಕಾದರೆ ಸ್ಪಷ್ಟವಾಗಿ ಹೇಳಿದ್ದಾರೆ; ಏನೆಂದು ಹೇಳಿದ್ದಾರೆ ಎಂದರೆ ಡೆಪ್ಯೂಟಿ ಡೈರೆಕ್ಟರ್ ಪೇ ಸ್ಕೇಲ್ ಇದು 3300-5500 ಇರುವುದರಿಂದ ಅಲ್ಲಿ ನಮಗೆ ಪ್ರಮೋಷನ್ ಕೊಡಲು ಬರುವುದಿಲ್ಲ. ಎಲ್ಲಿ ಕೊಡಬಹುದು, ಎಲ್ಲಿ 2550 ಇದೆ, ಅಂತಹ ಕಡೆ ಮಾತ್ರ ಇದು ಜೂನಿಯರ್ ಕ್ಲಾಸ್-(1)ಗೆ ಅನ್ವಯಿಸುತ್ತದೆ ಎಂದು ಹೇಳಿ ಅದೇ ಒಂದು ಗ್ರೌಂಡ್ ಮೇರೆ ಅಲ್ಲಿ ಕೆ.ಎ.ಟಿ.ನವರು ಕ್ವಾಶ್ ಮಾಡಿದರು. ಆದರೆ ಇದು ಕ್ಲಾಸ್-(1)ನಲ್ಲಿಯೇ ಪೇ ಸ್ಕೇಲ್‌ನಲ್ಲಿ ವ್ಯತ್ಯಾಸ ಇದೆ. ಅದಕ್ಕೆ ಯಾವುದೇ ಒಂದು ಡಿಪಾರ್ಟ್‌ಮೆಂಟ್‌ನಲ್ಲಿ ಹೈಯರ್ ಪೇ ಸ್ಕೇಲ್ ಇರಬಹುದು, ಕ್ಲಾಸ್-(1) ಆಫೀಸರ್. ಇನ್ನೊಂದು ಡಿಪಾರ್ಟ್‌ಮೆಂಟ್‌ನಲ್ಲಿ ಕ್ಲಾಸ್-(1) ಆಫೀಸರ್‌ಗೆ ಲೋಯರ್ ಪೇಸ್ಕೇಲ್ ಇರತಕ್ಕವರು ಇರಬಹುದು. ಅಂದಾಗ ಒಂದು ಡಿಪಾರ್ಟ್‌ಮೆಂಟಿನಲ್ಲಿ ಅದು ಅನುಕೂಲ ಆಗಬಹುದು, ಇನ್ನೊಂದು ಕಡೆ ಅನಾನುಕೂಲ ಆಗಬಹುದು. ಆದರೆ ಇಮ್ಮೀಡಿಯಟ್ ಪ್ರಮೋಷನ್‌ಗೋಸ್ಕರ ನೀವೇನು ಸಹಾಯ ಮಾಡಬೇಕಾಗಿತ್ತು, ಅದನ್ನು ಕೂಡ ನೋಡಲಿಲ್ಲ. ಹೀಗಾಗಿ ಇವತ್ತು ಅಧ್ಯಕ್ಷರೆ, ಅನ್ಯಾಯವೂ ಆಗಿದೆ. ಮತ್ತು ವಿಥಿನ್ ಟೈಮ್ ಒಂದು ತಿಂಗಳೊಳಗಾಗಿ ಅಪೀಲ್ ಫೈಲ್ ಮಾಡಬೇಕೆಂದು ಎಲ್ಲ ಕಡೆ ಇದ್ದರೂ ಕೂಡ ನಮ್ಮ ಸರ್ಕಾರ ಇವತ್ತಿನವರೆಗೆ, ಲಾ ಡಿಪಾರ್ಟ್‌ಮೆಂಟೇ ಇರಬಹುದು, ಸರ್ಕಾರಿ ಅಧಿಕಾರಿಗಳೇ ಇರಬಹುದು, ವಕೀಲರೇ ಇರಬಹುದು, ಕಾಳಜಿ ವಹಿಸಿ ಈ ಬಗ್ಗೆ ಫೈಟ್ ಮಾಡತಕ್ಕದ್ದೇ ಆಗಲಿ, ಇಲ್ಲವೇ ಅದರಲ್ಲಿರತಕ್ಕ ನ್ಯೂನ್ಯತೆಗಳನ್ನು ಓವರ್‌ಕಂ ಮಾಡಿ ಹೊಸ ಗವರ್ನಮೆಂಟ್ ಆರ್ಡರನ್ನು ಇಶ್ಯೂ ಮಾಡುವುದಕ್ಕೂ ಕೂಡ ಅವರು ಪ್ರಯತ್ನ ಪಟ್ಟಿಲ್ಲ. ಇದು ಒಂದು ಕಡೆ. ಎರಡನೆಯದು ತಮ್ಮ ಗಮನಕ್ಕೆ ತರುತ್ತೇನೆ. ನಾನು ಪದೇ ಪದೇ ಇದನ್ನು ಹೇಳಿದರೆ ಸ್ವಲ್ಪ ಕೆಲವು ಜನರಿಗೆ ಬೇಸರ ಆಗಬಹುದು. ಏಕೆಂದರೆ ಯಾರಿಗೆ ಸ್ವಲ್ಪ ಹೊಟ್ಟೆ ನೋವು ಇರುತ್ತದೆ ಅವರೇ ಅಜುವಾನ ತಿಂದರೆ ಅದರ ನೋವು ಕಡಿಮೆ ಆಗುತ್ತದೆ. ಆದರೆ ಅವರಿಗೆ ಸ್ವಲ್ಪ ನೋವೇ ಇರುವುದಿಲ್ಲ, ನಾವು ಅವರಿಗೆ ಪ್ರಯತ್ನಪಟ್ಟು ಹೇಳಿದಾಗ, ಏನಪ್ಪ ಇದನ್ನು ಪದೇ ಪದೇ ಹೇಳುತ್ತಿದ್ದಾರೆ ಎಂದು ಅನಿಸಬಹುದು. ನಮ್ಮ ಜಯದೇವ ಕಾರ್ಡಿಯಾಲಾಜಿಕಲ್ ಹಾಸ್ಪಿಟಲ್ ವಿಚಾರವನ್ನು ಮಾನ್ಯ ರಾಮಾನಾಥ್ ಅವರು ಪ್ರಸ್ತಾಪ ಮಾಡಿದರು. ಅಲ್ಲಿ ಏನು ರೋಸ್ಟರ್ ಇಲ್ಲವೆ? ಅದನ್ನು ಯಾವ ಸರ್ಕಾರ ಮಾಡಿದ್ದು? ಪ್ರತಿಯೊಂದು ಕ್ಲಾಸ್‌ನಲ್ಲಿ, ಕ್ಲಾಸ್-1ನಲ್ಲಿ ಇಲ್ಲ, ಕ್ಲಾಸ್-2ನಲ್ಲಿ ಇಲ್ಲ, ನಿಮ್ಮ 'ಸಿ ಅಂಡ್ ಡಿ' ಗ್ರೂಪ್‌ನಲ್ಲೂ ಇಲ್ಲ ಅಂದಾಗ ಎಷ್ಟರಮಟ್ಟಿಗೆ ಕಾಳಜಿ ವಹಿಸುತ್ತೀರಿ? ಅಂದರೆ 90 ಪೋಸ್ಟ್‌ಗಳು ಯಾ... ರೋಸ್ಟರ್

ಇಲ್ಲದೇ ರಿಸರ್ವೇಷನ್ ಇಲ್ಲದೇ ಇವತ್ತು ಫಿಲಪ್ ಮಾಡುತ್ತೀರಿ ಎಂದರೆ ನಾವು ಏನು ಹೇಳಬೇಕು, ಯಾವ ರೀತಿಯಾಗಿ ಹೇಳಬಹುದು. ಇದು ಒಂದು ಕಡೆ. ಪ್ರಧಾನಮಂತ್ರಿಗಳೇ ಅಧ್ಯಕ್ಷರೆಂದು ಹೇಳುತ್ತಾರೆ. ಅಂದರೆ, ಈಗ ನಮ್ಮ ಹೊಲದ ರಕ್ಷಣೆಗೋಸ್ಕರ, ಬೆಳೆಗಳ ರಕ್ಷಣೆಗೋಸ್ಕರ ಬೇಲಿ ಹಾಕುತ್ತೇವೆ. ಆದರೆ, ಬೇಲಿಯೇ ಎದ್ದು ಹೊಲ ಮೇಯಲು ಶುರು ಮಾಡಿದರೆ ನಾವು ಯಾರಿಗೆ ಹೇಳಬೇಕು? ಮುಖ್ಯಮಂತ್ರಿಗಳು ಅದಕ್ಕೆ ಅಧ್ಯಕ್ಷರಾಗಿದ್ದು, ಅಲ್ಲಿಯೂ ಸಹ ರೋಸ್ಟರ್ ಇರುತ್ತದೆ. ಹಿಂದೆ ದಿನಗೂಲಿ ಆಧಾರದ ಮೇಲೆ ಲೋಕೋಪಯೋಗಿ, ರೇಷ್ಮೆ ಮತ್ತು ಕೃಷಿ ಇಲಾಖೆಗಳಲ್ಲಿ ನೇಮಿಸಿಕೊಂಡಿದ್ದ ಸುಮಾರು ಐವತ್ತು ಸಾವಿರದಿಂದ ಅರವತ್ತು ಸಾವಿರ ನೌಕರರುಗಳನ್ನು ರೆಗ್ಯುಲ-ರೈಸ್ ಮಾಡಿದರು. ಇದರ ಬಗ್ಗೆ ಸಚಿವ ಸಂಪುಟದ ಒಂದು ನಿರ್ಣಯವಾಯಿತು. ಏನೆಂದರೆ, ಈಗಾ-ಗಲೇ ದಿನಗೂಲಿ ಆಧಾರದ ಮೇಲೆ ಯಾವ ನೌಕರರುಗಳನ್ನು ತೆಗೆದುಕೊಳ್ಳಲಾಗಿದೆಯೋ ಅವರನ್ನು ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಪ್ರಕಾರ ರೆಗ್ಯುಲರೈಸ್ ಮಾಡುವುದು. ಅಲ್ಲದೆ, ಮುಂದೆ ಬರತಕ್ಕಂಥ ಹುದ್ದೆಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಬ್ಯಾಕ್‌ಲಾಗ್ ಎಂದು ಪರಿ-ಗಣಿಸಿ ತುಂಬಬೇಕೆಂದು ತಿಳಿಸಿದ್ದಾರೆ. ಆದರೆ, ಇದುವರೆವಿಗೂ ಕೂಡ ವಿಶೇಷ ನೇಮಕಾತಿ ಆಗಲಿಲ್ಲ. ಇದರ ಬಗ್ಗೆ ಒಂದು ಸಮಿತಿಯನ್ನು ಕೂಡ ರಚಿಸಲಿಲ್ಲ, ಸಚಿವ ಸಂಪುಟದ ನಿರ್ಣಯ ಮಾತ್ರ ಹಾಗೆಯೇ ಇದೆ. ಈ ಕುರಿತು ಆಸಕ್ತಿ ವಹಿಸಿ ಮಾಡದೆ ಹೋದರೆ ಈ ಜನಾಂಗದವರಿಗೆ ಯಾವಾಗ ನ್ಯಾಯ ಸಿಗುವುದು? ಸರ್ಕಾರಿ ಸೇವೆಯಲ್ಲಿ ಸುಮಾರು 5-6 ಲಕ್ಷದಷ್ಟು ಹುದ್ದೆಗಳಿದ್ದು, ಇಲ್ಲಿ ಅವರಿಗೆ ಏನಾದರೂ ಉದ್ಯೋಗ ಸಿಗುತ್ತದೆಯೇ ಹೊರತು ಖಾಸಗಿ ವಲಯದ ಉದ್ದಿಮೆಗಳಲ್ಲಿ ತಮಗೆ ಗೊತ್ತಿರುವಂತೆ ಅವರವರ ವಶೀಲಿಯಲ್ಲಿ, ಅವರದೇ ಆದ ಕಾರ್ಖಾನೆಗಳಿದ್ದರೆ ತಮಗೆ ಬೇಕಾದ ಜನ-ರನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತಾರೆಯೇ ವಿನಃ ಅಲ್ಲಿ ಯಾವುದೇ ರೋಸ್ಟರ್ ಆಗಲೀ ಇಲ್ಲವೇ ಇಂತಿಷ್ಟು ಶೇಕಡಾವಾರು ಹುದ್ದೆಗಳನ್ನು ಮೀಸಲಿಟ್ಟು ಕೊಡಬೇಕೆಂಬ ನಿಯಮವೇನೂ ಅಲ್ಲಿಲ್ಲ. ಆದುದರಿಂದ, ಅಂತಹ ಕಡೆಗಳಲ್ಲಿ ತೆಗೆದುಕೊಳ್ಳುವುದಿಲ್ಲ. ಅಂದರೆ, ಇವೆಲ್ಲವೂ ಉದ್ಯೋಗಗಳು ಸಿಗುವ ಜಾಗವಾಗಿರುವುದರಿಂದ ನೀವು ಅಲ್ಲಿಯೇ ಡಿಫ್ರೈವ್ ಮಾಡಿದಾಗ ಇದನ್ನು ನಾವು ಹೇಗೆ ಮಾಡುವುದು? ಈ ಹಿಂದೆಯೂ ಕೂಡ ತಪ್ಪಾಗಿದೆ, ಇಲ್ಲವೆಂದು ನಾನು ಹೇಳುವುದಿಲ್ಲ. ಅದಕ್ಕಾಗಿ-ಯೇ ಸಚಿವ ಸಂಪುಟ ನಿರ್ಣಯ ಮಾಡಿತ್ತು. ಆ ಸಚಿವ ಸಂಪುಟದ ನಿರ್ಣಯವನ್ನು ಜಾರಿಗೊಳಿಸಿದರೆ ಖಂಡಿತವಾಗಿಯೂ ಸಾವಿರಾರು ಜನರಿಗೆ ಇವೊತ್ತು ಉದ್ಯೋಗ ಸಿಗುತ್ತದೆ ಮತ್ತು ಇದು ಕಾನೂನು-ಬಾಹಿರವಾಗುವುದಿಲ್ಲವೆಂದು ಸಹ ಹೇಳುತ್ತೇನೆ. ನಾವು ಹಿಂದೆ ಅಧಿಕಾರದಲ್ಲಿದ್ದಂಥ ಕಾಲದಲ್ಲಿ ವಿಶೇಷ ನೇಮಕಾತಿ ಮಾಡಿ ಏಕಕಾಲದಲ್ಲಿ ಸುಮಾರು 18,000 ಹುದ್ದೆಗಳ ಪೈಕಿ 14,000 ಹುದ್ದೆಗಳನ್ನು ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಕೊಡುವ ವ್ಯವಸ್ಥೆ ಮಾಡಿದ್ದೇವೆ. ಇದರ ಬಗ್ಗೆ ಯಾರೂ ಕೂಡ ಛಾಲೆಂಜ್ ಮಾಡಲಿಲ್ಲ ಮತ್ತು ಅದು ಕಾನೂನುಬಾಹಿರವೂ ಆಗಲಿಲ್ಲ. ಇವೊತ್ತು ಅನೇಕ ಇಲಾಖೆ-ಗಳಲ್ಲಿ ಹುದ್ದೆಗಳ ಶಾರ್ಟ್‌ಫಾಲ್ ಇದೆ. ಈ ಕುರಿತು ನಾನು ಒಂದೆರೆಡು ವಿಷಯಗಳನ್ನು ಮಾತ್ರ ತಮ್ಮ ಗಮನಕ್ಕೆ ತರುತ್ತೇನೆ. ಏಕೆಂದರೆ, ನಾವು ಬಹಳಷ್ಟು ಮಾತನಾಡುತ್ತೇವೆ. ಉದಾಹರಣೆಗೆ, ನಾನು

ಒಂದೆರೆಡು ಇಲಾಖೆಗಳ ಬಗ್ಗೆ ಮಾತ್ರ ಹೇಳುತ್ತೇನೆ. ಇವೊತ್ತು ಇಷ್ಟು ಮಾತಾಡಿದರೂ ಕೂಡ ನಮಗೆ ಆ ರಕ್ಷಣೆ ಸಿಗುತ್ತಿಲ್ಲ ಎನ್ನುವುದರ ಬಗ್ಗೆ ತಮ್ಮ ಗಮನಕ್ಕೆ ತರುವುದಾದರೆ ಉದಾಹರಣೆಗೆ, ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯನ್ನೇ ತೆಗೆದುಕೊಂಡರೆ ಅಲ್ಲಿ ಸೂಪರಿಂಟೆಂಡೆಂಟ್ ಹುದ್ದೆಗಳು ನಾಲ್ಕು ಇದ್ದು, ರೆಪ್ರಸೆಂಟೇಶನ್ ಯಾವುದೂ ಇಲ್ಲ. ಆಮೇಲೆ ಕಾರ್ಯಪಾಲಕ ಅಭಿಯಂತರರ ಹುದ್ದೆಗಳು 17 ಇದ್ದು, ಒಂದು ಹುದ್ದೆ ಮಾತ್ರ ನೇಮಕಾತಿಯಾಗಿದೆ. ಅಂದರೆ, ಶೇಕಡ 5ರಷ್ಟು ಮೀಸಲಾತಿ. ಸಹಾಯಕ ಕಾರ್ಯಪಾಲಕ ಅಭಿಯಂತರರ 73 ಹುದ್ದೆಗಳ ಪೈಕಿ ಒಂಭತ್ತು ಹುದ್ದೆಗಳಲ್ಲಿ ಏಳು ಹುದ್ದೆಗಳನ್ನು ಪರಿಶಿಷ್ಟ ಜಾತಿಗೆ, ಎರಡು ಹುದ್ದೆಗಳನ್ನು ಪರಿಶಿಷ್ಟ ವರ್ಗಕ್ಕೆ ಕೊಟ್ಟಿದ್ದು ಶೇಕಡ ಆರರಷ್ಟು ಮೀಸಲಾತಿ ಕಲ್ಪಿಸಲಾಗಿದೆ. ಸಹಾಯಕ ಕಾರ್ಯಪಾಲಕ ಅಭಿಯಂತರರ 98 ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಶೇಕಡ ಎಂಟರಷ್ಟು ಮೀಸಲಾತಿ ಇದೆ. ಅದೇ ರೀತಿಯಾಗಿ ಕಿರಿಯ ಅಭಿಯಂತರರ 83 ಹುದ್ದೆಗಳಲ್ಲಿ ಪರಿಶಿಷ್ಟ ಜಾತಿಗೆ ಒಂದು ಮತ್ತು ಪರಿಶಿಷ್ಟ ವರ್ಗಕ್ಕೆ ಒಂದು ಹುದ್ದೆ ಇದ್ದು ಶೇಕಡ ಎರಡರಷ್ಟು ಮೀಸಲಾತಿ ಇದೆ. ಇದೇ ರೀತಿ ಗುಮಾಸ್ತರ ಹುದ್ದೆಗಳನ್ನೆಲ್ಲಾ ಲೆಕ್ಕ ಹಾಕಿದರೆ ಶೇಕಡ 0.21 ಇದೆ ಮತ್ತು 1,507 ದಿನಗೂಲಿ ನೌಕರರುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ ಸೇರಿದವರು ಕೇವಲ 80 ಜನರು ಮಾತ್ರ ಇದ್ದು, ನಾಳೆ ದಿವಸ ಇವರೇ ರೆಗ್ಯುಲರೈಸ್ ಆಗುವವರಿದ್ದಾರೆ. ಏಕೆಂದರೆ, ಚಳುವಳಿ ಮಾಡಿದ ನಂತರ ತಾನೇ ರೆಗ್ಯುಲರೈಸ್ ಆಗುವುದು. ಅಲ್ಲಿ ಪರಿಶಿಷ್ಟ ಜಾತಿಯವರು 80, ಪರಿಶಿಷ್ಟ ವರ್ಗದವರು 13 ಜನರಿದ್ದು, ಇದನ್ನು ಲೆಕ್ಕ ಹಾಕಿದರೆ ಒಟ್ಟಾರೆ ಶೇಕಡ ಏಳರಷ್ಟು ಮೀಸಲಾತಿ ಇದೆ. ವಿಶೇಷ ನೇಮಕಾತಿಯನ್ನು ಏಕೆ ಮಾಡಿಬೇಕು ಮತ್ತು ಮೀಸಲಾತಿ, ಬಡ್ತಿ ಏಕೆ ಕೊಡಬೇಕು ಎಂಬುದರ ಬಗ್ಗೆಯೇ ನಾನು ಪ್ರಸ್ತಾಪಿಸುತ್ತಿದ್ದು, ಇದನ್ನು ಮಾನ್ಯ ಸಚಿವರ ಗಮನಕ್ಕೆ ತಂದಿದ್ದೇನೆ. ಅನಂತರ, ಇಂಜಿನಿಯರಿಂಗ್ ಇಲಾಖೆಯಲ್ಲಿ ಕೃಷ್ಣಾ ಮೇಲ್ದಂಡೆ ಯೇಜನೆಯಲ್ಲಿ ಅನೇಕ ನೌಕರರುಗಳು ಕೆಲಸ ಮಾಡುತ್ತಿದ್ದು, ಅವರಿಗೆ ವಿಶೇಷ ನೇಮಕಾತಿ ಮಾಡಬೇಕು ಮತ್ತು ಹುದ್ದೆಗಳಿಗೆ ಸ್ಥಳೀಯ ಜನರನ್ನೇ ತೆಗೆದುಕೊಳ್ಳಬೇಕೆಂಬ ಬಗ್ಗೆ ವಾದ–ವಿವಾದಗಳು ನಡೆದ ಮೇಲೆ ಮೊನ್ನೆ ದಿವಸ ಅಲ್ಲಿ ಅನೇಕ ಜ್ಯೂನಿಯರ್ ಇಂಜಿನಿಯರ್‌ಗಳನ್ನು ಮತ್ತು ಅಸಿಸ್ಟೆಂಟ್ ಇಂಜಿನಿಯರ್‌ಗಳನ್ನು ರೆಗ್ಯುಲರೈಸ್ ಮಾಡಲಾಯಿತು. ಇವೊತ್ತು ಅಲ್ಲಿನ ಪರಿಸ್ಥಿತಿ ಏನಾಗಿದೆಯೆಂದರೆ, ಲೋಕೋಪಯೋಗಿ ಇಲಾಖೆ ಬಗ್ಗೆ ಕೂಡ ತಮಗೆ ಹೇಳುವುದಾದರೆ, ಅಲ್ಲಿ ಒಟ್ಟು 89 ಕಾರ್ಯಪಾಲಕ ಅಭಿಯಂತರರ ಹುದ್ದೆಗಳಿದ್ದು, ಅದರಲ್ಲಿ ಪರಿಶಿಷ್ಟ ಜಾತಿಯವರಿಗೆ 14 ಹುದ್ದೆಗಳನ್ನು ಕಲ್ಪಿಸಿದ್ದು ಶೇಕಡ 15ರಷ್ಟು ಮೀಸಲಾತಿ ಇದೆ. ಅಲ್ಲಿರುವ ಕಾರ್ಯಪಾಲಕ ಅಭಿಯಂತರರ 371 ಹುದ್ದೆಗಳಲ್ಲಿ ಪರಿಶಿಷ್ಟರು 59 ಹುದ್ದೆಗಳಲ್ಲಿದ್ದು, ಆ ಹುದ್ದೆಯಲ್ಲಿ ಮಾತ್ರ ಶೇಕಡ 15ರಷ್ಟು ಮೀಸಲಾತಿ ಇದೆ. ಇದಲ್ಲದೆ, ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಕಿರಿಯ ಅಭಿಯಂತರರ ಹುದ್ದೆಗಳೆಲ್ಲವೂ ಸೇರಿ ಒಟ್ಟು 4,000 ಹುದ್ದೆಗಳಿದ್ದು, ಇದರಲ್ಲಿ 150 ಹುದ್ದೆಗಳು ಪರಿಶಿಷ್ಟ ಜಾತಿಯವರಿಗೆ, 48 ಹುದ್ದೆಗಳನ್ನು ಪರಿಶಿಷ್ಟ ವರ್ಗದವರಿಗೆ ಕೊಟ್ಟಿದ್ದು ಒಟ್ಟು ಶೇಕಡಾವಾರು 4.50 ಇದೆ. ಇಡೀ ರಾಜ್ಯದಲ್ಲಿ ಕಿರಿಯ ಅಭಿಯಂತರರು 5,000 ಇದ್ದು, ಈ ಪೈಕಿ 320

ಹುದ್ದೆಗಳಲ್ಲಿ ಪರಿಶಿಷ್ಟ ಜಾತಿಯವರು, 45 ಹುದ್ದೆಗಳಲ್ಲಿ ಪರಿಶಿಷ್ಟ ವರ್ಗದವರಿದ್ದು ಒಟ್ಟು ಶೇಕಡಾವಾರು 7.30 ಇದೆ. ನಾನು ಏಕೆ ಈ ಕುರಿತ ಅಂಕಿ–ಅಂಶಗಳ ಚಿತ್ರಣವನ್ನು ಕೊಡುತ್ತಿದ್ದೇನೆಂದರೆ, ಅನೇಕ ಇಲಾಖೆಗಳಲ್ಲಿ ಅದು ಮಂಡಳಿಯಿರಬಹುದು., ನಿಗಮಗಳಿರಬಹುದು, ಇಂಜಿನಿಯರಿಂಗ್ ಇಲಾಖೆ ಇರಬಹುದು, ಜಯದೇವ ಆಸ್ಪತ್ರೆಯಿರಬಹುದು. ಕೆಲವು ಇಲಾಖೆಗಳಲ್ಲಂತೂ ಸಾಕಷ್ಟು ಹುದ್ದೆಗಳಿದ್ದು, ಅಲ್ಲಿ ಇವೊತ್ತು ವಿಶೇಷ ನೇಮಕಾತಿ ಮಾಡುವ ಅವಶ್ಯಕತೆಯಿರುವುದರಿಂದ, ಇದನ್ನು ಮಾಡಬೇಕೆಂದು ನಮ್ಮ ಬೇಡಿಕೆಯಾಗಿದೆ. ಎರಡನೆಯದಾಗಿ, ಪರಿಶಿಷ್ಟ ಜಾತಿ ಮತ್ತು ವರ್ಗಗಳ ನೌಕರರ ವಿರುದ್ಧ ಬೇರೆಯವರು ಏನು ಕೇಸನ್ನು ಫೈಲ್ ಮಾಡುತ್ತಾರೆ, ಕೇಸನ್ನು ಫೈಲ್ ಮಾಡಿದ ತಕ್ಷಣ ಕೌಂಟರ್‌ಫಾಯಿಲ್ ಮಾಡತಕ್ಕಂಥಾದ್ದು, ಡಿಫೆಂಡ್ ಮಾಡತಕ್ಕಂಥಾದ್ದನ್ನು ಅನೇಕ ಪ್ರಕರಣಗಳಲ್ಲಿ ಮಾಡಿರುವುದಿಲ್ಲ. ಉದಾಹರಣೆ ಕೊಡುವುದಾದರೆ, ಇಂಜಿನಿಯರಿಂಗ್ ಇಲಾಖೆಯಲ್ಲೂ ಮಾಡಿಲ್ಲ ರೇಷ್ಮೆ ಇಲಾಖೆಯಲ್ಲೂ ಮಾಡಿಲ್ಲ ಮತ್ತು ಕೃಷಿ ಇಲಾಖೆಯಲ್ಲೂ ಸಹ ಮಾಡಿಲ್ಲ. ಹೀಗೆ ಹತ್ತಾರು ಇಲಾಖೆಗಳಲ್ಲಿ ಕೂಡ ಇವೊತ್ತಿನ ದಿವಸ ಈ ತೊಂದರೆಗಳಿವೆ. ಅಲ್ಲದೆ, ಇದರ ಬಗ್ಗೆ ನೀವು ಸಚಿವ ಸಂಪುಟದಲ್ಲಿ ನಿರ್ಣಯವನ್ನು ಸಹ ತೆಗೆದುಕೊಂಡಿದ್ದೀರಿ. ದಿನಾಂಕ 15.2.1996ರಂದು ನಡೆದ ಸಚಿವ ಸಂಪುಟದ ಸಭೆಯಲ್ಲಿ ಮೂರು ವಿಷಯಗಳಿಗೆ ಸಂಬಂಧಿಸಿದಂತೆ ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದೆ. ಅದರಲ್ಲಿ ಮೊದಲನೆಯ ನಿರ್ಣಯವೇನೆಂದರೆ, to file an S.L.P. before the Supreme Court. Secondly, to file an application before the KAT to stay the operation of its order dated 4.1.96. ಆದರೆ, ಮೊನ್ನೆ ಇದರ ಬಗ್ಗೆ ಪ್ರಸ್ತಾಪಿಸುವವರೆಗೂ ಅವರು ಫೈಲ್ ಮಾಡಿರಲಿಲ್ಲ. ನೀವು ದಿನಾಂಕ 15.2.96ರ ಸಚಿವ ಸಂಪುಟದ ಸಭೆಯಲ್ಲಿ ನಿರ್ಣಯ ತೆಗೆದುಕೊಂಡಿದ್ದು, ಇನ್ನೂ ಫೈಲ್ ಮಾಡಿರಲಿಲ್ಲ. ಮೂರನೆಯ ನಿರ್ಣಯವೇನೆಂದರೆ, to fill up only 32 posts out of 38 posts of Executive Engineers and 6 posts shall be kept vacant till the disposal of the Special Leave Petition. ಇಷ್ಟು ನಿರ್ಣಯಗಳಲ್ಲಿ ಮೂರನೆಯ ನಿರ್ಣಯವನ್ನು ಮಾತ್ರ ಶೀಘ್ರವಾಗಿ ಜಾರಿಗೊಳಿಸಿದರು. ಏಕೆಂದರೆ, 'ನನಗೆ ಕೊಡಿ, ನನಗೆ ಕೊಡಿ' ಎಂದು ಬೇರೆಯವರು ಕಾಯುತ್ತಿರುತ್ತಾರಲ್ಲ, ಅದಕ್ಕೋಸ್ಕರ ಆ ನಿರ್ಣಯವನ್ನು ಜಾರಿಗೊಳಿಸಿದಿರಿ. ಉಳಿದ ಎರಡು ನಿರ್ಣಯಗಳ ಬಗ್ಗೆ ಆಸಕ್ತಿ ವಹಿಸಲಿಲ್ಲ, ತಕ್ಷಣ ಜಾರಿಗೆ ತರಲಿಲ್ಲ, ಇದರ ಪರಿಣಾಮ ಇವೊತ್ತು ಅವರುಗಳಿಗೆ ತೊಂದರೆಯುಂಟಾಗಿದೆ. ದಿನಾಂಕ 15.2.96ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಆಗಿನ ಮುಖ್ಯಮಂತ್ರಿಗಳಾಗಿದ್ದ ಶ್ರೀಮಾನ್ ದೇವೇಗೌಡರು ಈ ನಿರ್ಣಯಗಳನ್ನು ತೆಗೆದುಕೊಂಡಿದ್ದಾರೆ.

ಶ್ರೀ ಎಂ.ಸಿ. ನಾಣಯ್ಯ:- ಮೂರನೆಯ ನಿರ್ಣಯವೇನು?

SRI M. MALLIKARJUNA KHARGE:- To fill up only 32 posts out of 38.

SRI M.C. NANAIAH:- 6 to be kept vacant, not to be filled up. Why? ಏಕೆಂದರೆ, 1992ರಲ್ಲಿ ಇರತಕ್ಕಂಥ ಬ್ಯಾಕ್‌ಲಾಗ್‌ಗೆ ಸಂಬಂಧಿಸಿದಂತೆ ಕ್ಲಾಶ್ ಆಗಿರುವುದ-

ರಿಂದ ಸಬ್‌ಸೀಕ್ವೆಂಟ್ ಆಗಿ ಸರ್ವೋಚ್ಚ ನ್ಯಾಯಾಲಯಕ್ಕೆ ಹೋಗುವುದರಿಂದ ತುಂಬ ಬೇಕಾದ ಆರು ಹುದ್ದೆಗಳು ಯಾವುದಿದೆಯೋ, ಅದನ್ನು ಹಾಗೆಯೇ ಇಡಬೇಕಾಗುತ್ತದೆ. ಆದುದರಿಂದ, ಬೋನಫೈಡ್ಸ್ ಇಲ್ಲವೆಂದು ಹೇಳಬೇಡಿ, ಬೋನಫೈಡ್ಸ್ ಇದ್ದುದರಿಂದಲೇ ನಾವು ಮಾಡಿದ್ದೇವೆ.

SRI M. MALLIKARJUN KHARGE:- You have taken decison in February. What made you not to go for it in February, than in March, April, May? Why this delay?

SRI M.C. NANAIAH:- You please have your say. I will speak later.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅಂದರೆ, 4-5 ತಿಂಗಳುಗಳು ಬೇಕಾಗುತ್ತದೆಯೇ? ತಾವು ಪ್ರತಿಯೊಂದಕ್ಕೂ ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಹೋಗಬೇಡಿ, ತಪ್ಪುಗಳಾಗಿದ್ದರೆ ಅದನ್ನು ಸರಿ-ಪಡಿಸುವ ಬಗ್ಗೆ ಏನು ಮಾಡಬೇಕೋ ಮಾಡೋಣ. ಇದರ ಬಗ್ಗೆ ಸಚಿವ ಸಂಪುಟದಲ್ಲಿ ನಿರ್ಣಯ-ವಾಗಿತ್ತು, ನಂತರ ಇದರ ಬಗ್ಗೆ ರಚಿಸಲಾದ ಸಮಿತಿಯು ಕೊಟ್ಟಂಥ ವರದಿಯೇನಿದೆ, the Committee consisting of Additional Chief Secretary as Chairman, Secretary, Department of Law & Parliamentary Affairs, Secretary, Public works Department, Secretary, Social Welfare Department, Secretary, Department of Personal & Administrative Reforms, ಈ 4-5 ಜನರಲ್ಲಿ ಒಬ್ಬರನ್ನು ಅಧ್ಯಕ್ಷರನ್ನಾಗಿ ಮಾಡಿ ಒಂದು ಸಮಿತಿಯನ್ನು ನೇಮಿಸಿದರು. ಆ ಸಮಿತಿಯಲ್ಲಿ ಏನು ನಿರ್ಣಯ ತೆಗೆದುಕೊಂಡಿದ್ದಾರೆಂದರೆ, "The Committee has examined the matter and Submitted its report, a copy of which is annexed to this note. The committee has opined as follows:

> "There was a strong case for the Government to have issued the Government order dated 28.12.92 which may not have been adequately explained before the Karnataka Administrative Tribunal."

ಆ ಸಮಿತಿಯ ವರದಿಯಲ್ಲಿಯೇ 28-12-1992ರ ಸರ್ಕಾರದ ಆದೇಶದಲ್ಲಿ ಮೆರಿಟ್ ಇದೆ ಅದನ್ನು ಸರಿಯಾಗಿ ಕೆ.ಎ.ಟಿ. ಮುಂದೆ ನಮ್ಮವರು ವಿವರಿಸಿಲ್ಲವೆಂದು ಹೇಳಿದ್ದಾರೆ. ಇಷ್ಟಿದ್ದರೂ ಕೂಡ ತಾವು ಐದು ತಿಂಗಳವರೆಗೇಕೆ ವಿಳಂಬ ಮಾಡಿದಿರಿ? ನೀವೆ ಎಲ್ಲವನ್ನು ನೋಡಬೇಕೆಂದು ನಾನು ಹೇಳುತ್ತಿಲ್ಲ. ಯಾವುದೇ ವ್ಯಕ್ತಿಯ ಬಗ್ಗೆ ದೋಷಾರೋಪಣೆ ಮಾಡಲು ನಾನು ತಯಾರಾಗಿಲ್ಲ. ಆದರೆ ಈ ಜನಾಂಗದ ಬಗ್ಗೆ ಎಲ್ಲೋ ಒಂದು ಕಡೆ ಅಸೂಯೆ ಅಥವಾ ಜಲಸಿಯ ವಾತಾವರಣ ಇದೆ. ಆದ್ದರಿಂದ ಇವರ ಪ್ರಸಂಗಗಳಲ್ಲಿ ತಕ್ಷಣವೇ ಕ್ರಮ ತೆಗೆದುಕೊಳ್ಳುವುದಿಲ್ಲ. ಮೊನ್ನೆ ಮಂಜುನಾಥ ಕುನ್ನೂರವರು ಮಾತನಾಡುತ್ತ ಒಂದು ವಿಷಯವನ್ನು ಹೇಳಿದರು. ಹೈಕೋರ್ಟಿನಲ್ಲಿ ರಿಟ್ ಅಪೀಲ್ ಅಲೋ ಮಾಡಿದ ತಕ್ಷಣ ಮಿಂಚಿನ ವೇಗದಲ್ಲಿ ಇಪ್ಪತ್ತು ಎಕರೆ ಭೂಮಿಯನ್ನು ಹ್ಯಾಂಡ್‌ಓವರ್ ಮಾಡಿದರು.

ಆಗ ಎಷ್ಟು ಮಿಂಚಿನ ವೇಗದಲ್ಲಿ ಕ್ರಮ ತೆಗೆದುಕೊಳ್ಳಲಾಯಿತು. ಆದರೆ ಇಂಥ ಪ್ರಸಂಗಗಳಲ್ಲಿ ಮಿಂಚಿನ ವೇಗದಲ್ಲಿ ಕ್ರಮ ತೆಗೆದುಕೊಳ್ಳುವುದು ಬೇಕಾಗಿಲ್ಲವೆ? ನಮ್ಮ ರಾಜ್ಯದಲ್ಲಿನ ನಾಲ್ಕು ಕೋಟಿ ಐವತ್ತು ಲಕ್ಷ ಜನಸಂಖ್ಯೆಯಲ್ಲಿ ಒಂದು ಕೋಟಿ ಜನರು ಪರಿಶಿಷ್ಟ ಜಾತಿಯವರಿದ್ದಾರೆ. ಪ್ರಾಕ್ಟಿಕಲಿ ಪ್ರತಿ ಮೂರು ಜನರಲ್ಲಿ ಒಬ್ಬರು ಅಂದರೆ ನಾಲ್ಕನೆಯವರು ಪರಿಶಿಷ್ಟ ಜಾತಿಯ ಜನರು ಇದ್ದಾರೆ. ಅಂದರೆ ಇಷ್ಟೊಂದು ಜನರ ಭಾವನೆಗಳಿಗೆ ಧಕ್ಕೆ ಬರುತ್ತದೆ, ಅವರುಗಳ ಓಟಿನ ಆಧಾರದ ಮೇಲೆ ನಾವು ಇಲ್ಲಿ ಆರಿಸಿ ಬಂದಿದ್ದೇವೆ ಎಂಬ ಬಗ್ಗೆ ಸರ್ಕಾರ ಯೋಚನೆ ಮಾಡುವುದಿಲ್ಲವೆ? ಇವತ್ತು ದುರ್ದೈವದಿಂದ ವಿರೋಧ ಪಕ್ಷದಲ್ಲಿ ನಾನು ಮತ್ತೆ ಒಂದಿಬ್ಬರು ಅವರ ಮತಗಳಿಂದ ಆಯ್ಕೆಯಾಗಿ ಬಂದಿದ್ದೇವೆ. ಆದರೆ ತಮ್ಮ ಪಕ್ಷದಲ್ಲಿ ಸುಮಾರು ಇಪ್ಪತ್ತೆರಡು ಮಂದಿ ಆ ಜನಾಂಗದವರ ಓಟಿನಿಂದ ಆಯ್ಕೆಯಾಗಿ ಬಂದಿದ್ದಾರೆ. ಹಾಗಿದ್ದ ಮೇಲೆ ಆ ಜನರನ್ನು ರಕ್ಷಣೆ ಮಾಡುವ ನಿಟ್ಟಿನಲ್ಲಿ ನಿಮ್ಮ ಅಧಿಕಾರಿಗಳು ಕ್ರಮ ತೆಗೆದುಕೊಳ್ಳದಿದ್ದರೆ ಅವರು ಯಾವ ರೀತಿಯಿಂದ ಆ ಜನಾಂಗದವರನ್ನು ರಕ್ಷಣೆ ಮಾಡುತ್ತಾರೆ? ಪ್ರೊಗ್ರಾಮ್ ಪಾಲಿಸಿಯನ್ನು ಅಪ್‌ಹೆಲ್ಡ್ ಮಾಡುತ್ತಾರೆ? ಎಂಬ ಬಗ್ಗೆ ಯೋಚನೆ ಮಾಡಬೇಕು. ನಿಮಗೆ ಆ ಜನಾಂಗದವರ ಬಗ್ಗೆ ಪ್ರೀತಿ ಇರಬಹುದು, ಅವರನ್ನು ರಕ್ಷಣೆ ಮಾಡುವ ಬಗ್ಗೆ ಮನಸ್ಸಿರ-ಬಹುದು. ಆದರೆ ಅದನ್ನು ಕಾರ್ಯರೂಪಕ್ಕೆ ತರದಿದ್ದರೆ ಏನು ಪ್ರಯೋಜನ? ಪ್ರೀತಿ ಒಬ್ಬರ ಮೇಲೆ ಲಗ್ನ ಮತ್ತೊಬ್ಬರೊಂದಿಗೆ ಎಂಬಂತಾಗುತ್ತದೆ. ಆ ರೀತಿಯಾಗಬಾರದು. ಅಂದರೆ ಈ ಜನಾಂಗದವರ ಮೇಲೆ ಪ್ರೀತಿ ತೋರಿಸುವುದು, ನಾವು ಎಲ್ಲಾ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆಂದು ಹೇಳುವುದು. ಆದರೆ ಆ ರೀತಿ ತೆಗೆದುಕೊಂಡ ತೀರ್ಮಾನವನ್ನು ಜಾರಿಗೆ ತರುವುದಿಲ್ಲ. ಅಂಥ ಕಾರ್ಯಕ್ರಮವನ್ನು ಜಾರಿಗೆ ತಂದಿದ್ದು ಅದರಲ್ಲಿ ತಪ್ಪಿದ್ದರೆ ಅದನ್ನು ಪತ್ತೆ ಮಾಡುವುದಿಲ್ಲ. ಅದರಲ್ಲಿ-ಯೇ ಲೂಪ್‌ಹೋಲ್ಸ್‌ನ್ನು ಕನ್‌ವಿನ್ಸ್ ಮಾಡಲು ಪ್ರಯತ್ನ ಮಾಡುತ್ತಾರೆಯೇ ಹೊರತು ಈ ಜನಾಂಗದವರಿಗೆ ಸಹಾಯ ಮಾಡಲು ಹೊಸ ಕಾನೂನನ್ನು ಮಾಡಬೇಕು ಎಂಬ ಬಗ್ಗೆ ಚಿಂತನೆ ಮಾಡುವುದಿಲ್ಲ. ಕೆ.ಎ.ಟಿ.ನವರು ಸುಪ್ರೀಮ್ ಕೋರ್ಟ್‌ನವರು ಹೇಳಿದ್ದನ್ನು ಹೇಳುತ್ತಾರೆ. ತಮ್ಮಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ಉದ್ದೇಶವಿದ್ದರೂ ನಮ್ಮವರು ಆಸಕ್ತಿ ವಹಿಸಿ ಕೆಲಸ ಮಾಡಲಿಲ್ಲ. ಇದರ ಬಗ್ಗೆ ಅನೇಕ ಆದೇಶಗಳು ಇಶ್ಯೂ ಆಗಿವೆ. ಪ್ರತಿಯೊಂದರ ಬಗ್ಗೆ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ, ಇದು ಒಂದು ಭಾಗದಲ್ಲಾಗಿರುವ ಅನ್ಯಾಯ. ಮತ್ತೊಂದು ಅನ್ಯಾಯವೇನೆಂದರೆ, ಅದನ್ನು ಅವರೇ ಮಾಡಿದ್ದಾರೆಂದು ನಾನು ಹೇಳುವುದಿಲ್ಲ, ನಮ್ಮ ಸರ್ಕಾರದ ಸ್ವಲ್ಪ ಪಾಲೂ ಇದೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇದರ ಹಿಂದೆ ನಾವು 20-4-1994ರಲ್ಲಿ ಒಂದು ಆದೇಶ-ವನ್ನು ಹೊರಡಿಸಿದ್ದೆವು. ಬಹಳ ಕಷ್ಟಪಟ್ಟು ಆ ಆದೇಶವನ್ನು ಇಶ್ಯೂ ಮಾಡಿಸಿದ್ದೆವು. ಅದರಲ್ಲೇನಿದೆ-ಯೆಂದರೆ, 1979ರಲ್ಲಿ ನಮ್ಮ ರಾಜ್ಯದಲ್ಲಿ ಪರಿಶಿಷ್ಟ ಜಾತಿಯ ಜನಸಂಖ್ಯೆ ಜಾಸ್ತಿಯಾಯಿತು, ಯಾವ ರೀತಿಯಲ್ಲಿ ಜಾಸ್ತಿಯಾಯಿತೆಂದರೆ, ಏರಿಯಾ ನಿರ್ಬಂಧವೇನಿತ್ತು ಅದನ್ನು ತೆಗೆದುಹಾಕಿದರು. ಬಾಂಬೆ ಕರ್ನಾಟಕದಲ್ಲಿ, ಹೈದ್ರಾಬಾದ್ ಕರ್ನಾಟಕದಲ್ಲಿ ಬೋವಿ ಜನಾಂಗ, ಲಂಬಾಣಿ ಜನಾಂಗ, ಕೊರವ, ಕೊರಚ ಈ ಸಮಾಜದವರು ಮೊದಲು ಪರಿಶಿಷ್ಟ ಜಾತಿ ಜನಾಂಗದ ಪಟ್ಟಿಯಲ್ಲಿ ಇರಲಿಲ್ಲ. 1979

ರಲ್ಲೇನು ಅಮೆಂಡ್‌ಮೆಂಟ್ ಆಯಿತು ಆಗ ಈ ಜನಾಂಗದವರೆಲ್ಲರನ್ನು ಪರಿಶಿಷ್ಟ ಜಾತಿಯ ಪಟ್ಟಿಗೆ ಸೇರಿಸಲಾಯಿತು. ಆ ರೀತಿ ಸೇರಿಸಿದ ಮೇಲೆ 1981ರ ಸೆನ್ಸಸ್‌ನಲ್ಲಿ ಇದು ಎನುಮರೇಷನ್ ಆಗಲಿಲ್ಲ. ಆದರೆ 1991ರ ಸೆನ್ಸಸ್‌ನಲ್ಲಿ ಆ ಎಲ್ಲಾ ಸಮಾಜದವರು ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಬಂದರು. 1991ರ ಹೊಸ ಜನಗಣತಿಯ ಆಧಾರದ ಮೇಲೆ ನಮ್ಮ ರಾಜ್ಯದಲ್ಲಿ ಒಟ್ಟು ಒಂದು ಕೋಟಿ ಪರಿಶಿಷ್ಟ ಜಾತಿಯವರಿದ್ದಾರೆ. ಸರ್ಕಾರ ಇದನ್ನು ಅರ್ಥ ಮಾಡಿಕೊಂಡು 20-4-94ರಲ್ಲಿ ಒಂದು ಆದೇಶವನ್ನು ಇಶ್ಯೂ ಮಾಡಿತು. ಆದೇಶದ ಸಂಖ್ಯೆ: ಎಸ್.ಡಬ್ಲ್ಯೂ.ಡಿ. :180 : ಎಸ್.ಎ.ಡಿ. :94, ಬೆಂಗಳೂರು ದಿನಾಂಕ: 20-4-1994. ಅದರಲ್ಲೇನಿದೆಯೆಂದರೆ :

> "The Government are accordingly pleased to enhance the reservation in favour of persons belonging to SC/ST from the existing 15% and 3% to 18% and 5% respectively for purpose of both Articles 15(4) and 16(4) of the Constitution of India. This order comes into force with immediate effect. By Order and in the name of the Governor of Karnataka. Sd/- Sri Rinsanga, Secretary to Govt., Social Welfare Department."

ಈ ಆದೇಶ ಇಶ್ಯೂ ಆಯಿತು. ಕೊನೆಗೆ ಇಂದಿರಾ ಸಹಾನಿ ಕೇಸು ಬಂತೆಂದು ಇದನ್ನು ಮತ್ತೆ 15 ಮತ್ತು 3 ಪರ್ಸೆಂಟ್‌ಗೆ ರೆಡ್ಯೂಸ್ ಮಾಡಲಾಯಿತು. ಇದಕ್ಕೆ ನನ್ನ ಅಪೀಲ್ ಏನೆಂದರೆ ಅಂದು ಆ 15 ಪರ್ಸೆಂಟ್ ಪ್ಲೀ ಮೇಲೆ ತಾವು ರೆಡ್ಯೂಸ್ ಮಾಡಿದ್ದೀರಿ; ನನ್ನ ವಾದವೇನೆಂದರೆ, ಆರ್ಟಿಕಲ್ 332, 334ನಲ್ಲೂ ಜನಸಂಖ್ಯೆಯ ಆಧಾರದ ಮೇಲೆ ಪಾರ್ಲಿಮೆಂಟ್, ವಿಧಾನಸಭೆಗಳಲ್ಲಿ, ಜಿಲ್ಲಾ ಪರಿಷತ್‌ಗಳಲ್ಲಿ, ಮಂಡಲ ಪಂಚಾಯಿತಿಗಳಲ್ಲಿ ಮಿಸಲಾತಿ ಕೊಡುತ್ತಾರೆ, ಅದೇ ರೀತಿ ಎಂಪ್ಲಾಯ್-ಮೆಂಟ್‌ನಲ್ಲೂ ಕೊಡಬೇಕು ಎನ್ನತಕ್ಕದ್ದು ನಮ್ಮ ವಾದವಾಗಿದೆ. ಎಲ್ಲಾ ರಾಜ್ಯಗಳಲ್ಲಿಯೂ ಇದನ್ನು ಅನುಸರಿಸುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಮಿಸಲಾತಿ 18 ಪರ್ಸೆಂಟ್, ಮಹಾರಾಷ್ಟ್ರದಲ್ಲಿ 14 ಪರ್ಸೆಂಟ್, ಗುಜರಾತ್‌ನಲ್ಲಿ ಬೇರೆ ಪ್ರಮಾಣದಲ್ಲಿದೆ. ಇಲ್ಲಿ ರಾಜ್ಯದಿಂದ ರಾಜ್ಯಕ್ಕೆ ವ್ಯತ್ಯಾಸವಿದೆ. ಆದ್ದರಿಂದ ಇಲ್ಲಿ ಹೆಚ್ಚು ಮಾಡಲು ಜನಸಂಖ್ಯೆಯನ್ನು ಗಣನೆಗೆ ತೆಗೆದುಕೊಳ್ಳಬೇಕು. ಆರ್ಟಿಕಲ್ 15(4) ಮತ್ತು 16(4)ರ ಪ್ರಕಾರ ಗಣನೆಗೆ ತೆಗೆದುಕೊಂಡು ಮಿಸಲಾತಿಯ ಪ್ರಮಾಣವನ್ನು ಜಾಸ್ತಿ ಮಾಡಿದರೆ 1979ರಲ್ಲೇನು ಹೆಚ್ಚಿನ ಪರಿಶಿಷ್ಟ ಜಾತಿಯವರು ಪಟ್ಟಿಯಲ್ಲಿ ಬಂದಿದ್ದಾರೆ ಅವರಿಗೂ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಇರತಕ್ಕ ಪ್ರಾವಿಜನ್‌ನಲ್ಲಿಯೇ ಅವರು ಜಗಳ ಮಾಡಿಕೊಂಡು ಕುಳಿತುಕೊಳ್ಳಬೇಕಾಗುತ್ತದೆ. ಆದ್ದರಿಂದ ದಯವಿಟ್ಟು ಇದರ ಬಗ್ಗೆ ಗಮನಕೊಡಬೇಕು. ದಯಮಾಡಿ ಇಂದಿರಾ ಸಹಾನಿ ಕೇಸ್‌ನಲ್ಲಿ ಮಂಡಲ್ ಕಮೀಷನ್ ಪ್ರಕಾರ ತಾವು ಪ್ಲೀ ತೆಗೆದುಕೊಳ್ಳಲು ಹೋಗ-ಬೇಡಿ. ಆ ಮಂಡಲ್ ಕೇಸ್ ಬಂದಮೇಲೆ ಇದರಲ್ಲಿ ತಿರುವುಮುರುವಾಯಿತೆಂದು ಕೇಂದ್ರ ಸರ್ಕಾರ-ದವರು ಮತ್ತೆ ಕಾನ್‌ಸ್ಟಿಟ್ಯೂಷನಲ್ ಅಮೆಂಡ್‌ಮೆಂಟ್ ಮಾಡಿದರು. ಅದು ಯಾವುದೆಂದರೆ 77th Amendment Act of 1995. ಇದರಲ್ಲೇನು ಹೇಳುತ್ತಾರೆಂದರೆ:-

"Be it enacted by Parliament in the 46th Year of the Republic of India as follows:

> This Act may be called the Constitution 77th Amendment (Act) 1995. In Article 16 of the Constitution, after Clause-4, the following Clause shall be inserteed, namely, -
>
> 16(4) (a) - Nothing in this Article shall prevent the State Government from making any provision for reservation in matters of promotion to any class or classes of posts in the services under the State in favour of the SC/ST which in the opinion of the State are not adequately represented in the services under the State."

Sir, the Constitutional provision is very clear and it is a mandatory provision. If there is inadequate representation of the SC/ST under the State services, according to this Article, you can issue a fresh Government Order asking them to fill up the vacancies as per the population norms in proportion to their population. ಆದ್ದರಿಂದ 23 ಪರ್ಸೆಂಟ್ ಎಂದೇನು ಬರುತ್ತದೆ ಅದರ ಪ್ರಕಾರ ನೇಮಕ ಮಾಡಿಕೊಳ್ಳಲು ಅವಕಾಶವಿದೆ. ತಮಗೆ ಈ ಹೊಸ ಅಸ್ತ್ರವೂ ಬಂದಿದೆ. ಇದನ್ನು ಉಪಯೋಗ ಮಾಡಿಕೊಂಡು ಆ ಜನಾಂಗದವರಿಗಾಗುತ್ತಿರುವ ಅನ್ಯಾಯವನ್ನು ತಡೆಗಟ್ಟಬೇಕು. ಎಲ್ಲೆಲ್ಲಿ ಕೇಸುಗಳಿವೆ ಅದಕ್ಕೆ ಡಿಫೆಂಡ್ ಮಾಡಬೇಕು. ಒಂದು ವೇಳೆ ಅಲ್ಲಿ ಲಕುನ ಇದ್ದರೆ ಇಲ್ಲಿ ಸರಿಪಡಿಸತಕ್ಕ ವ್ಯವಸ್ಥೆ ಮಾಡಬೇಕು. ಆದ್ದರಿಂದ ಇದಕ್ಕೆ ತಕ್ಷಣದ ಪರಿಹಾರವೆಂದರೆ ಮುಖ್ಯ ಕಾರ್ಯದರ್ಶಿ, ಸಂಬಂಧಪಟ್ಟ ಕಾರ್ಯದರ್ಶಿಯವರನ್ನು ಒಳಗೊಂಡಂತೆ ಅಫಿಶಿಯಲ್ ಸಮಿತಿಯನ್ನು ನೇಮಕ ಮಾಡಬೇಕು. ಸಂಬಂಧಪಟ್ಟ ರೂಲ್ಸ್ ಮತ್ತು Actನ್ನು ಕೂಡಲೆ ಅಮೆಂಡ್‌ಮೆಂಟ್ ಮಾಡಿ ಹೊಸ ಆಜ್ಞೆಯನ್ನು ಹೊರಡಿಸಬೇಕೆಂದು ಹೇಳಿ ತಮ್ಮ ಮೂಲಕ ಅವರಲ್ಲಿ ಕೇಳಿಕೊಳ್ಳುತ್ತೇನೆ.

1.50 ಪಿ.ಎಂ

+ ಶ್ರೀ ಎಂ.ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೇ, ಮಾನ್ಯ ಮಿತ್ರರಾಗಿರತಕ್ಕ ಖರ್ಗೆಯವರು ಪ್ರಸ್ತಾಪಿಸಿರತಕ್ಕ ವಿಚಾರ,

> "to protect the interest of the Scheduled Caste/Scheduled Tribe employe- es by filling up vacancies in all categories and in all the Departments and to maintain in the reservation even in promotional vacancies under Article 16(4) (A) of the Indian Cinstitution as amended by the 1977 Amendment Act of 1995

which received the assent of the President on 17-6-1995."

ಮಾನ್ಯ ಅಧ್ಯಕ್ಷರೇ, ಮಾನ್ಯ ಖರ್ಗೆಯವರು ಈ ಒಂದು ಮೀಸಲಾತಿಯ ಬಗ್ಗೆ ಹಿಸ್ಟಾರಿಕಲ್ ಬ್ಯಾಕ್‌ಗ್ರೌಂಡ್ ಅನ್ನು ಕೊಟ್ಟಿದ್ದಾರೆ. ಮೊದಲ ಬಾರಿಗೆ ನಮ್ಮ ರಾಜ್ಯದಲ್ಲಿ ಈ ಒಂದು ಮೀಸಲಾತಿ ಬಂದಿರತಕ್ಕದ್ದು, ಶ್ರೀಮಾನ್ ದೇವರಾಜ್ ಅರಸ್‌ರವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭ-ದಲ್ಲಿ. ದಿನಾಂಕ 27.4.78ರಂದು ಮೀಸಲಾತಿಯನ್ನು ಪ್ರಮೋಷನ್‌ಗೆ ಕೊಡಬೇಕೆಂದು ಆಜ್ಞೆಯನ್ನು ಪ್ರಥಮ ಬಾರಿಗೆ ಹೊರಡಿಸಲಾಯಿತು. ನಾವು ಈ ಒಂದು ವಿಚಾರವನ್ನು ಓದುವಾಗ, ಆರ್ಟಿಕಲ್ 16(4), ಯಾವುದಿದೆ, ಈ ಆರ್ಟಿಕಲ್ 16(4)ನಲ್ಲಿ ಮೀಸಲಾತಿಯನ್ನು ಮಾಡಬೇಕೆಂಬುದರ ವಿಚಾರದಲ್ಲಿ ಏನು ಹೇಳುತ್ತದೆ ಅಂದರೆ,

> "Nothing in this Article shall prevent the State from making any provision for the reservation of appointments of posts in favour of any backward class of citizens." Article 16(4) is very specific in favour of any backward class of citizens which in the opinion of the State is not adequately represented in the services under the State."

So, backward class under Article 16(4) includes Scheduled Caste/ Scheduled Tribe. This is the basic promise under which we should proceed. ಈ ಸೆಕ್ಷನ್ 16(4)ಗೆ ಸಂಬಂಧಪಟ್ಟ ಹಾಗೆ 1978ನೇ ಇಸವಿಯಲ್ಲಿ ಪ್ರಥಮ ಬಾರಿಗೆ ಶ್ರೀಮಾನ್ ದೇವರಾಜ್ ಅರಸ್‌ರವರು ಮೀಸಲಾತಿ ಜಾರಿಗೆ ತಂದರು. The Government order reads:

> "The question of making reservations under Article 16(4) of the Constitution of India, in promotional vacancies."

Article 16(4) is only in respect of Recruitment. Let me make it very clear. Yet, there was a departure. ಆ ಸಂದರ್ಭದಲ್ಲಿ ಮಾನ್ಯ ದೇವರಾಜ್ ಅರಸ್‌ರವರು ಇದನ್ನು ಕೊಡಬೇಕು ಎನ್ನತಕ್ಕಂಥ ತೀರ್ಮಾನವನ್ನು ಮಾಡಿ, ಅವರು ಏನು ಮಾಡಿ-ದರು ಎಂದರೆ,

> "The question of making reservations under Article 16(4) of the Constitution of India in promotional vacancies has been engaging the attention of the Government for sometime to come. After considering all the aspects of the matter, the Government have decided to make reservations in favour of persons belonging to Scheduled Caste/Scheduled Tribes in promotional vacancies also to the extent indicated in the succeeding paragraphs. Government are accordingly pleased to

direct that there shall be reservation for persons belonging to Scheduled Caste/Scheduled Tribes at 15% and 3% respectively of vacancies to be filled by promotion in all the cadres upto the inclusive of the lowest category of Clause-I post in which there is no element of direct recruitment, such an element of direct recruitment does not exceed 60.23%."

Then I come to Section 5. This is all the more important.

"If on any occasion of promotion, qualified and suitable Scheduled Caste/Scheduled Tribe candidate for whom the vacancies are reserved are not available, such vacancies shall be filled up by promotion of qualified and suitable persons from amongst others in accordance with the Rules of Recruitment. The vacancies lost to the persons belonging to Scheduled Caste/Scheduled Tribes on account of such promotions shall not be carried forward and the future vacancies shall be filled up according to the rotation as indicated in the Annexure."

This is the Government Order of 1978 which is still in force and even on date, this order is in force. For the first time in 1992, 1978 ರಿಂದ 1992ನೇ ಇಸವಿಯವರೆಗೆ ಈ ಸರ್ಕಾರಿ ಆದೇಶದ ಪ್ರಕಾರವೇ ಬಡ್ತಿಯಲ್ಲಿ ಮೀಸಲಾತಿಯನ್ನು ಕೊಟ್ಟು ಕೊಂಡೇ ಬಂದಿದ್ದಾರೆ. 1992ರಲ್ಲಿ ಏನು ಆಯಿತು ಅಂತೆಂದರೆ, ಆ ಸಂದರ್ಭದಲ್ಲಿ ಬ್ಯಾಕ್-ಲಾಗ್ ಎಂದು ಹೇಳುತ್ತಾ ಇರತಕ್ಕಂಥದ್ದು ಪ್ರಥಮ ಬಾರಿಗೆ ಜಾರಿಗೆ ಬಂದಿತು. In 1992, the question of backlog came for the first time. ಪ್ಯಾರಾಗ್ರಾಫ್ ನಂಬರ್ 6 ಪ್ರಕಾರ ಅವರು ಏನು ಹೇಳುತ್ತಾರೆ ಅಂದರೆ, ಆ ವರ್ಷ ಫಿಲಪ್ ಮಾಡಿರತಕ್ಕದ್ದನ್ನು, ಷೆಡ್ಯೂಲ್ಡ್ ಕಾಸ್ಟ್/ಷೆಡ್ಯೂಲ್ಡ್ ಟ್ರೈಬ್ಸ್‌ನವರು ಸಿಕ್ಕದೇ ಹೋದರೆ ಬೇರೆ ಕ್ಯಾಟಗರೀಸ್‌ನಿಂದ ಅದನ್ನು ಫಿಲಪ್ ಮಾಡಿ ಆದಮೇಲೆ It shall not be carried forward to the future years - in para 6, it has been made very clear in 1978 during the period of Sri Devaraj Urs. In 1992, one Government order was issued. ಆ ಸರ್ಕಾರಿ ಆದೇಶ ಈ ರೀತಿ ಇದೆ. ನಾನು ಏಕೆ ಇದನ್ನು ಹೇಳುತ್ತಿದ್ದೇನೆ ಅಂದರೆ, ನಾವು ಈ ಸರ್ಕಾರ ಇದನ್ನು ಮಾಡಲೇ-ಬೇಕು ಎನ್ನುವುದು ನಮ್ಮ ಚಿಂತನೆಯಾಗಿದೆ, But series of Supreme Court decisions have come. When the question of backlog arose and when the question of 15% and 3% arose, what the Supreme Court said was, it shall in no case exceed the amount specified in the Government Order. Secondly, under no circumstances, the reservation shall exceed more than 50%. This is Indra Sahani's case. So, in 1992, the

order was issued and an amendment was brought to the General Recruitment Rules. This is on 1.4.1992. This order reads thus:

> "Amendment to Rule 8: To Rule No. 8 of the Karnataka Civil Service Rules 1977, the following provisio shall be inserted namely: Provided notwithstanding anything in the Rules of Recruitment specially made in respect of any service or force, the backlog vacancies in the promotional quota shall be determined and implemented with effect from 27-4-1978".

On that day, the Cabinet in their wisdom, decided that the Backlog vacancies should be given. The Government Order of 1971 is the original order. It does not provide for any such thing at all. Secondly, Backlog vacancies means the extent of number of vacancies available under the roseter system upto the level of lowest category in Group A post calculated from 27th April 1978. ಮಾನ್ಯ ಅಧ್ಯಕ್ಷರೇ, ಈ ಒಂದು ಆರ್ಡರ್ ಅನ್ನು 1992ರಲ್ಲಿ ಮಾಡಿಯಾದ ಮೇಲೆ, ಬ್ಯಾಕ್‌ಲಾಗ್ ವೆಕೆನ್ಸೀಸ್ ಅವರಿಗೆ ಎಷ್ಟು ಬಂತು ಎಂದು ಆಯಿತು. ಅವರು ಯಾವುದನ್ನು ಬ್ಯಾಕ್‌ಲಾಗ್ ವೆಕೆನ್ಸಿ ಎಂದು ಹೇಳುತ್ತಾರೆ ಎಂದರೆ, 1978ನೇ ಇಸವಿಯಿಂದ 1992ನೇ ಇಸವಿಯವರೆಗೆ, ಆ ಸಂದರ್ಭದಲ್ಲಿ ಪ್ರಮೋಷನಲ್ ವೆಕೆನ್ಸೀಸ್‌ಗಳಿಗೆ ಷೆಡ್ಯೂಲ್ಡ್ ಕಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್‌ಗಳಿಗೆ ಶೇಕಡ 15 ಮತ್ತು ಶೇಕಡ 3ರಷ್ಟು ಮೀಸಲಾತಿ ಸಿಗದೇ ಹೋಗಿದ್ದರೆ, ಟೋಟಲ್ ನಂಬರ್ ಆಫ್ ವೆಕೆನ್ಸೀಸ್ ಎಷ್ಟು ಉಂಟು, ಅದರಲ್ಲಿ ಬಂದಿರತಕ್ಕಂಥದ್ದು ಎಷ್ಟು ಬಾಕಿ ಇತ್ತು, ಅದನ್ನು ಫಿಲಪ್ ಮಾಡಬೇಕು ಎನ್ನುವುದಕ್ಕೋಸ್ಕರ ಈ ಒಂದು ಹೊಸ ರೂಲ್ ಅನ್ನು 1992ರಲ್ಲಿ ತಂದರು. ಇದರ ಪ್ರಕಾರವೂ ಬಡ್ತಿಯನ್ನು ಕೊಟ್ಟು-ಕೊಂಡು ಬಂದರು. ಅದರ ಮಧ್ಯದಲ್ಲಿ ಈ ಸರ್ಕಾರಿ ಆದೇಶನ್ನು ನ್ಯಾಯಾಲಯದಲ್ಲಿ ಚಾಲೆಂಜ್ ಮಾಡಲಾಯಿತು. This Government order was challenged and there were four petition, not one, before the Tribunal. The four petitions are Basappa Vs. State, Dr.Nagaraj of Sericulture Department, Shivakumar Vs. State and another case. 4 cases came up. In all the four cases, the common issue for consideration was this Notification or amending the Rule in the year 1982. That particular amendment of the Rule was under attack. ಮಾನ್ಯ ಅಧ್ಯಕ್ಷರೇ, ಮಾನ್ಯ ಖರ್ಗೆಯವರು ಇದರ ಬಗ್ಗೆ ಮಾತನಾಡತಕ್ಕ ಸಂದರ್ಭದಲ್ಲಿ ನಾಗರಾಜ್ ಎಂಬುವವರಿಗೆ ಸಂಬಂಧಪಟ್ಟಿರತಕ್ಕ ಕೇಸ್ ಬಗ್ಗೆ ಉಲ್ಲೇಖಿಸಿದರು. ಅವರು ಹೇಳಿದಂತೆ, I did admit in that case, the counter was not filed. But there were four petitions pertaining to Sericulture Department, Secretariat Employees and some others. In all, four petitions were there before the Tribunal. In all the four petitions, the

Government Order issued in 1992, amending the Rule was under attack. I would like to bring to your kind notice an order of the KAT. This is pertaining to Shivakumar. There were four petitions in which 1992 Government order was under attack. The Government has filed its counter. In all the three cases, the counter was filed because similar issue was involved.

> "It is submitted that the amendment to Rule 8 of the General Recruitment Rules doesnot take away the rights of the Applicant. This Amendment to Rule would not take away the right of the Applicants because they come under the General category."

Promotions given in non-reserved categories, when SC/ST eligible candidates were not available, have not been reverted. ಅವರಿಗೆ ಸಿಗಬೇಕಾಗಿರತಕ್ಕದ್ದನ್ನು ರಿವರ್ಟ್ ಮಾಡಲಿಲ್ಲ. The Notification under which amendment to Rule 8 is made, is only to facilitate proper representation of a section of the people who have not been properly represented in the State civil services in exercise of the powers under Art.16(4) of the Constitution. Thus, looking at any angle, there is no substance in the contentions of these Applicants in these applications and the applications are liable to be dismissed. This is the stand we have consistently taken in three petitions. In one Petition it has not been filed. But all these matters came up for argument under one issue: Wheter the amendment of Rule 8 providing for backlog vacancies is justified or not. This is all under issue. ಇದೇ ಕೇಸ್‌ನಲ್ಲಿ ನಾವು ಈಗ ರಿಟ್ ಪಿಟಿಷನ್‌ನಲ್ಲಿ ನಮ್ಮ ಅಬ್ಜೆಕ್ಷನ್ ಫೈಲ್ ಮಾಡಿದಾಗ The Court passed an order in this also, which has been taken up by way of SLP. The Applicants questioned the validity of the rules. This is in relation to Shivakumar Vs. others. They have also preferred an Appeal. The matter is pending in the Supreme Court again.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಫೆಬ್ರುವರಿಯಲ್ಲಿ ಇದು ಆಯಿತು, ಆದ ಮೇಲೆ ತಾವು ಅಪೀಲ್ ಫೈಲ್ ಮಾಡಿದ ಡೇಟ್ ಯಾವುದು?

ಶ್ರೀ ಎಂ.ಸಿ. ನಾಣಯ್ಯ:- ನಾಗರಾಜ್ ಕೇಸ್‌ಗೆ ಸಂಬಂಧಪಟ್ಟ ಹಾಗೆ ಹೇಳುತ್ತೇನೆ. Some bad impression has been created.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಒಂದು ಕೇಸ್‌ನಲ್ಲಿ ಅಪೀಲ್ ಫೈಲ್ ಮಾಡಿದರೂ ಅಷ್ಟೆ, ಮೂರು ಕೇಸ್‌ನಲ್ಲಿ ಅಪೀಲ್ ಮಾಡಿದರೂ ಅಷ್ಟೆ. That should not be there. I want justice.

SRI M.C. NANAIAH:- What you said was: ಎಲ್ಲೋ ಒಂದು ಕಡೆ ಈ ಜನಾಂಗಕ್ಕೆ ಮೋಸ ಮಾಡಲಿಕ್ಕೆ, ಅವರಿಗೆ ಸಿಗತಕ್ಕಂಥ ಆ ಒಂದು ಸೌಲಭ್ಯವನ್ನು ತಪ್ಪಿಸಲಿಕ್ಕೆ ಪ್ರಯತ್ನ ಎಂದು ಹೇಳಿದಿರಿ. ಅದಕ್ಕೋಸ್ಕರ ನಾನು ಹೇಳಿದೆ.

MR. SPEAKER:- To enable you to make the stand of the Government very clear, can we not meet at 3.00 p.m? ಏಕೆಂದರೆ ಕಾಲಿಂಗ್ ಅಟೆನ್‌ಷನ್ ಬಾಕಿ ಇದೆ. Few members wanted to raise one or two small things also. Because they have been sitting.

SRI M.C. NANAIAH:- As the Hon'ble Speaker directs.

SRI M. MALLIKARJUNA KHARGE:- I am ready to hear. ಅದರ ಬಗ್ಗೆ ಲೇಟೆಸ್ಟ್ ಅಮೆಂಡ್‌ಮೆಂಟ್ ಬಂದಿದೆ. ಅದರ ಬಗ್ಗೆ ಮತ್ತೆ ಏನು ಮಾಡುತ್ತಾರೊ ಸೋಡ ಬೇಕಾಗುತ್ತದೆ

ಅಧ್ಯಕ್ಷರು:- 3 ಗಂಟೆಗೆ ಕಂಟಿನ್ಯೂ ಮಾಡೋಣ.

SRI M. MALLIKARJUNA KHARGE:- Agreed.

MR. SPEAKER:- We will now adjourn and meet at 3.00 o'clock.

(The House adjourned at 2.03 p.m to meet again at 3.00 p.m)

(ಸಭೆಯು ಪುನಃ ಮಧ್ಯಾಹ್ನ 3-20 ಗಂಟೆಗೆ ಸಮಾವೇಶಗೊಂಡಿತು.)

(ಅಧ್ಯಕ್ಷರ ಪೀಠದಲ್ಲಿ ಉಪಾಧ್ಯಕ್ಷರಾದ ಶ್ರೀ ಚಂದ್ರಶೇಖರ ಮಾಮನಿ ಅವರು ಉಪಸ್ಥಿತರಿದ್ದರು)

+ ಶ್ರೀ ವೈ. ರಾಮಕೃಷ್ಣ (ಆನೇಕಲ್):- ಮಾನ್ಯ ಉಪಾಧ್ಯಕ್ಷರೇ, ನಿಮ್ಮ ಈಗಿರತಕ್ಕಂಥ ಸರ್ಕಾರ ಮತ್ತು ಹಿಂದಿದ್ದಂಥ ಕಾಂಗ್ರೇಸ್ ಸರ್ಕಾರ ಇವೆರಡೂ ಸೇರಿ ಎಸ್.ಸಿ. ಮತ್ತು ಎಸ್.ಟಿ.-ಯವರಿಗೆ ಬರಬೇಕಾದಂಥ ಕೋಟಾವನ್ನು ಕೊಟ್ಟಿಲ್ಲ. ಏಕೆ ಕೊಟ್ಟಿಲ್ಲ? ಮೊಯಲಿಯವರು ಮೊದಲು ಏನು ಮಾಡಿದರು ಎಂದರೆ taking into consideration the total number of SC/STs that are available ಇವರು 18 ಪ್ಲಸ್ 5 ಶೇಕಡ 23 ಫಿಕ್ಸ್ ಮಾಡಿದ್ದರು. ಕೊನೆಯಲ್ಲಿ ಅವರು ಅಧಿಕಾರ ಬಿಟ್ಟು ಹೋಗುವಾಗ ಏನು ಮಾಡಿದರು ಎಂದರೆ ಅದನ್ನು ಪುನಃ ಶೇಕಡ 15+3ಕ್ಕೆ ರೆಡ್ಯೂಸ್ ಮಾಡಿದರು. ಯಾವ ಕನ್ಸಿಡರೇಷನ್ ಮೇಲೆ ಇದನ್ನು ರೆಡ್ಯೂಸ್ ಮಾಡಿದರು ಎಂದು ನಮಗೆ ಗೊತ್ತಿಲ್ಲ. ಅದನ್ನು ಕೇಳಿದರೆ ಏನು ಹೇಳುತ್ತಾರೆಂದರೆ, ಮೀಸಲಾತಿ ಪ್ರಮಾಣ ಒಟ್ಟು ಶೇಕಡ 50 ಇರಬೇಕೆಂದು ಸರ್ವೋಚ್ಚ ನ್ಯಾಯಾಲಯದಿಂದ ಯಾವಾಗ ತೀರ್ಪು ಬಂತು ಅದಕ್ಕೆ ಪ್ರ-ಪೋರ್ಶನೇಟ್ ಅಗಿ ಇದನ್ನು ಕಡಿಮೆ ಮಾಡಿದ್ದೇವೆಂದು ಹೇಳಿದ್ದಾರೆ. Is it legally justifiable? ತಾವು ಕಾನೂನು ಮಂತ್ರಿಗಳಾಗಿದ್ದೀರಿ. Reservation must be given consideration. ಆಮೇಲೆ ಉಳಿದಿದ್ದನ್ನು ಶೇಕಡ 50ರಲ್ಲಿ ಮೈನಸ್ ಮಾಡಿ ನೀವು ಮಾಡಬೇಕು. ಅದು

ಬಿಟ್ಟುಬಿಟ್ಟು ನೀವು ಷೆಡ್ಯೂಲ್ಡ್ ಕಾಸ್ಟ್‌ಗೆ ಇದ್ದಂಥ ರಿಸರ್ವೇಷನನ್ನೇ ಕಡಿಮೆ ಮಾಡಿತಕ್ಕಂಥದ್ದು ನ್ಯಾಯವೇ? ದಯವಿಟ್ಟು ಇದನ್ನು ಪುನಃ ರೆಸ್ಟೋರ್ ಮಾಡುತ್ತೀರೋ? Because their population now according to the present census is about one crore. ಅದನ್ನು ಗಣನೆಗೆ ತೆಗೆದುಕೊಂಡು ಈ ಹಿಂದೆ ಇದ್ದಂಥ 18 ಪ್ಲಸ್ 5 ಅಂದರೆ 23, ಈ ಶೇಕಡ 23 ಮಿಸಲಾತಿಯನ್ನು ನೀವು ಮಾಡುತ್ತಿರೋ? ಎರಡನೆಯದು ಏನೆಂದರೆ 77ನೇ ಅಮೆಂಡ್‌ಮೆಂಟ್ ಇದು 17ನೇ ಜೂನ್ 1995ರಲ್ಲಿ ರಾಷ್ಟ್ರಾಧ್ಯಕ್ಷರ ಒಪ್ಪಿಗೆಗಾಗಿ ಬಂದಿತ್ತು. ತಾವು ಇದುವರೆಗೂ ಕೂಡ ಇದನ್ನು ಕಾನ್‌ಫಿಡೆನ್ಸ್‌ಗೆ ತೆಗೆದುಕೊಂಡು ಈ 77ನೇ ಅಮೆಂಡ್‌ಮೆಂಟ್‌ನ್ನು, ಆರ್ಟಿಕಲ್ 16:4 'ಎ' ಏನು ಇದೆ ಅದನ್ನು ಅಳವಡಿಸಿಕೊಂಡು ನೀವು ನೋಟಿಫಿಕೇಶನ್ಸ್, ರೂಲ್ಸ್ ಅಂಡ್ ರೆಗ್ಯುಲೇಶನ್ಸ್ ಮಾಡಬಹುದಾಗಿತ್ತು. ಏಕೆಂದರೆ ತಮಗೆ ಗೊತ್ತಿದ್ದ ಹಾಗೆ ಇವತ್ತು ಸುಪ್ರೀಂ ಕೋರ್ಟಿನಲ್ಲಿ, ಹೈಕೋರ್ಟಿನಲ್ಲಿ. ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯುನಲ್‌ನಲ್ಲಿ ಹೀಗೆ ಎಲ್ಲೆಲ್ಲೂ ಕೂಡ ಈ ಕೇಸ್ ನಡೆಯುತ್ತಿದೆ. This amendment came into force on 17th June, 1996. ಒಂದು ವೇಳೆ ಇವತ್ತು ಏನಾದರೂ ಇದಕ್ಕೆ ವಿರುದ್ಧವಾಗಿ ಜಡ್ಜ್‌ಮೆಂಟ್ ಅಗುವುದಾದರೆ ನಾಳೆಯ ದಿವಸ ಸರ್ಕಾರದ ಗೌರವ ಏನಾಗುತ್ತದೆ? ದಯವಿಟ್ಟು ಇದನ್ನು ಆಲೋಚನೆ ಮಾಡಿ ಹೇಳಿ ಆದ್ದರಿಂದ ಕೊನೆಯ ಪಕ್ಷ ತಾವು ಅವರಿಗೆ ಹೇಳುಬಹುದಾಗಿತ್ತು. ಇದರ ಪ್ರಕಾರ ನಾವು ರೂಲ್ಸ್‌ನ್ನು ಫ್ರೇಂ ಮಾಡುತ್ತೇವೆ ಅಲ್ಲಿಯ ತನಕ ನಿಮ್ಮ ಲಾಯರ್‌ಗಳಿಗೂ ನಿಮ್ಮ ಪೇಪರ್‌ಗಳಿಗೂ ಹೇಳಿ ಇದ್ದಂಥ ಕೇಸುಗಳನ್ನು ನಿಲ್ಲಿಸಿ ಎಂದು ತಾವು ಅವರಿಗೆ ಹೇಳಬಹುದಾಗಿತ್ತು. ಅದಕ್ಕೋಸ್ಕರವಾಗಿ ಇದನ್ನು ಕೂಡಲೇ ಒಂದು ಅಫಿಶಿಯಲ್ ಕಮಿಟಿಯನ್ನು ಮಾಡಿ ನಿಮ್ಮ ರೂಲ್ಸ್ ಅಂಡ್ ರೆಗ್ಯುಲೇಶನ್ಸ್ ಮಾಡಿ ಮುಂದಿರತಕ್ಕಂಥ ಕೋರ್ಟ್‌ಗಳಿಗೆ ಆದೇಶ ಕಳುಹಿಸಿಕೊಡುತ್ತೀರೋ?

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಉಪಾಧ್ಯಕ್ಷರೇ, ಸದನ ಮುಂದೂಡುವುದಕ್ಕೆ ಮೊದಲು, ಕರ್ನಾಟಕ ಅಡ್ಮಿನಿಸ್ಟೇಟೀವ್ ಟ್ರಿಬ್ಯುನಲ್‌ನಲ್ಲಿ 1992ನೇ ಇಸವಿಯಲ್ಲಿ ಈ ಬ್ಯಾಕ್‌ಲಾಗನ್ನು ತುಂಬಲಿಕ್ಕೆ ತೆಗೆದುಕೊಂಡಿರತಕ್ಕಂಥ ಕ್ರಮ ಯಾವುದು ಇತ್ತು. ಸರ್ಕಾರದವರು ಅದರ ಬಗ್ಗೆ ಆಡಳಿತಾತ್ಮಕವಾಗಿ ಇರತಕ್ಕಂಥ ಆಜ್ಞೆಯನ್ನು ಅವರು ಏನು ಹೊರಡಿಸಿದರೋ ಅ ಒಂದು ಆಜ್ಞೆಯ ಸಿಂಧುತ್ವವನ್ನು ಕರ್ನಾಟಕ ಅಡ್ಮಿನಿಸ್ಟ್ರೇಟೀವ್ ಟ್ರಿಬ್ಯುನಲ್‌ನಲ್ಲಿ ಅಗ್ರೀವ್ಡ್ ಪಾರ್ಟೀಸ್ ಯಾರು ಇದ್ದಾರೆ, ಅವರು ಸೆಕ್ರೆಟರಿಯೆಟ್ ಎಂಪ್ಲಾಯಿಸ್ ಇರಬಹುದು, ಸೆರಿಕಲ್ಚರ್ ಎಂಪ್ಲಾಯಿಸ್ ಇರಬಹುದು other than SC/STs, ಜನರಲ್ ಕ್ಯಾಟಗರೀಸ್ ಇರಬಹುದು, ಬಾಕಿ ಉಳಿದ ಕಮ್ಯುನಿಟೀಸ್ ಇರಬಹುದು, ಅವರು ಅದನ್ನು ಚಾಲೆಂಜ್ ಮಾಡುತ್ತಾರೆ, ನಮ್ಮ ಸರ್ಕಾರದ ಮೇಲೆ ಮಾನ್ಯ ಖರ್ಗೆಯವರ ಒಂದು ಆರೋಪ ಯಾವುದು ಎಂದರೆ, ಈ ಅರ್ಜಿಗಳನ್ನು ಕೆ.ಎ.ಟಿ.ಯಲ್ಲಿ ಸಲ್ಲಿಸಿದ ಮೇಲೆ, ಸರ್ಕಾರ, ಸರ್ಕಾರದ ಅಧಿಕಾರಿಗಳು, ಡಿ.ಪಿ.ಎ.ಆರ್.ರವರು ನಿಷ್ಕ್ರಿಯರಾದರು. ಯಾವ ಒಂದು ಪ್ರತಿ ಹೇಳಿಕೆಯನ್ನು ಅಲ್ಲಿ ಸಲ್ಲಿಸಬೇಕಾಗಿತ್ತೋ ಆ ಪ್ರತಿ ಹೇಳಿಕೆಯನ್ನು ಸಲ್ಲಿಸದೆ ಇದ್ದುದರಿಂದ ಆ ತೀರ್ಮಾನ ಸರ್ಕಾರಕ್ಕೆ

ವಿರುದ್ಧವಾಯಿತು. ಆ 1992ರ ಸರ್ಕಾರಿ ಆಜ್ಞೆಯನ್ನು ಅವರು ಅನೂರ್ಜಿತಗೊಳಿಸಬೇಕಾಗಿ ಬಂತು, ಆದ್ದರಿಂದ ಇಲ್ಲಿ ಸರ್ಕಾರ ಎಷ್ಟರಮಟ್ಟಿಗೆ ತನ್ನ ಪಾಲಿನ ಕರ್ತವ್ಯವನ್ನು ಈ ವರ್ಗದ ಜನರಿಗೆ ಕೊಡು-ವಲ್ಲಿ ಕೆಲಸ ಮಾಡಬೇಕಾಗಿತ್ತು ಆ ಕೆಲಸವನ್ನು ಮಾಡಲಿಲ್ಲ ಎನ್ನತಕ್ಕಂಥ ಒಂದು ಆರೋಪವನ್ನು ಸರ್ಕಾರದ ಮೇಲೆ ಮಾಡಿದ್ದಾರೆ. ಆ ಆರೋಪವನ್ನು ನಾನು ತೀವ್ರವಾಗಿ ವಿರೋಧ ಮಾಡುತ್ತೇನೆ. ಅದನ್ನು ಅಲ್ಲಗಳೆಯುತ್ತೇನೆ. ಕಾರಣ ಆ ಸಂದರ್ಭದಲ್ಲಿ 4 ರಿಟ್ ಪೆಟಿಷನ್‌ಗಳನ್ನು, 4 ಅರ್ಜಿಗಳನ್ನು ಕೆ.ಎ.ಟಿ. ಮುಂದೆ ಅವರು ಹಾಕಿದರು. ಅದರಲ್ಲಿ ಒಂದು ಶಿವಕುಮಾರ್‌ಗೆ ಸಂಬಂಧಪಟ್ಟ ಹಾಗೆ, ಇನ್ನೊಂದು ನಾಗರಾಜ್‌ಗೆ ಸಂಬಂಧಪಟ್ಟ ಹಾಗೆ, ಇನ್ನೊಂದು ಬಸಪ್ಪ ಎನ್ನುವವರಿಗೆ ಸಂಬಂಧಪಟ್ಟ ಹಾಗೆ, ಇನ್ನು ಒಂದು ಹೆಸರು ನನ್ನ ಹತ್ತಿರ ಇಲ್ಲ. ಈ 4 ಅರ್ಜಿಗಳಲ್ಲಿಯೂ the common issue under consideration was the validity of the backlog order issued in the year 1992. ಆ ಮೂರು ರಿಟ್ ಅರ್ಜಿಗಳಲ್ಲಿ ಕೂಡ ನಾವು ಸರ್ಕಾರದ ವತಿಯಿಂದ ನಮ್ಮ ಕೌಂಟರುಗಳನ್ನು ಫೈಲ್ ಮಾಡಿದ್ದೇವೆ. In all the 3 writ petitions, we have filed the counter affidavits. In one case, yes, we did not file. However, the principle involved in rendering of judgement and issue involved were one and the same. Absolutely there was no difference between one petition and another petition. ಶಿವಕುಮಾರ್‌ರವರ ಕೇಸ್‌ನಲ್ಲಿ ಸರ್ಕಾರದವರು ಫೈಲ್ ಮಾಡಿರತಕ್ಕಂಥ ಕೌಂಟರ್‌ನಲ್ಲಿ ನಾವು ಏನು ಹೇಳಿದ್ದೇವೆಂದರೆ ನಾವು ಈ ರಿಕ್ರೂಟ್‌ಮೆಂಟ್ ರೂಲ್ಸ್ 8ಕ್ಕೆ ಒಂದು ತಿದ್ದುಪಡಿಯನ್ನು ತರುವುದರ ಮುಖಾಂತರ 1992ನೆ ಇಸವಿಯಲ್ಲಿ ನಾವು ಯಾವ ಒಂದು ಆಜ್ಞೆಯನ್ನು ತಂದೆವು ಆ ಆಜ್ಞೆ ಯಾವ ಕಾಲಕ್ಕೂ ಕೂಡ ಇತರ ವರ್ಗದಲ್ಲಿ ಇರತಕ್ಕಂಥ ಸಿಬ್ಬಂದಿಗಳಿಗೆ ಅವರ ಮುಂಬಡ್ತಿಗೆ ಅದರಿಂದ ಏನೂ ತೊಂದರೆ ಆಗುವುದಿಲ್ಲ. ಎರಡನೆಯದಾಗಿ ಸರ್ಕಾರ ಈ ಕಾರ್ಯಕ್ರಮವನ್ನು ಕೈಗೊಂಡ ಕಾರಣವೇನು? ಈ ವರ್ಗದ ಅಂದರೆ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಸಿಬ್ಬಂದಿಯವರು ಯಾರು ಇದ್ದಾರೆ ಅವರಿಗೆ ಮುಂಬಡ್ತಿಯಲ್ಲಿ ಅವಕಾಶವನ್ನು ಕೊಡಬೇಕು ಎಂಬ ದೃಷ್ಟಿಯಿಂದ ಅವರನ್ನು ಆಯಾಯ ವರ್ಗಗಳಿಗೆ ಅವರಿಗೆ ಸರಿ ಸಮಾನವಾಗೀರತಕ್ಕಂತಹ ಒಂದು ರೆಪ್ರೆಸೆಂಟೇಷನ್ ಕೊಡಬೇಕು ಎಂದು ಹೇಳುತ್ತಾ ಇರತಕ್ಕಂತಹ ಹಿನ್ನಲೆಯಲ್ಲಿ ಸರ್ಕಾರ ತೆಗೆದುಕೊಂಡ ಕ್ರಮ ಯಾವುದು ಇದೆ ಈ ಕ್ರಮ ಒಳ್ಳೆಯ ಕ್ರಮ, ಈ ಕ್ರಮ-ವನ್ನು ಕಾನೂನಿನ ಭಾಗದಲ್ಲಿ ತೆಗೆದು ಹಾಕುವಂತಿಲ್ಲ. We are well within our powers ಎನ್ನುವುದನ್ನು ನಾವು ಅಡ್ಮಿಟ್ ಮಾಡುತ್ತೇವೆ. ಇದಾದ ಮೇಲೆ ಮಾನ್ಯ ಮಲ್ಲಿಕಾರ್ಜುನ ಖರ್ಗೆ-ಯವರನ್ನು ಕೇಳುವುದೇನೆಂದರೆ ಸರ್ಕಾರದ ಲೋಪವನ್ನು ಎಲ್ಲಿ ಹುಡುಕುತ್ತೀರಿ ಎಂದು ನನಗೆ ಅರ್ಥ-ವಾಗುವುದಿಲ್ಲ. ಬಹುಶಃ ನ್ಯಾಯಾಲಯಕ್ಕೆ ಸರ್ಕಾರದ ವತಿಯಿಂದ ನಮ್ಮ ಪ್ರತಿ ಹೇಳಿಕೆಯನ್ನು ಕೊಡಬಹುದು. ನಾವು ತೆಗೆದುಕೊಂಡಿರತಕ್ಕಂತಹ ಕ್ರಮವನ್ನು ಸಮರ್ಥಿಸಬಹುದು. ಸಮರ್ಥಿಸಿ ಅದ ಮೇಲೆ All the Writ Petitions were argued on merits theadbare. All of them were argued on merits. ಆ ಸಂದರ್ಭದಲ್ಲಿ ಈ ಒಂದು ಕೇಸ್‌ನಲ್ಲಿ ಸರ್ಕಾರದ

ವತಿಯಿಂದ ಕೌಂಟರ್‌ನ್ನು ಹಾಕಿದ್ದೇವೆ, ಕೌಂಟರನ್ನು ಹಾಕಿರುವಂತಹ ಸಂದರ್ಭದಲ್ಲಿ ನ್ಯಾಯ-ಮೂರ್ತಿಗಳು ಯಾವ ತೀರ್ಪನ್ನು ಕೊಟ್ಟರು ಎಂದರೆ,

> "The applicants questioned the validity of the Rules pertaining to the so called backlog vacancies in the promotional post made by the State Government, for the benefit of the Scheduled Castes/Scheduled Tribes."

This order relates to one Shivakumar. The one he referred to was of Dr. Nagraj. The issue involved was one and the same. In all the Petitions, the Government order of 1992 was under attack.

> "The initial order of the State Government provides for a particular quots in the promotional post."

What was the initial order? It is the order of 1978. ಆರ್ಡರ್ ಆಫ್ 1978-ನಲ್ಲಿ ಏನು ಹೇಳಿತು ಎಂದರೆ, 15 ಪರ್ಸೆಂಟ್ ಮತ್ತು 3 ಪರ್ಸೆಂಟ್ ಅವರಿಗೆ ಪ್ರಮೋಷನಲ್ ಕೋಟಿ ಕೊಡಬೇಕು. ಕ್ಯಾಟಗರಿ ಒಂದರಲ್ಲಿ ಇರತಕ್ಕಂತಹ ಲೋಯಸ್ಟ್ ಕ್ಯಾಟಗರಿಯವರೆಗೆ ಕೊಡುತ್ತಾ ಹೋಗಬಹುದು. ಮತ್ತು ಆ ಆರ್ಡರ್‌ನ 6ನೇ ಪ್ಯಾರಗ್ರಾಫ್‌ನಲ್ಲಿ ಯಾವುದಾದರೂ ಒಂದು ವರ್ಷ ಈ ಮುಂಬಡ್ತಿಯನ್ನು ಕೊಡುತ್ತಿರತಕ್ಕಂತಹ ಸಂದರ್ಭದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಕೊಡಬೇಕಾಗಿರುವಾಗ ಅರ್ಹ ಅಭ್ಯರ್ಥಿಗಳು ಇಲ್ಲದೇ ಹೋದರೆ ಆ ಹುದ್ದೆಗಳಿಗೆ ಬೇರೆ ಜಾತಿಯ ಅಭ್ಯರ್ಥಿಗಳನ್ನು ತುಂಬಿಕೊಳ್ಳಬಹುದು ಮತ್ತು ತುಂಬಿಕೊಂಡಿರತಕ್ಕಂತಹ ಇಂತಹ ಹುದ್ದೆಗಳನ್ನು ಮುಂದಿನ ವರ್ಷಕ್ಕೆ ಆ ಹುದ್ದೆಗಳನ್ನು ತೆಗೆದುಕೊಂಡು ಹೋಗುವುದಕ್ಕೆ ಆಗುವುದಿಲ್ಲ. That was precisely the order of 1978. 1978ರಿಂದ 1992ನೇ ಇಸವಿಯವರಿಗೆ 14 ವರ್ಷಗಳ ಕಾಲ ಆ ಸರ್ಕಾರಿ ಆಜ್ಞೆಯ ಪ್ರಕಾರವೇ ಮುಂಬಡ್ತಿಯನ್ನು ಕೊಡುತ್ತಾ ಬಂದಿದ್ದಾರೆ. It was only in 1992, the Government thought it fit to bring an amendment to Rule 8 which in the General Recruitment Rules providing for backlog vacancies ranging from 1978 to 1992. 14 long years. ಇರತಕ್ಕಂಥದ್ದನ್ನು ನೀವು ಬ್ಯಾಕ್‌ಲಾಕ್ ಎಂದು ತೆಗೆದುಕೊಂಡು 1992ನೇ ಇಸವಿಯಲ್ಲಿ ಕೂಡ ಬೇಕೆಂದು ನೀವು ಮಾಡಿರತಕ್ಕಂತಹ ಆಜ್ಞೆ. This came to be attacked. ಇದಕ್ಕೆ ಅವರು ಹೇಳುತ್ತಾರೆ. "But the said order itself says, "if the the eligible candidates are not available." This is the Government order of 1978." the said order itself says that if the eligible candidates are not available, the vacancies would lapse and would be filled up by the general candidates and therefore the question of backlog would not arise." In categorical terms, even after submitting our statement, after

arguing on merits, if the Tribunal proceeds to write the judgement that the Backlog would not arise at all, what else the State Government can do? Can it quarrel with the Tribunal? Can we say that "Your order is prima-facie bad?" Our remedy is to prefer an appeal before the Supreme Court which we have done in all the cases "further, even otherwise, the relevant rule and the order made by the Government subsequently purporting to provide for filling up of the backlog vacancies was considered as unworkable, vague and uncertain and hence we declare the said Rules as non-est." Non-est means not in existence. ಇಂತಹ ಪ್ರಕರಣಗಳಲ್ಲಿ ಕರ್ನಾಟಕ ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯುನಲ್ ಒಂದು ತೀರ್ಮಾನ ತೆಗೆದುಕೊಂಡಾದ ಮೇಲೆ ನಾವು ಏನು ಮಾಡಬೇಕು? Our only remedy left open is to prefer an appeal by means of a Special Leave Petition to the Supreme Court In this case also.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಡಾ।। ನಾಗರಾಜ್‌ರವರ ಈ ಕೇಸ್‌ನಲ್ಲಿ ನೀವು ಕೌಂಟರ್ ಫೈಲ್ ಮಾಡಿಲ್ಲವೆಂದು ಒಪ್ಪಿಕೊಂಡಿದ್ದೀರಿ ಮತ್ತು ಆ ಕೇಸ್ ಇವತ್ತಿನ ದಿವಸ ಡಿಸ್‌ಮಿಸ್ ಆಯಿತು. ಅದರೆ ಈ ಕೇಸ್ ಸೆಟಲ್ ಆಗಿದ್ದು ಯಾವಾಗ ಎಂದರೆ 1995ರಲ್ಲಿ ಆಪ್ಲಿಕೇಷನ್ ನಂಬರ್ 2929 ಯಿಂದ 2932 ಅಫ್ 1995 ಇದು ಜಡ್ಜ್‌ಮೆಂಟ್ ಕೊಟ್ಟಿದ್ದು 3ನೇ ಫೆಬ್ರುವರಿ 1996. ಸಂವಿಧಾನ ತಿದ್ದುಪಡಿಯಾಗಿದ್ದು ಯಾವಾಗ ಎಂದರೆ, ಜೂನ್ 1995 ಒಂದು ವೇಳೆ ಇದರ ಬಗ್ಗೆ ಆಸಕ್ತಿ ಇತ್ತು ಎಂದರೆ ಆ ಅಮೆಂಡ್‌ಮೆಂಟ್ ಬಂದ ಮೇಲೆ ಅದನ್ನು ನೋಡಿಕೊಂಡು ಇಲ್ಲವೇ ಈ ಹೊಸ ಅಮೆಂಡ್‌ಮೆಂಟ್ ಪ್ರಕಾರ ಪುನಃ ಏನಪ್ಪ ಎಂದರೆ, ಈ ರೀತಿಯಾಗಿ ಆ ಟ್ರಿಬ್ಯೂನಲ್ ನೋಟೀಸನ್ನು ತಂದಿದ್ದರೆ, ಬಹುಶಃ ನನಗನ್ನಿಸುತ್ತದೆ. ಒಂದು ಮ್ಯಾಂಡೇಟರಿ ಪ್ರಾವಿಷನ್ ಇದ್ದಮೇಲೆ ಪುನಃ ಒಂದು ಗೌರ್ನಮೆಂಟ್ ಜಿ.ಓ. ಅವಶ್ಯಕತೆ ಇಲ್ಲ ಎಂದು ನನಗೆ ಗೊತ್ತಾಗಿದೆ. ಏಕೆಂದರೆ ಒಂದು ಕಾನ್‌ಸ್ಟಿಟ್ಯೂಶನಲ್ ಪ್ರಾವಿಷನ್ ನಿಮ್ಮ Indra Sahani's case ಪ್ರಕಾರ ಅದನ್ನು ಓವರ್‌ಕಮ್ ಮಾಡುವುದಕ್ಕೆ, ಆ ಕಾನ್‌ಸ್ಟಿಟ್ಯೂಶನ್‌ನೇ ಅಮೆಂಡ್ಮೆಂಟ್ ಮಾಡಿದರು. ಅಂದಮೇಲೆ ನಾವು ಅಲರ್ಟ್ ಇದ್ದು ಆ ಅಮೆಂಡ್‌ಮೆಂಟ್‌ನ್ನು ತಿಳಿದುಕೊಂಡು ನಾವು ರೆಪ್ರಸೆಂಟ್ ಮಾಡಬಹುದಾಗಿತ್ತೋ ಅಥವಾ ಇಲ್ಲವೋ ಎನ್ನುವುದು ಕೆ.ಎ.ಟಿ.ಯ ಮುಂದೆ ಬಂದು ಮತ್ತೆ ಕೆ.ಎ.ಟಿ. ಮುಂದೆ ರೆಪ್ರಸೆಂಟ್ ಮಾಡಿದ ಮೇಲೂ ಆ ಕಾನ್‌ಸ್ಟಿಟ್ಯೂಶನ್ ಅಮೆಂಡ್‌ಮೆಂಟ್ ಮಾಡಿದ್ದರೆ, ಅದು ಸುಪ್ರೀಂ ಕೋರ್ಟಿಗೆ ಹೋಗುತ್ತಿತ್ತೋ ಇಲ್ಲವೋ ಎನ್ನುವುದು ಇನ್ನೊಂದು. ಆದಕ್ಕೆ ದಯವಿಟ್ಟು ಅದನ್ನು ಹೇಳುವುದಕ್ಕೆ ಹೋಗಬೇಡಿ. ಲ್ಯಾಪ್ಸ್ ಯಾವ ಹಂತದಲ್ಲಿ ಅಗಿದೆ 1995ಕ್ಕಿಂತಲೂ ಮುಂದೆ ಈ ಮಾತನ್ನು ಹೇಳಿದ್ದರೆ ಅದನ್ನು ನಾನು ಒಪ್ಪಿಕೊಳ್ಳುತ್ತಿದ್ದೆ ಆದರೆ 17ನೇ ಜೂನ್ 1995ಕ್ಕೆ ಇದು ಬಂದಮೇಲೂ ಕೂಡ ಅದೇ ಫ್ಲೀ ಫೆಬ್ರುವರಿ 1996ರಲ್ಲಿ ತೆಗೆದುಕೊಂಡರೆ ಇದು ಸಮಂಜಸವಾಗುವುದಿಲ್ಲ. It is a fact that they have either ignored or they have not taken cognizance of

this amendment otherwise they have not sought the advice of the Law Department or the Law Department has not advised properly to their pleaders or whoever was there. ಆದಕ್ಕೆ ದಯವಿಟ್ಟು ಇದೆಲ್ಲ ಇದೆ. ಇದರ ಬಗ್ಗೆ ಕೂಡ ತಾವು ಹೇಳಬೇಕು.

ಶ್ರೀ ಎಂ.ಸಿ. ನಾಣಯ್ಯ:- ಮಾನ್ಯ ಅಧ್ಯಕ್ಷರೇ, ಎರಡು ವಿಚಾರಗಳನ್ನು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮರೆತಿದ್ದಾರೆ. ಒಂದನೆಯದು, was struct down by the Tribunal was the order of the Government of the year 1992 which provides for backlog promotions. It is only the Backlog promotion which has been struck down. The promotion order of 1978 is still valid. Even today it is valid. Don't make the difference. 1978ರಲ್ಲಿ ಇದ್ದಂತಹ ಸರ್ಕಾರಿ ಆಜ್ಞೆ 15 ಪರ್ಸೆಂಟ್, 3 ಪರ್ಸೆಂಟ್ ಮುಂಬಡ್ತಿಯನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ-ದವರಿಗೆ ಕೋಡಬೇಕೆಂದು ಹೇಳುತ್ತಿರತಕ್ಕಂಥದ್ದು ಇವತ್ತು ಕೂಡ ಅದು ಜಾರಿಯಲ್ಲಿದೆ. Even now the Government is acting under that order. 15 ಪರ್ಸೆಂಟ್ 3 ಪರ್ಸೆಂ-ಟ್‌ನ್ನು ಮುಂಬಡ್ತಿಯನ್ನು ಕೊಡುತ್ತಿರತಕ್ಕಂಥದ್ದು ಕ್ಯಾಟಗರಿ (1) ರವರೆಗೆ ಕೊಡತಕ್ಕಂತಹ ಆದೇಶ ಏನಿದೆ Even today it is in order. ಯಾವುದನ್ನು ಕಿತ್ತು ಹಾಕಿದ್ದಾರೆಂದರೆ, ಬ್ಯಾಕ್‌ಲಾಗ್ ಪ್ರಮೊಷನ್ ಏನಿದೆ ರೂಲ್ 8ಕ್ಕೆ ಯಾವುದಕ್ಕೆ ವಿಶೇಷ ತಿದ್ದುಪಡಿಯನ್ನು ತಂದಿದ್ದರು ಅದನ್ನು ಮಾತ್ರ it was struck down. ಆದ್ದರಿಂದ ಅವರ ಮನಸ್ಸಿನಲ್ಲಿ ಮೀಸಲಾತಿ ಪಾಲಿಸಿ, reservation in promotion has gone ಎಂದು ಹೇಳುತ್ತಾ ಇರತಕ್ಕಂಥಾದ್ದು No.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, 1992ರಲ್ಲಿ ರೂಲನ್ನು ಅಮೆಂಡ್‌-ಮೆಂಟ್ ಮಾಡಿದ್ದು ಏಕೆ ಎಂದರೆ, ಈಗಾಗಲೇ ನಾನು ಕೋಟ್ ಮಾಡಿದ್ದೇನೆ. In various categories, even in promotional categoriesನಲ್ಲೂ ಕೂಡ ಹುದ್ದೆಗಳು ಕಡಿಮೆ ಇದೆ. ಅಂದರೆ ರಿಕ್ವೈರ್ಡ್ ನಂಬರ್ಸ್ ಇಲ್ಲ. 18ಪರ್ಸೆಂಟ್ ಏನು ಸಿಕ್ಕಬೇಕಾಗಿತ್ತು ಅದು ಸಿಕ್ಕಿಲ್ಲ. ಅದಕ್ಕೆ ಇದನ್ನು ಯಾವ ರೀತಿಯಲ್ಲಿ ಓವರ್‌ಕಮ್ ಮಾಡಬೇಕು? ಹುದ್ದೆಗಳನ್ನು ತುಂಬಬೇಕೆಂದು ಹೇಳಿಯೇ ಸಿವಿಲ್ ಸರ್ವಿಸ್ ರೂಲನ್ನು ಅಮೆಂಡ್‌ಮೆಂಟ್ ಮಾಡಿದ್ದುದು with an intention to full up 18%, to give adequate representation, where there is inadequate representation ಎಲ್ಲಿ ಕೊರತೆ ಇದೆ ಅದನ್ನು ತುಂಬುವುದಕ್ಕೋಸ್ಕರವಾಗಿ ಎಂದು ಇದನ್ನು ಮಾಡಿದ್ದುದು. ಈಗ ನಾನು ಕೆಲವೊಂದನ್ನು ಹೇಳಿದೆ, ಅನೇಕ ಹುದ್ದೆಗಳನ್ನು ಖಾಯಂ ಮಾಡುತ್ತೇವೆ, ಇದು ಎಲ್ಲಾ ಯಾವ ಬೇಸಿಸ್ ಮೇಲೆ ಮಾಡಿದೆವು ಎಂದರೆ ಮುಂದೆ ಇದನ್ನೆಲ್ಲ ಫಿಲ್ಲಪ್ ಮಾಡೋಣವೆಂದು ಹೇಳಿ ಅವುಗಳನ್ನು ಖಾಯಂ ಮಾಡಿಕೊಂಡು ಹೋಗುತ್ತೇವೆ. ಅದೇ ರೀತಿಯಲ್ಲಿ ಕೆಲವು ಪ್ರಮೋಷನ್ಸ್ ಕೂಡ ಆಗಿದೆ. ಅದಕ್ಕಾಗಿ ಆ ಕೊರತೆಯನ್ನು ತುಂಬಬೇಕು, ನೀಗಿಸಬೇಕೆಂದು ಹೇಳಿ 1992ರಲ್ಲಿ ಆ ಒಂದು ಸಿವಿಲ್ ಸರ್ವಿಸ್ ರೂಲ್ಸ್‌ನ್ನು ಅಮೆಂಡ್‌ಮೆಂಟ್ ಮಾಡಿದ್ದುದು.

ಅದಕ್ಕಾಗಿ ಅದನ್ನು ಫೇಲ್ ಮಾಡುವುದಕ್ಕೆ ಮತ್ತು ಇತ್ತೀಚಿನ ಅಮೆಂಡ್‌ಮೆಂಟ್ ಏನು ಇದೆ 16:4 (ಎ) ಇದರ ಪ್ರಕಾರ ಇರತಕ್ಕಂತಹ ರೂಲ್ ಸರಿಯಿಲ್ಲ ಎಂದರೆ ಈ ಒಂದು framework of law ಬರುತ್ತಿಲ್ಲ ಎಂದರೆ, you re-examine it and issue a fresh order.

ಶ್ರೀ. ಎಂ.ಸಿ. ನಾಣಯ್ಯ:- ಈಗ ನಮ್ಮ ಮುಂದಿರತಕ್ಕ ಪ್ರಶ್ನೆ ಏನೆಂದರೆ, ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದವರಿಗೆ ಮುಂಬಡ್ತಿಯನ್ನು ಕೊಡುವಾಗ ಶೇಕಡ 15 ಮತ್ತು ಶೇಕಡ 3 ರಷ್ಟನ್ನು ಕೊಡಬೇಕೆಂದು ಮಾನ್ಯ ದೇವರಾಜ ಅರಸ್‌ರವರ ಕಾಲದಲ್ಲಿ ತಂದಿರತಕ್ಕ ಈ ಆಜ್ಞೆ ಏನಿದೆ, ಈ ಆಜ್ಞೆಯೇ ಆ ಟ್ರಿಬ್ಯೂನಲ್‌ನಲ್ಲಿ ತೆಗೆದುಕೊಂಡಿರತಕ್ಕ ತೀರ್ಪಿನಿಂದ ಹೊರಟುಹೋಯಿತೆಂಬ ಮಾತನ್ನು ಮಾನ್ಯ ಖರ್ಗೆಯವರು ಹೇಳಿದರು. ಆದರೆ ಇಲ್ಲಿ ಮಾನ್ಯ ದೇವರಾಜ ಅರಸ್‌ರವರು 1978ನೇ ಇಸವಿಯಲ್ಲೇ 15+3 ಪರ್ಸೆಂಟ್ ಕೊಡಬೇಕೆಂದು ಮಾಡಿರತಕ್ಕ ಆಜ್ಞೆ ಏನಿದೆ ಆ ಆಜ್ಞೆಯೇ ಇವತ್ತಿನವರೆಗೂ ಚಾಲ್ತಿಯಲ್ಲಿದೆ. ಆದರೆ ಇಂದಿರಾ ಸಹಾನಿಯ ಕೇಸಿನಲ್ಲಿ ಮಾತ್ರ 1992 ನೇ ಇಸವಿಯಲ್ಲಿ ಅವರು ತೀರ್ಮಾನವನ್ನು ತೆಗೆದುಕೊಂಡಾಗ ಅವರು ಒಂದು ವಿಚಾರವನ್ನು ಬಹಳ ಸ್ಪಷ್ಟವಾಗಿ ಏನು ಹೇಳಿದ್ದಾರೆಂದರೆ, Reservation in promotion is not permissible. They have made it very clear. This is no. 1. No. 2 Reservation shall not exceed more than 50%. No. 3, if promotions have already been given, prior to the pronouncement of this order, it shall not affect those promotions which have already been given. No. 4 The States which Have been operating this policy of promotions, they can continue for a period of five years. These are four broad parameters laid down.

SRI M. MALLIKARJUNA KHARGE:- That is gone now, because of this amendment. Now you cannot plead that.

SRI M.C. NANAIAH:- Please hear. I have not come to that. I know what you want to say.

SRI M. MALLIKARJUNA KHARGE:- You can't plead that now.

ಶ್ರೀ ಎಂ.ಸಿ. ನಾಣಯ್ಯ:- ನಾನು ಇನ್ನೂ ಅಲ್ಲಿಗೆ ಬಂದಿಲ್ಲ ದಯವಿಟ್ಟು ನಾನು ಹೇಳುವುದನ್ನು ಕೇಳಿ. ನೀವು ಈಗ ಏನು ಹೇಳಬೇಕೆಂದಿದ್ದೀರಿ ಎಂಬುದು ನನಗೆ ಗೊತ್ತು. 1997ರ ನವೆಂಬರ್‌ವರೆಗೆ ನಾವು ಇದನ್ನು ಇಟ್ಟುಕೊಳ್ಳಬಹುದು. That means as at the moment, reservation order of 1978 is still in force to the extent of 15% and 3% that is 18%. What has been struck down is backlog promotions, now in respect of which we have already filed SLP Petition in the Supreme Court. 1-2-1996ರಲ್ಲಿ ಡಾ॥ ನಾಗರಾಜ್‌ರವರ ಕೇಸಿನಲ್ಲಿ ಅವರು ತಮ್ಮ ಜಡ್ಜ್‌ಮೆಂಟನ್ನು ಪ್ರೊ-ನೌನ್ಸ್ ಮಾಡಿದರು. In Dr. Nagaraj's case. Within a period of 90 days you

have to prefer an Appeal to the Supreme Court. On 14-4-96 we have already preferred an Appeal, that is pending for adjudication. In Srinivas's case also, it is pending for adjudication and in Basappa's case also. This is one thing. The second thing is, ಅವರು ಈಗ ಯಾವ ಅಮೆಂಡ್‌ಮೆಂಟ್ ಬಗ್ಗೆ ಪ್ರಸ್ತಾಪಿಸುತ್ತಿದ್ದಾರೆ ಅದರ ಬಗ್ಗೆ ಹೇಳುತ್ತೇನೆ. ಈ ಅಮೆಂಡ್‌ಮೆಂಟ್ ಪ್ರೋರ್ಷನ್ ಯಾವುದಕ್ಕೆ ಎಂದರೆ, ಇಂದಿರಾ ಸಹಾನಿ ಕೇಸಿನಲ್ಲಿ ಅವರು ಏನು ಹೇಳಿದ್ದಾರೆಂದರೆ : Hereafter there shall be no promotion in reservations. ಆದರೆ ಈ ಆರ್ಡರ್‌-ನ್ನು ಮಾಡಿದ ತಾರೀಖಿನಿಂದ 5 ವರ್ಷದವರೆಗೆ ಯಾವ ಯಾವ ರಾಜ್ಯಗಳವರು ಇದನ್ನು ಜಾರಿಗೆ ತಂದಿದ್ದಾರೆ ಅವರು ಅದನ್ನು ಇಟ್ಟುಕೊಳ್ಳಬಹುದು. After lapse of 5 years, no. To get over that, ರಾಜ್ಯಸರ್ಕಾರಗಳು ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದವರಿಗೆ ಪ್ರೊಮೋಷನ್‌-ನಲ್ಲಿಯೂ ಕೂಡ ಈ ಮುಂಬಡ್ತಿಯನ್ನು ಕೊಡವುದಕ್ಕೆ ಇರತಕ್ಕ ಅವಕಾಶವನ್ನು ನಿಯಮ 16 (4ಎ)ನಲ್ಲಿ ಕಲ್ಪಿಸಿದೆ. It is not mandatory as such. They have made a provision where such of the state Governments would like to give promotions for the reserved category to a particular extent, you can continue to have it . ಎಂದು ಹೇಳುತ್ತಿರುವುದಕ್ಕೆ This is the amendment. what is the amendment? ಆ ತಿದ್ದುಪಡಿ ಏನೆಂದರೆ:-

> In Art.16 of the Constitution after Clause IV, the following clause shall be inserted.

16(4) as such is not mandatory. Any Government working from social justice they shall do that. That was precisely what was working in the minds of V.P.Singh when he wanted to give 27% reservations to other Backward Classes which ultimately went to the Supreme Court and ultimately Supreme Court said - yes. You can give right upto 27%. But in any case your total reservation shall not exceed more than 50%. All reservations put together, it shall not exceed 50%. Art. 16(4) does not specially lay down SC/ST. They say backward classes and 16(4) relates to recruitment. It does not say in respect of promotions. Mr. Speaker, nothing in this Art. shall prevent the state from making any provision for reservation in appointments or posts in favour of any backward classes of citizens which in the opinion of the State Government, is not adequately represented in the services of the State. This Art. 16(4). Now the amended 16(4) is, "Nothing in this Article shall prevent the State from making any provision for reservation in matters of promotion." For the first time it has come which fact was thought of by Mr. Urs in the year 1978

except in Karnataka. ಕರ್ನಾಟಕದಲ್ಲಿ ಮಾನ್ಯ ದೇವರಾಜ ಅರಸ್‌ರವರು 1978ನೇ ಇಸವಿಯಲ್ಲಿ ಮೊದಲನೇ ಬಾರಿ ಅದನ್ನು ತಂದರು ಅಲ್ಲಿಂದ ಇಲ್ಲಿಯವರೆಗೂ ಇದು ಜಾರಿಯಲ್ಲಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ತಮ್ಮ ಗಮನಕ್ಕೆ ಒಂದು ಅಂಶವನ್ನು ತರುತ್ತೇನೆ. 1978 ನೇ ಇಸವಿಗಿಂತ ಮುಂಚೆ ಅಂದರೆ 1976ರಲ್ಲಿ ನಾನು ಸ್ಪೆಷಲ್ ರಿಕ್ರೂಟ್‌ಮೆಂಟನ್ನು ಮಾಡಿ ತೋರಿಸಿದ ಮೇಲೆ, ಇದು ಅಪ್‌ಹೆಲ್ಡ್ ಆದಮೇಲೆ ಮುಂದೆ ಅದನ್ನು ಒಪ್ಪಿಕೊಂಡರು.

ಶ್ರೀ ಎಂ. ಸಿ. ನಾಣಯ್ಯ:- ಅದು ದೇವರಾಜ ಅರಸ್‌ರವರ ಕಾಲದಲ್ಲಿ ತಾನೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಾನು ಒಪ್ಪಿಕೊಳ್ಳುತ್ತೇನೆ. ಅದು ನನ್ನ ಕಾಲ ಎಂದು ಹೇಳುವುದಕ್ಕಾಗುತ್ತದೆಯೇ?

ಶ್ರೀ ಎಂ.ಸಿ. ನಾಣಯ್ಯ:- ಅಂಥ ದೇವರಾಜ ಅರಸ್‌ರವರನ್ನು ಇವರೆಲ್ಲರೂ ಬಿಟ್ಟುಹೋದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಫೆಬ್ರವರಿಯಲ್ಲಿ ಏನಾಯಿತು? ನೀವು ಹೆಗಡೆಯವರ ಜೊತೆಯಲ್ಲಿ ಇದ್ದಿರಿ. ಆದರೆ ನೀವು ಹೆಗಡೆಯವರ ಜೊತೆಯಲ್ಲಿ ಹೋದಿರಾ? ಹೆಗಡೆಯವರ ಜೊತೆಯಲ್ಲೇ ಓಡಾಡುತ್ತಿದ್ದವರು ನೀವು ಅವರ ಜೊತೆ ನವನಿರ್ಮಾಣ ವೇದಿಕೆಗೆ ಹೋದಿರಾ? ಹೇಳಿ.

ಶ್ರೀ ಎಂ.ಸಿ. ನಾಣಯ್ಯ:- ನೀವು ದೇವರಾಜ ಅರಸ್‌ರವರನ್ನು ಹೊಗಳುತ್ತೀರಲ್ಲ, ಅದೇ ದೇವರಾಜ ಅರಸ್‌ರವರ ಚಿಂತನೆಯಲ್ಲಿ ಬದುಕಿರುವವರು, ಮೇಲಕ್ಕೆ ಎದ್ದಿರುವವರು ಅವರ ಚಿಂತನೆಯಲ್ಲಿ ಬಾಳಿರುವ ಮಾನ್ಯ ದೇವರಾಜ ಅರಸ್‌ರವರಿಗೆ ಒಂದು ಕ್ರೈಸಿಸ್ ಬಂದಾಗ ಅಧಿಕಾರಕ್ಕಾಗಿ ಹಿಂಡು ಹಿಂಡಾಗಿ ಅವರನ್ನು ಬಿಟ್ಟು ಹೋದವರನ್ನು ನಾವು ನೋಡಿದ್ದೇವೆ. ಏಕೆಂದರೆ, ಆ ಸಂದರ್ಭದಲ್ಲಿ ನಾನೂ ಕೂಡ ಅವರ ಜೊತೆಯಲ್ಲೇ ಇದ್ದೆ. ನಾವು ಅವತ್ತು ಕೇವಲ ಐದೇ ಜನರು ಅವರ ಜೊತೆ ಉಳಿದದ್ದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅದಕ್ಕೂ ಇದಕ್ಕೂ ಏನು ಸಂಬಂಧ? I have personally went and told him. Don't tell that. What ever is done, even I have done in 1976. ಯಾವುದಕ್ಕೆ ಯಾವುದನ್ನೋ ಸಂಬಂಧ ಕಲ್ಪಿಸುವುದು ಬೇಡ ನಾನು ಏನು ಮಾತನಾಡಿದ್ದೇನೆ, ಅವರ ಹತ್ತಿರ ಏನು ಹೇಳಿದ್ದೇನೆ, ಗುಂಡೂರಾಯರ ಕಾಲದಲ್ಲಿ ಗುಂಡೂರಾಯರಿಗೆ ಏನು ಹೇಳಿದ್ದೇನೆ, ಬಂಗಾರಪ್ಪನವರ ಕಾಲದಲ್ಲಿ ಬಂಗಾರಪ್ಪನವರಿಗೆ ಏನು ಹೇಳಿದ್ದೇವೆ ಎಂಬುದು ನನಗೇ ಗೊತ್ತು. ಆದೇ ರೀತಿ ದೇವರಾಜ ಅರಸ್‌ರವರ ಕಾಲದಲ್ಲಿ ದೇವರಾಜ ಅರಸ್‌ರವರಿಗೆ ನಾನೇ ಸ್ವತಃ ಭೇಟಿಯಾಗಿ ನಾನು ಏನು ಮಾತನಾಡಿದ್ದೇನೆಂದು ನನಗೇ ಗೊತ್ತು. ನಿಮಗೇನು ಗೊತ್ತು?

ಶ್ರೀ ಎಂ.ಸಿ. ನಾಣಯ್ಯ:- ದೇವರಾಜ ಅರಸ್‌ರವರು ನಿಮಗೆ ಏನು ಹೇಳಿದರೋ ಗುಂಡೂರಾಯರು ಹೇಳಿದಂತೆ ನನಗೂ ಹೇಳಿದರು. ಮಾನ್ಯ ದೇವರಾಜ ಅರಸ್‌ರವರು ಖರ್ಗೆಯವರಿಗೆ ಏನು ಹೇಳಿದರು, ಗುಂಡುರಾಯರು ಏನು ಹೇಳಿದರು ಎಂಬುದನ್ನು ನನಗೂ ಹೇಳಿದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನನ್ನ ಮೇಲೆ ಅವರಿಗೆ ಆ ಅಭಿಮಾನ ಇಲ್ಲದೇ ಹೋಗಿದ್ದರೆ ಅದು ಬೇರೆ ಆಗಿರುತ್ತಿತ್ತು. ಅವರು ಇಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದರು. ಲ್ಯಾಂಡ್ ರಿಫಾರಂಸ್‌ನ ಸೆಕ್ಷನ್ 97ಕ್ಕೆ ತಿದ್ದುಪಡಿಯನ್ನು ತಂದಾಗ . . .

ಶ್ರೀ ವೈ ರಾಮಕೃಷ್ಣ:- ದೇವರಾಜ ಅರಸ್‌ರವರ ಪ್ರತಿಮೆ ಹಾಕಿಸಿದಂತೆ ನಿಮ್ಮದೂ ಒಂದು ಪ್ರತಿಮೆಯನ್ನು ಹಾಕಿಸಿದ್ದರೆ ಒಳ್ಳೆಯದಿತ್ತು. I am sorry for the way in which you are interpreting this Constitution, when you say it is not mandatory, I do not know who are your advisers.

SRI M.C. NANAIAH:- Try to understand the letter and spirit of the Articles and the intention of the Government. These are two different things.

ಶ್ರೀ ವೈ ರಾಮಕೃಷ್ಣ:- ನೀವು ಹೀಗೆ ಮಾತನಾಡುತ್ತಾ ಇರಿ, ಚುನಾವಣೆ ಬಂದಾಗ ಗೊತ್ತಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ:- ನಿಮ್ಮ ಇನ್‌ಟೆನ್‌ಷನ್‌ನಲ್ಲಿ ಈ ರಿಸರ್ವೇಷನ್ ಇರಬಾರದೆಂದು ಏನಾದರೂ ಇದೆಯೇ?

ಶ್ರೀ ಎಂ.ಸಿ. ನಾಣಯ್ಯ:- ಬೇಡವೆಂದು ಯಾರು ಹೇಳಿದ್ದುದು?

SRI KAGODU THIMMAPPA:- What is the language you are using? 'Not mandatory'

SRI M.C. NANAIAH:- It is already there. They have not understood it in a proper way.

(Interrruptions)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಸರ್ಕಾರದವರೇ ಈ ರೀತಿ ಮಾತನಾಡುತ್ತಾರೆಂದರೆ ಅಧಿಕಾರಿಗಳು ಇದನ್ನೇ ಇಂಟರ್‌ಪ್ರಿಟ್ ಮಾಡುತ್ತಾರೆ.

ಶ್ರೀ ಎಂ.ಸಿ. ನಾಣಯ್ಯ:- ಮಾನ್ಯ ಸದಸ್ಯರು ನಾನು ಹೇಳುತ್ತಿರುವುದನ್ನು ಸರಿಯಾಗಿ ಅರ್ಥಮಾಡಿಕೊಳ್ಳುತ್ತಿಲ್ಲವೆಂದು ಕಾಣಿಸುತ್ತದೆ. ನಿಮಗಿರುವಷ್ಟೇ ಆಸಕ್ತಿ ನಮಗೂ ಇದೆ. ನೀವು ಹೇಳಬೇಡಿ. ಈ ರಿಸರ್ವೇಷನ್ ಎಂದು ಹೇಳುತ್ತಿರುವಂಥಾದ್ದು ಬ್ಯಾಕ್‌ವರ್ಡ್ ಕ್ಲಾಸ್‌ನವರಿಗಾಗಲಿ, ಇನ್ನೊಬ್ಬರಿಗಾಗಲಿ, ಅದು ಯಾರ ಪಾಲಿಗೆ ಹೋಯಿತೆಂಬುದನ್ನು ಇಲ್ಲಿ ನಾವು ಮಾತನಾಡಬಹುದು.

ಶ್ರೀ ಕಾಗೋಡು ತಿಮ್ಮಪ್ಪ:- ಅದನ್ನೂ ಹೇಳಿ.

ಶ್ರೀ ಎಂ.ಸಿ. ನಾಣಯ್ಯ:- ಈಗ ಅದರ ಬಗ್ಗೆ ಮಾತನಾಡುವುದು ಬೇಡ ಮುಂದೆ ಮಾತನಾಡೋಣ ಯಾರಿಗೆ ಈ ರಿಸರ್ವೇಷನ್ ಎಂಬ ಕಲ್ಪನೆ ಏನು ಇತ್ತು ಅದರ ಬಗ್ಗೆ ಬಹಳಷ್ಟು ಮಾತಾಡಬಹುದು. ಆದರೆ ಈಗ ಬೇಡ. ಈಗ ಸೀಮಿತವಾದ ವಿಚಾರಕ್ಕೆ ಬರೋಣ.

ಶ್ರೀ ಕಾಗೋಡು ತಿಮ್ಮಪ್ಪ:- ನೀವು ಏನು ಕಲ್ಪನೆಯನ್ನು ಇಟ್ಟುಕೊಂಡಿದ್ದೀರೆಂದು ಎಲ್ಲರಿಗೂ ಗೊತ್ತಿದೆ.

ಶ್ರೀ ಎಂ.ಸಿ. ನಾಣಯ್ಯ:- ನಮಗೂ ಗೊತ್ತಿದೆ, ನೀವು ಸಹ ಯಾವ ಯಾವ ಕಾಲದಲ್ಲಿ ಏನೇನು ಮಾಡಿದ್ದೀರಿ ಎಂಬುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಕಾನೂನು ಪ್ರಕಾರ ಮಾತನಾಡಿದರೆ, ಯಾರಿಗೆ ಹೋಗಿದೆ, ಏನು ಹೋಗಿದೆ ಎಂದು ಹೇಳುತ್ತಾರೆ. ಬಹಳ ಮಂದಿಗೆ ಹೋಗಿದೆ. ಸಾವಿರಾರು ವರ್ಷಗಳಿಂದ ಅನು-ಕೂಲವನ್ನು ಪಡೆದುಕೊಂಡವರಿಗೆ ಇಲ್ಲ, ಇದು ಯಾರಿಗೆ ಹೋಗಿದೆ, ಏನು ಹೋಗಿದೆ ಎಂದು ಹೇಳುತ್ತಿದ್ದೀರಿ. ಹೊಸ ಅಮೆಂಡ್‌ಮೆಂಟನ್ನು ಬಿಟ್ಟು ಬೇರೆ ವಿಚಾರ ಮಾತನಾಡುತ್ತೇನೆಂದರೆ ಹೇಗೆ?

ಶ್ರೀ ಎಂ.ಸಿ. ನಾಣಯ್ಯ:- ನಾನಾದರೂ ಹೇಳಿದ್ದೇನು? ಏತಕ್ಕೆ ಹೇಳಿದೆ? ನಮ್ಮ ಸರ್ಕಾರ ಯಾವುದೋ ಒಂದು ವರ್ಗಕ್ಕೆ ಸಿಕ್ಕಬೇಕಾಗಿರತಕ್ಕ ಸೌಲಭ್ಯವನ್ನು ನೀವು ಉದ್ದೇಶಪೂರ್ವಕವಾಗಿ ಕೊಡದೇ ಇರುವಂಥ ಕ್ರಮವನ್ನು ನೀವು ತೆಗೆದುಕೊಂಡಿದ್ದೀರಿ ಎಂದು ಸರ್ಕಾರದ ಮೇಲೆ ಆರೋಪ-ವನ್ನು ನೀವು ಮಾಡುವಾಗ ಅದು ಸರಿಯಲ್ಲವೆಂದು ನಾವು ಹೇಳಬೇಕಲ್ಲ!

3.50 ಪಿ.ಎಂ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಾನು ಹೇಳಿದೆ, ನಮ್ಮ ಸರ್ಕಾರವೂ ತಪ್ಪು ಮಾಡಿರ-ಬಹುದು ಆದರೆ ನಾನು ಇವತ್ತು ತಮ್ಮ ನೋಟೀಸಿಗೆ ತರುತ್ತಿದ್ದೇನೆ. ಯಾವಾಗ ನಾನು 18:5 ಮಾಡಿದಾಗ ತಕ್ಷಣ ಎರಡು ತಿಂಗಳಲ್ಲಿ ಅದು ರಿವರ್ಸ್ ಆಯಿತು. ಆಗಿದ್ದು ಎಲ್ಲವನ್ನು ಕೂಡ ಹೇಳುವುದಕ್ಕಾಗುವುದಿಲ್ಲವೆಂದು ನಾನು ಮೊದಲೇ ಹೇಳಿದೆ. ನೀವು ಕೇಳುವುದಿಲ್ಲ. ಆದರೆ ಈ ಸಮಸ್ಯೆಯನ್ನು ಬಗೆಹರಿಸಿ ಯಾವ ಒಂದು ವರ್ಗದ ಜನರಿಗೆ ಅನ್ಯಾಯವಾಗಿದೆ ಅವರಿಗೆ ಸಹಾಯ ಮಾಡತಕ್ಕ ರೀತಿಯಲ್ಲಿ ನೀವು ಬನ್ನಿ ಅಂದರೆ ನಿಮ್ಮ ಕಾಲದಲ್ಲಿ ಹೀಗೆ ಆಯಿತು, 1992ರ ಆರ್ಡರ್ ಹಾಗಾಯಿತು . . .

ಶ್ರೀ ಎಂ.ಸಿ. ನಾಣಯ್ಯ:- ನೀವೇ ಹೇಳಿದಿರಲ್ಲ, ನೀವು ಹೇಳದೆ ಇದ್ದರೆ ನಾನು ಏಕೆ ಹೇಳ-ಬೇಕು? ನೀವೇ ತಾನೇ ಹೇಳಿದ್ದು ಅದನ್ನು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಏನು ಹೇಳಿದೆ? ಆಮೇಲೆ ಸಂವಿಧಾನದಲ್ಲಿ ಬರೆದದ್ದು ಮ್ಯಾಂಡೆಟರಿ ಅಲ್ಲ, ನೀವು ಜಿ.ಒ. ಇಶ್ಯೂ ಮಾಡಿದ್ದುದು ಮ್ಯಾಂಡೇಟರಿ.

ಶ್ರೀ ಎಂ.ಸಿ. ನಾಣಯ್ಯ:- ನಾನು ಏನು ಹೇಳಿದೆ ಎಂಬುದನ್ನು ಅವರು ಅರ್ಥ ಮಾಡಿಕೊಳ್ಳ-ಲಿಲ್ಲ.

ಉಪಾಧ್ಯಕ್ಷರು:- ಅವರು ಹೇಳುವುದನ್ನು ಪೂರ್ತಿ ಕೇಳಿ ನಂತರ ಸಪ್ಲಿಮೆಂಟರಿ ಕೇಳಿ.

ಶ್ರೀ ಎಂ.ಸಿ. ನಾಣಯ್ಯ:- Art. 16(4) ಇದ್ದಾಗ ಅದನ್ನು ಇಡೀ ರಾಷ್ಟ್ರದಲ್ಲಿ ಎಷ್ಟು ರಾಜ್ಯಗಳು ಜಾರಿಗೆ ತಂದವು? ಜಾರಿಗೆ ತರಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಕರ್ನಾಟಕ ತೆಗೆದುಕೊಂಡು ಬಂದಿದೆ, ಅದಕ್ಕೆ ನಾವು ಕೇಳುತ್ತಿದ್ದೇವೆ. ನೀವು ಒಬ್ಬರೇ ಮಾಡಿಲ್ಲ. ಬೇರೆಲ್ಲ ರಾಜ್ಯದ ಮುಖ್ಯ ಮಂತ್ರಿಗಳು ಮಾಡಿದ್ದಾರೆ.

SRI M.C. NANAIAH:- Successive governments right from 1978 onwards whether the Congress or the Janata Party or the Janata Dal, we have been following and pursuing this policy of reservation for Scheduled Castes and Scheduled Tribes and now even then for backward classes also. Now we have expanded this. ಈಗ ಅವರು ಎತ್ತಿರತಕ್ಕದ್ದು ನಿಜ ಇಂದಿರಾ ಸಹಾನಿ ಕೇಸ್‌ನಲ್ಲಿರತಕ್ಕ 5 ವರ್ಷದ ಲಿಮಿಟ್ ಯಾವುದು ಉಂಟು ಅದನ್ನು ಗೆಟ್-ಓವರ್ ಮಾಡಲಿಕ್ಕೋಸ್ಕರ they have brought constitutional amendment to Art 16(4)(a). ಅವರು ಒಂದು ಪ್ರಶ್ನೆ ಎತ್ತಿದರು. From 1978, notification is in existence. ಈ ನೋಟಿಫಿಕೇಷನ್ ಕಂಟಿನ್ಯೂ ಆಗಬೇಕು ಎಂದು. ಈ ನೋಟಿಫಿಕೇಷನ್ ಕಂಟಿನ್ಯೂ ಆಗಬೇಕಲ್ಲ. ಈ ನೋಟಿಫಿಕೇಷನ್ ಕಂಟಿನ್ಯೂ ಆಗಬೇಕಾದರೆ. Till November 97 this notification will be in force. ಏಕೆಂದರೆ 5 ವರ್ಷ ಕಳೆದ ಮೇಲೆ ಹೊಸ ಅಮೆಂಡ್‌ಮೆಂಟ್ ಬಂತು. ಸಂವಿಧಾನದ 77ನೇ ತಿದ್ದುಪಡಿ ತಂದದನ್ನು ನಾವು ಎತ್ತಿಕೊಂಡು That reservation policy will have to be continued. Is it not? ಇವತ್ತು ಅವರು ಎತ್ತಿರತಕ್ಕ ವಿಚಾರ ಬ್ಯಾಕ್‌ಲಾಗ್‌ಗೆ ಸಂಬಂಧಪಟ್ಟ ಹಾಗೆ ಮಾತ್ರ. But as far as reservation is concerned, 15% and 3% is being continued. ಅವರು ಇನ್ನೊಂದು ಹೇಳಿದರು. 1994ರಲ್ಲಿ ರಿಸರ್ವೇಷನ್ ಎಂದು ಹೇಳುವುದರ ಬಗ್ಗೆ ಒಂದು ಜಿ.ಒ. ಬಂತು.

This is the Government order dtd. 20th April 94.

"The representation for Scheduled Castes and Scheduled Tribes in State Civil Services and posts have been examined by the Government. Similarly, Government have also looked at the extent of reservation afforded under Article 15 of the Constitution and considered it necessary to ameliorate the conditions of Scheduled Castes and Scheduled Tribes. It is, therefore, considered necessary to increase the quantum of reservation in favour of Scheduled Castes and Scheduled Tribes for both the purposes i.e., under Articles 15(4) and 16(4).

Government order dtd. 20th April, 94 :

"Government are accordingly pleased to enhance the reservation in favour of persons belonging to Scheduled Casts and Scheduled Tribes from the existing limit of 15% and 3% to

> 18% and 5% respectively for the purposes of both Articles 15(4) and 16(4) of the Constitution of India."

ಇದು ನೀವು ಎತ್ತಿರತಕ್ಕ ಪ್ರಶ್ನೆ. ಇದು ಏಕೆ? ಇದ್ದದನ್ನು ಏತಕ್ಕೆ ರೀಕ್ಯಾಸ್ಟ್ ಮಾಡಿದಿರಿ ಎಂದು. I will come to that. 'The order comes into force with imediate effect.' ಈ ಆರ್ಡರ್ ಬಂದಮೇಲೆ This order was challenged in the Supreme Court. This government order was challenged in the Supreme Court in Writ Petition No. 438/94. ರಿಟ್ ಪಿಟಿಷನ್ ಮಾಡಿದ ಕೂಡಲೇ ಅದರಲ್ಲಿ ಆಗಸ್ಟ್ 30 1994ಕ್ಕೆ ಒಂದು ಇಂಟರಿಮ್ ಆರ್ಡರನ್ನು ಕೊಟ್ಟರು. On 30th August, 94 an interim order was given staying the whole reservation order. Again representation was made. ಕಡೆಗೆ ಆರ್ಡರ್ ಬಂದಮೇಲೆ ಏನಾಯಿತೆಂದರೆ ಎಂಟೈರ್ ರಿಸರ್ವೇಷನ್ ಆರ್ಡರ್ ಅನ್ನೇ ಸ್ಟೇ ಮಾಡಿದರು. Then we had to make submission before the Supreme Court Again, the State Government. It was taken up for hearing on 9.9.94. on 9.9.94 the Supreme Court passed this order. This is still pending before the Supreme Court now. ಅವರು ಏನು ಹೇಳುತ್ತಾರೆಂದರೆ,

> "We make the interim order passed by this Court on August 30, 94 absolute."

> This is one.

> "The State Government shall be at liberty to make reservations in terms of the law laid down by this court in Indira Sahaney case. We make it clear that the State can make reservation up to 50% inclusive of Scheduled Castes and Scheduled Tribes and other Backward Classes. List the matter on 8th November 94."

ಈ ಆರ್ಡರ್ ಇಷ್ಯೂ ಮಾಡುವಾಗ The total reservation went right up to 69%. The total reservation went right up to 69%. Ultimately, it said 'Your reservation, you must reduce it. Bring it within 50%' ಕೂಡಲೇ 50 ಪರ್ಸೆಂಟ್ ಮಾಡಬೇಕಾದರೆ ಏನು ಮಾಡಬೇಕಾಯಿತು? 69 ಪರ್ಸೆಂಟ್‌ನಿಂದ ಇಳಿಸಬೇಕಾಯಿತು. 19% will have to be reduced. 19 ಪರ್ಸೆಂಟ್ ರೆಡ್ಯೂಸ್ ಮಾಡಬೇಕಾದ ಪರಿಸ್ಥಿತಿ ಬಂದಾಗ ಶೇಕಡ 50ರೊಳಗೆ ಉಳಿಸಿಕೊಳ್ಳಬೇಕು. One argument which Mr. Kharge advances is 50 ಪರ್ಸೆಂಟ್ ಒಳಗೆ ನೀವು ಅದನ್ನು ತರಬೇಕಾದರೆ 18:5 ಪರ್ಸೆಂಟ್ ಏತಕ್ಕೆ ರೆಡ್ಯೂಸ್ ಮಾಡಿದಿರಿ ಎಂದು. That is the crux. That is the crux. Sir, when the reservation provided for 69% backward communities then got 27% and other communities got 9%, 11%, Scheduled Castes

18% and Scheduled Tribes 5%. It went right up to 69%. so, 19% will have to be reduced to be brought within 50%. ಈ ಪ್ರಶ್ನೆ ಬಂದಾಗ ಏನಾಯಿತು ಎಂದರೆ Correspondingly reservations in respect of all categories, ಕಡಿಮೆ ಮಾಡಬೇಕಾದ ಪರಿಸ್ಥಿತಿ ಬಂತು. ಆ ಪರಿಸ್ಥಿತಿ ಬಂದಾಗ ಏನಾಯಿತು, 18 ಪರ್ಸೆಂಟ್ ಮತ್ತು 5 ಪರ್ಸೆಂಟ್, ಇದ್ದದ್ದು 15 ಪರ್ಸೆಂಟ್, 3 ಪರ್ಸೆಂಟ್‌ಗೆ ವಾಪಸ್ ಬಂತು. ಅದು 1978ರ ಸರ್ಕಾರಿ ಆದೇಶದ ನಂತರ ಹಿಂದುಳಿದ ವರ್ಗಗಳಿಗೆ ಸಂಬಂಧಪಟ್ಟ ಹಾಗೆ ಅದು ಎಲ್ಲಿಗೆ ಬಂತು ಎಂದರೆ, ವರ್ಗ-1 4 ಪರ್ಸೆಂಟ್, ವರ್ಗ-2ಎ 15 ಪರ್ಸೆಂಟ್, ವರ್ಗ-2ಬಿ 4 ಪರ್ಸೆಂಟ್, ವರ್ಗ-1 ಬ್ಯಾಕ್‌ವರ್ಡ್ ಕಮ್ಯುನಿಟೀಸ್ ಪೋಸ್ಟ್ ಬ್ಯಾಕ್‌ವರ್ಡ್, ವರ್ಗ-2ಎ ಬ್ಯಾಕ್‌ವರ್ಡ್ ಅವರಿಗೆ 15+4=19 ಪರ್ಸೆಂಟ್, ಮುಂದೆ 27 ಪರ್ಸೆಂಟ್ ಆಡ್ ಮಾಡಿದ್ದರು. ಈಗ 8 ಪರ್ಸೆಂಟ್ ರಿಡಕ್ಷನ್ ಆಯಿತು, ವರ್ಗ-2ಬಿ ಶೇಕಡ 4, ವರ್ಗ-2ಬಿ ಎಂಬುದು ಮುಸ್ಲಿಮ್ಸ್, ವರ್ಗ-3ಎಗೆ ಬಂದಿರತಕ್ಕದ್ದು ಬ್ಯಾಕ್‌ವರ್ಡ್ ಒಕ್ಕಲಿಗ ಮತ್ತು ಇತರ ಕಮ್ಯುನಿಟಿಗಳು. ಅವರಿಗೆ 4 ಪರ್ಸೆಂಟ್, ವರ್ಗ-3ಬಿ ಬ್ಯಾಕ್ವರ್ಡ್ ಲಿಂಗಾಯಿತ ಮತ್ತು ಇತರ ಕಮ್ಯುನಿಟಿಗಳು. ಪರಿಷಿಷ್ಟ ಜಾತಿ 15 ಪರ್ಸೆಂಟ್, ಪರಿಶಿಷ್ಟ ಪಂಗಡ 3 ಪರ್ಸೆಂಟ್ ಒಟ್ಟಾರೆ 50 ಪರ್ಸೆಂಟ್. ನಿಜ, ನಾವು 15 ಪರ್ಸೆಂಟ್ ಅನ್ನು 18 ಪರ್ಸೆಂಟ್‌ಗೆ ಏರಿಸಬೇಕು, 3 ಪರ್ಸೆಂಟ್‌ನ್ನು 5 ಪರ್ಸೆಂಟ್‌ಗೆ ಏರಿಸಬೇಕು ಅಂದರೆ 18+4=23 ಪರ್ಸೆಂಟ್.

The argument in proportion to the population, ಮಾಡುವುದಾದರೆ ಎಲ್ಲೋ ಒಂದು ಕಡೆ 5 ಪರ್ಸೆಂಟ್ ಅನ್ನು ಬಾಕಿ ಇರತಕ್ಕ ಕೆಟಗರಿಗಳಿಗೆ ಕೊಟ್ಟಿರತಕ್ಕದ್ದನ್ನು ಕಡಿಮೆ ಮಾಡ-ಬೇಕು. ಬಾಕಿ ಇರತಕ್ಕ ಬ್ಯಾಕ್ವರ್ಡ್ ಕಮ್ಯುನಿಟಿಗಳಿಗೆ ಕೊಟ್ಟಿರತಕ್ಕ 5 ಪರ್ಸೆಂಟ್ ಕಡಿಮೆ ಮಾಡಿ ಈ 5 ಪರ್ಸೆಂಟ್ ಹೆಚ್ಚಿಗೆ ಮಾಡಬೇಕಾಗುತ್ತದೆ.

This is one aspect. well, I think, let me not discuss much on that. This is another thing. ಈಗ ನಮ್ಮ ಮುಂದಿರತಕ್ಕ ಪ್ರಶ್ನೆ ಯಾವುದು ಎಂದರೆ ಒಂದು ಕಡೆ ರಿಸರ್ವೇಷನ್ 50 ಪರ್ಸೆಂಟ್‌ಗಿಂತ ಜಾಸ್ತಿ ಆಗಬಾರದು ಎನ್ನುವುದು. ಇನ್ನೊಂದು ಕಡೆ ಪ್ರಮೋ-ಷನ್ ಕೊಡತಕ್ಕ ಸಂದರ್ಭದಲ್ಲಿ ನೀವು ಯಾವುದನ್ನು ಫಿಕ್ಸ್ ಮಾಡಿದ್ದೀರಿ ಅದಕ್ಕಿಂತ ಜಾಸ್ತಿ ಆಗ-ಬಾರದೆಂದು ಹೇಳತಕ್ಕದ್ದು. That is the case of Shahapur 1995. ಆ ಕೇಸ್‌ನಲ್ಲಿ ಅದನ್ನು ಹೇಳಿದ್ದಾರೆ.

Sir, we have got before us 3 Supreme Court decisions Now, one is Indira Sahaney's case. Then again in 1995 relating these reservations and 15% and 3% ಅಥವಾ ನೀವು ಎಷ್ಟು ಪ್ಯಾರಾಮೀಟರ್ ಫಿಕ್ಸ್ ಮಾಡುತ್ತೀರಿ ಅದಕ್ಕೆ ಸಂಬಂಧಪಟ್ಟ ಹಾಗೆ ಇರತಕ್ಕ ರಿಸರ್ವೇಷನ್ ಉಂಟು. ಈಗ ಅವರು 77ನೇ ತಿದ್ದುಪಡಿಯನ್ನು ನಮ್ಮ ಮುಂದೆ ಇಟ್ಟಿದ್ದಾರೆ, 77th amendment provides for reservations in pro-

motions which we are already having. ನಾವು ಅದನ್ನು ಕಡಿಮೆ ಮಾಡಲಿಲ್ಲ, ಅದೇ ರೀತಿ ಮುಂದುವರಿಯುತ್ತಾ ಉಂಟು, ಇನ್ನೂ ಅದನ್ನು ಮುಂದುವರಿಸಿಕೊಂಡು ಹೋಗಬೇಕಾಗಿರ-ತಕ್ಕದ್ದು, ಆದುದರಿಂದ ಮಿತ್ರರಾದ ಶ್ರೀ ಖರ್ಗೆಯವರಿಗೂ ಮತ್ತು ಸದನದ ಎಲ್ಲ ಮಾನ್ಯ ಸದಸ್ಯ-ರಿಗೂ ಹೇಳುತ್ತಿದ್ದೇನೆ, ನಮ್ಮ ಸರ್ಕಾರ ಇವತ್ತು ಈ ರಿಸರ್ವೇಷನ್ ಅನ್ನು ಮುಂದುವರಿಸಿಕೊಂಡು ಹೋಗಬೇಕೆಂದು ಹೇಳತಕ್ಕ ಚಿಂತನೆ ಏನಿದೆ ಇದರಲ್ಲಿ ಬೇರೆ ಅಭಿಪ್ರಾಯ ಇಲ್ಲ. 50 ಪರ್ಸೆಂಟ್ ಒಳಗೆ ಇದನ್ನು ತರಬೇಕೆಂಬುದು ಸುಪ್ರೀಂ ಕೋರ್ಟಿನವರ ಒಂದು ಆದೇಶ.

SRI M. MALLIKARJUNA KHARGE :- I know that is your trick.

ಶ್ರೀ ಎಂ.ಸಿ. ನಾಣಯ್ಯ:- ನೋಡಿ, ನಾನು ಇದನ್ನು ಹೇಳಿಬಿಟ್ಟರೆ ಟ್ರಿಕ್ ಅಂತೆ. ನೀವು ಹೇಳುತ್ತಾ ಇರುವುದು ಸರಿ ನಾನು ಹೇಳುತ್ತಾ ಇರುವುದು ಟ್ರಿಕ್ಕಾ? What is the trick? I am not interested in playing jugglery or am I interested in getting reservation. I am not getting any reservation. All along I have been in a forward community.

SRI. M. MALLIKARJUNA KHARGE:- Don't forget that you are a minister. You are representing 4½ crores of people.

SRI M.C. NANAIAH:- You were also minister. I am also a minister now. You may become minister tomorrow. But what is the trick? In what way I am interested about this? Please tell me.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಸ್ವಲ್ಪ ಸಮಾಧಾನವಾಗಿ ಕೇಳಿ. I fail to understand why you are arguing in a negative manner. ಇರಲಿ, ಈಗ ಸೆಂಟ್ರಲ್ ಗೌರ್ನಮೆಂಟ್ ಷಡ್ಯೂಲ್ಡ್ ಕ್ಯಾಸ್ಟ್ ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ 22½ ಪರ್ಸೆಂಟ್ ಕೊಡುತ್ತಾರೆ. ಪ್ಲಸ್ ಬ್ಯಾಕ್‌ವರ್ಡ್ ಕ್ಲಾಸಸ್ 27. Then how come the central government has given 22½% plus backward class 27. ನೀವು ಜಗಳ ಹಚ್ಚಬೇಕು ಎಂದು, ನೋಡಪ್ಪ ನಿಮ್ಮದು ಕೇಳುತ್ತಿದ್ದಾರೆ ಎಂದು ಬ್ಯಾಕ್‌ವರ್ಡ್ ಕ್ಲಾಸ್‌ಗೆ ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ಜಗಳ ಹಚ್ಚಬೇಕು ಎಂದು ಮಾಡಿದ್ದೀರೋ? ನೀವು ಸಿಗದೇ ಇದ್ದವರಿಗೆ, ಯಾರು ಅರ್ಹರಿಲ್ಲದೇ ಇರುವವರಿಗೆ ಅರ್ಹತೆ ಕೊಟ್ಟು ಇವರು ಕೇಳುವುದಕ್ಕೆ ಹೋದಾಗ ನಿಮಗೇನು ಮಾಡುವುದಕ್ಕಾಗುತ್ತಪ್ಪ, ನಾವು ಎಲ್ಲಾ ತೆಗೆಯಬೇಕು, ನೋಡಿ ಬ್ಯಾಕ್‌ವರ್ಡ್ ಕ್ಲಾಸ್ 'ಎ' ಗ್ರೂಪ್‌ನಲ್ಲಿ ತೆಗೆದಿದೆ, 'ಬಿ' ಗ್ರೂಪ್ ತೆಗೆದಿದೆ, 'ಸಿ' ಗ್ರೂಪ್ ತೆಗೆದಿದೆ, 'ಡಿ' ಗ್ರೂಪ್, ಇಲ್ಲಾ ಅಂದರೆ ಸ್ಪೆಷಲ್ ಗ್ರೂಪ್, ನೀವೆಲ್ಲಾ ಲಿಂಗಾಯಿತರಲ್ಲಿ ಬಡವರಿದ್ದೀರಿ, ಒಕ್ಕಲಿಗರಲ್ಲಿದ್ದೀರಿ, ನಿಮ್ಮದನ್ನು ನೋಡಿ, ಅವರು ಪುನಃ ಷೆಡ್ಯೂಲ್ಡ್ ಕ್ಯಾಸ್ಟ್‌ನವರು ಕಸಿದುಕೊಳ್ಳಬೇಕು ಎನ್ನುತ್ತಾರೆ, ಪುನಃ ಅವರು ಐದು ಪರ್ಸೆಂಟ್ ಕೇಳುತ್ತಾ ಇದ್ದಾರೆ, ಅತಿ ಆಯಿತು ಅವರದು ಎಂದು ಹೀಗೆ ಎಕ್ಸ್‌ಪ್ಲೈನ್ ಮಾಡತಕ್ಕ ಲೆಟರ್ ಇತ್ತು. ಅದಕ್ಕೇ ಹೇಳಿದೆ. ಅದು ಜಿ.ಒ.

ಶ್ರೀ ಎಂ.ಸಿ. ನಾಣಯ್ಯ:- ಅದು ನಿಮ್ಮ ಕಾಲದಲ್ಲೇ ಆಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇರಲಿ, ಹೇಳುವ ಮೆಥೆಡ್ ಇರುತ್ತದೆ, ನೀವು ಎಕ್ಸಪ್ಲೈನ್ ಮಾಡುವ ಧಾಟಿಯೂ ನಮಗೆ ಗೊತ್ತಾಗುತ್ತಾ ಇದೆ; ಇರಲಿ. ಅದು ನಿಮಗೆ ಬಿಟ್ಟಿದ್ದು because you have got the prerogative to explain. ಆದರೆ ಅಧ್ಯಕ್ಷರೇ, ನಾನು ಕೇಳುತ್ತೇನೆ. ಕೇಂದ್ರ ಸರ್ಕಾರದವರು ಬ್ಯಾಕ್ ವರ್ಡ್ ಕ್ಲಾಸ್‌ಗೆ 27 ಪರ್ಸೆಂಟ್ ಕೊಟ್ಟು ಷೆಡ್ಯೂಲ್ಡ್ ಕ್ಯಾಸ್ಟ್‌ಗೂ ಕೂಡ 22½ ಪರ್ಸೆಂಟ್ ಕೊಡುತ್ತಾರಲ್ಲ ಹೇಗೆ? ಅವರು ಹೇಗೆ ಮಾಡಿದರು? ಇಲ್ಲಿ ಏತಕ್ಕೆ ಮಾಡುವುದಕ್ಕಾಗುವುದಿಲ್ಲ? ಇದು ಒಂದು. ಎರಡನೆಯದು ಗುಜರಾತ್ ಮತ್ತು ಮಧ್ಯಪ್ರದೇಶದಲ್ಲಿ ಎಸ್.ಸಿ./ಎಸ್.ಟಿ.ಗೆ 27 ಪರ್ಸೆಂಟ್ ರಿಸರ್ವೇಷನ್ ಇದೆ. ಪಾಪುಲೇಷನ್ ಕಾರಣಕ್ಕೆ. ಹೌದಾ? ಇಲ್ಲೂ ಕೇಳುವುದು ಅದೇನೆ. ಅದಕ್ಕಾಗಿ ನಾನು ಹೇಳುತ್ತೇನೆ, ಮಾಡಬೇಕು ಎಂದು ಮನಸ್ಸಿದ್ದರೆ ನೀವು ಕರೆದು, ಕುಳಿತು ಎಲ್ಲಿ ಏನು ಮಾಡಬೇಕು ಅದನ್ನು ನೀವು ಮಾಡಬೇಕು. ಈ ವಾದ ಮುಂದಿಟ್ಟು ನೀವು ಹೇಳಿ, ನೀವೇ ಮಾಡಿ ಹೇಗೆ ಮಾಡುತ್ತೀರಿ, ಯಾರನ್ನು ತೆಗಿ ಅಂತೀರಿ ಅಂದರೆ ನಮಗೆ ಅವರಿಗೆ ಜಗಳ ಆಗಬೇಕು ನಾಳೆ ಮುಂಜಾನೆ ಹೊರಗೆ ಹೋದಮೇಲೆ ಅಂತಾನಾ? ನ್ಯಾಯ ಕೊಡುವವರು ಇದನ್ನು ಕೇಳಬಾರದು. ನ್ಯಾಯ ಕೊಡುವವರು ಏನು ಮಾಡಬೇಕು? ಯಾವರೀತಿ ಎಲ್ಲೆಲ್ಲಿ ಸಾಧ್ಯ-ವಿದೆ ಅಲ್ಲಿ ಅಡ್ಜಸ್ಟ್ ಮಾಡಿ, ಇದು ನ್ಯಾಯ ಕೊಟ್ಟಿದ್ದೇವಪ್ಪ, ನೀವು ಸ್ವಲ್ಪ ತಾಳಿ, ನೀವು ಮೊದಲು ಊಟ ಮಾಡಿರಿ, ಯಾರು ಉಪವಾಸ ಇದ್ದಾರೋ ಅವರಿಗೆ ಕೊಡೋಣ ಎಂದು ನೀವೇನಾದರೂ ಹೇಳಿದರೆ ಅದಕ್ಕೇನಾದರೂ ಅರ್ಥ ಬರುತ್ತದೆ. ಇಲ್ಲದಿದ್ದರೆ ನಮಗೆ ಎಕ್ಸಪ್ಲೈನ್ ಮಾಡುವುದಕ್ಕೆ, ಹೊರಗಡೆ ಹೇಳುವುದಕ್ಕೆ, ಹೀಗೀಗೆಲ್ಲಾ ನಾವು ಎಲ್ಲರಿಗೂ ಕೊಟ್ಟಿದ್ದೆವು, ಖರ್ಗೆಯವರು ಇಲ್ಲೆಲ್ಲಾ ಡಿಮ್ಯಾಂಡ್ ಮಾಡಿ ಕಸಿದು ಕೊಡು ಎನ್ನುತ್ತಾರೆ ನೋಡಪ್ಪ, ಕೊಡುವುದು ಒಳ್ಳೆಯದೇ ಎಂದು ಕೇಳಿದರೆ ಇದಕ್ಕೇನು ಎಕ್ಸ್‌ಪ್ಲನೇಷನ್ ಕೊಡುವುದಕ್ಕಾಗುತ್ತದೆ? ಅದಕ್ಕೆ ನಾನು ಹೇಳಿದಾಗ ಅವರು ಸಿಟ್ಟಿಗೆ ಬಂದರು ಟ್ರಿಕ್ ಅಂತ. ನಾನು ಬೇರೆ ಶಬ್ದ ಉಪಯೋಗ ಮಾಡಬೇಕು ಅಂದರೆ ನಮ್ಮಲ್ಲಿ ವೊಕ್ಯಾಬುಲರಿ ಕಡಿಮೆ ಇದೆ, ಅವರಲ್ಲಿ ಸ್ವಲ್ಪ ವೊಕ್ಯಾಬುಲರಿ ಜಾಸ್ತಿ ಇದೆ. ಅನೇಕ ಪದ ಉಪಯೋಗ ಮಾಡುತ್ತಾರೆ. ಏಕೆಂದರೆ ಅವರು ಇಂಟೆಲಿಜೆಂಟ್ ಮ್ಯಾನ್, ಒಳ್ಳೆಯ ಅಡ್ವೋಕೇಟ್. ಕೂರ್ಗ್‌ನಿಂದ ಬಂದಿದ್ದಾರೆ. ಹೀಗೆ ಅನೇಕ ಅರ್ಹತೆಗಳಿವೆ ಅವರಿಗೆ. ನಮಗೆ ನಮ್ಮ ಭಾಷೆಯೂ ಬೇರೆ. ನಮ್ಮದು ಕಾನ್‌ವೆಂಟ್ ಸ್ಕೂಲ್ ಅಲ್ಲ. ನಮ್ಮವೆಲ್ಲಾ ಹಳ್ಳಿ ಸ್ಕೂಲುಗಳು, ಹೆಚ್ಚೂ ಕಡಿಮೆ ಆಗುತ್ತದೆ. ಬಹಳಷ್ಟು ಶಬ್ದ ಪ್ರಯೋಗ ಮಾಡುವುದಕ್ಕೆ ಅವರಿಗೆ ಆಗುತ್ತದೆ. ಆದರೆ ಆ ಬುದ್ಧಿವಂತಿಕೆ, ಆ ವೊಕ್ಯಾಬುಲರಿ, ಆ ಇಂಟೆಲಿಜೆನ್ಸ್, ಆ ಲೀಗಲ್ ನಾಲೆಡ್ಜ್ ಉಪಯೋಗಿಸಿ ತಾವು ಇಲ್ಲಿ 22 ಪರ್ಸೆಂಟ್ ತರುವುದಕ್ಕೆ ಏನಾದರು ಮಾಡಿ ಎಂದು ನಿಮ್ಮ ಮುಖಾಂತರ ಹೇಳುತ್ತೇನೆ. ಅದೆಲ್ಲಾ ಇದಕ್ಕೆ ಉಪಯೋಗವಾಗಲಿ.

ಉಪಾಧ್ಯಕ್ಷರು:- ಅವರು ಹೇಳುವುದಕ್ಕೆ ಬಿಡಿ. ಪೂರಾ ಹೇಳುವುದಕ್ಕೆ ಬಿಡಿ. ನೀವು ನಡುವೆ ಡಿಸ್ಟರ್ಬ್ ಮಾಡಿದರೆ ಆಗುವುದಿಲ್ಲ.

ಶ್ರೀ ಸಿ.ಹೆಚ್. ವಿಜಯಶಂಕರ್:- ಸನ್ಮಾನ್ಯ ಅಧ್ಯಕ್ಷರೆ, ಈಗ ಜನಸಂಖ್ಯೆ ಆಧಾರದ ಮೇಲೆಯೂ ಕೂಡ ಮೀಸಲಾತಿ ಕೊಡಬೇಕು ಎನ್ನುವುದು ಒಂದು ವಿಚಾರ. ಸುಪ್ರೀಂ ಕೋರ್ಟ್ ಆದೇಶದ ಅನ್ವಯ 50 ಪರ್ಸೆಂಟನ್ನು ಯಾವುದೇ ಕಾರಣಕ್ಕೆ ಮೀರಬಾರದು ಎನ್ನುವುದು ಸರ್ಕಾರದ ಮುಂದಿರುವ ಇನ್ನೊಂದು ವಿಚಾರ. ಈ ಒಂದು ಸಂದರ್ಭದಲ್ಲಿ ಸರ್ಕಾರ, ಸುಪ್ರೀಂ ಕೋರ್ಟ್ ಆ ತೀರ್ಮಾನ ಕೊಡುವಂಥ ಸಮಯದಲ್ಲಿ ಬಹಳ ಸ್ಪಷ್ಟವಾಗಿ ಅದರಲ್ಲಿ ಕಾಣಿಸಿದೆ ಎಂದು ನಾನು ಭಾವಿಸುತ್ತೇನೆ. ಏನಾದರೂ ಹೆಚ್ಚುವರಿ ರಿಸರ್ವೇಷನನ್ನು ಸರ್ಕಾರ ಅಳವಡಿಸಬೇಕು ಎಂದು ಬಯಸಿ-ದರೆ ಸಂವಿಧಾನದ ತಿದ್ದುಪಡಿ ಮಾಡದೇ ಬೇರೆ ದಾರಿ ಇಲ್ಲ ಎನ್ನುವ ವಿಚಾರವನ್ನು ತಿಳಿದು-ಕೊಂಡಿರುವುದರಿಂದ, ಹೆಚ್ಚುವರಿ ಮೀಸಲಾತಿ ರಾಜ್ಯ ಸರ್ಕಾರ ಕೊಡುವುದಕ್ಕೆ ಅವಕಾಶ ಮಾಡಿ-ಕೊಡುವ ವಿಚಾರವನ್ನು ಅಳವಡಿಕೆ ಮಾಡಿಕೊಳ್ಳುವುದಕ್ಕಾಗಿ ಏತಕ್ಕೆ ಸಂವಿಧಾನ ತಿದ್ದುಪಡಿ ಮಾಡು-ವುದಕ್ಕೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ಮಾಡಬಾರದು ಎಂದು ನಾನು ಈ ಸಮಯದಲ್ಲಿ ಕೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀಮತಿ ಪ್ರಮೀಳ ನೇಸರ್ಗಿ:- ಸನ್ಮಾನ್ಯ ಉಪಾಧ್ಯಕ್ಷರೆ, ಮಂಡಲ್ ಕಮಿಷನ್ ಜಡ್ಜ್‌ಮೆಂಟ್ ಪ್ರಕಾರವಾಗಿ 27 ಪರ್ಸೆಂಟ್ ಮೇಲೆ ತಾವು ಬ್ಯಾಕ್‌ವರ್ಡ್ ಕ್ಲಾಸಸ್‌ಗೆ ಕೊಡುವುದಕ್ಕೆ ಬರುವುದಿಲ್ಲ. ನೀವು ಆ ನೋಟಿಫಿಕೇಷನ್ ಏನು ತಂದಿದ್ದೀರಿ ಅದರಲ್ಲಿ 18+5= 23 ಪರ್ಸೆಂಟ್ ಏನು ಕೊಟ್ಟಿದ್ದರು ಪ್ಲಸ್ 27 ಪರ್ಸೆಂಟ್ ನೀವು ಬ್ಯಾಕ್‌ವರ್ಡ್ ಕ್ಲಾಸಸ್‌ಗೆ ಕೊಟ್ಟರೆ ಯಾವ ಸಂವಿಧಾನವನ್ನೂ ನೀವು ಮೀರಿದಂತಾಗುವುದಿಲ್ಲ, ತಪ್ಪೇನೂ ಆಗುವುದಿಲ್ಲ. ಆದರೆ ನೀವು ಮಾಡಿರುವ ತಪ್ಪೇನು ಅಂದರೆ 18+5 ಇದ್ದುದನ್ನು ನೀವು ರೆಡ್ಯೂಸ್ ಮಾಡಿ 27 ಪರ್ಸೆಂಟನ್ನು ಜಾಸ್ತಿ ಮಾಡಿರತಕ್ಕಂಥದ್ದು ತಾವು ಮಾಡಿರತಕ್ಕ ತಪ್ಪು ಎನ್ನುವುದನ್ನು ದಯವಿಟ್ಟು ಮಂಡಲ್ ಕಮಿಷನ್ ಜಡ್ಜಮೆಂಟ್ ಏನು ಬಂದಿದೆ ಎನ್ನುವುದನ್ನು ತರಿಸಿ ನೋಡಿ. ಅದಕ್ಕೋಸ್ಕರವೇ ಸೆಂಟ್ರಲ್ ಗೌರ್ನಮೆಂಟಿನಲ್ಲಿ ಇವತ್ತು 22½ ಪರ್ಸೆಂಟ್ ಎಸ್.ಸಿ.ಎಸ್.ಟಿ.ಗೆ ಕೊಟ್ಟಿರುವಂಥದ್ದು; 27 ಪರ್ಸೆಂಟ್ ಬ್ಯಾಕ್‌ವರ್ಡ್ ಕ್ಲಾಸಸ್‌ಗೆ ಇಟ್ಟಿರುವುದು. ಅದೇ ಪ್ರಕಾರ ನಾವೂ ಇಡಬೇಕಾಗುತ್ತದೆ. ಆದ್ದರಿಂದ ನೀವು ಇವತ್ತು ಜಾರಿಸಿಕೊಂಡು, ಯಾರನ್ನು ಜಾಸ್ತಿ ಮಾಡಬೇಕು ಎಂದು ಕಾನೂನು ಪ್ರಕಾರ ಕೇಳುತ್ತಿದ್ದಾರೆ ಮಾನ್ಯ ಖರ್ಗೆಯವ-ರಾಗಲೀ ಅಥವಾ ಮಾನ್ಯ ರಾಮಕೃಷ್ಣ ಅವರಾಗಲೀ ಕೇಳುವುದರಲ್ಲಿ ತಪ್ಪಿಲ್ಲ. ತಾವು ಮಾಡಿರತಕ್ಕ ನೋಟಿಫಿಕೇಷನ್ ಏನಿದೆ ಅದು ಆರ್ಟಿಕಲ್ 77 ಅಮೆಂಡ್‌ಮೆಂಟ್ ಆದಮೇಲೆ ಆಗಿರತಕ್ಕ ತಪ್ಪನ್ನು ಸರಿ ಮಾಡಿ ತಕ್ಷಣ ನೀವು ನೋಟಿಫಿಕೇಷನ್ ಹೊರಡಿಸಬೇಕಾದ್ದು ನಿಮ್ಮ ಧರ್ಮ. ಅದನ್ನು ಮಾಡ-ಬೇಕು. ಅದೇ ಸಮಯದಲ್ಲಿ ಮಂಡಲ್ ಕಮಿಷನ್ ಜಡ್ಜ್‌ಮೆಂಟನ್ನೂ ಹೇಳಿದ್ದಾರೆ. ಹಾರಿಜಾಂಟಲ್ ರಿಸರ್ವೇಷನ್‌ನನ್ನು ಕೂಡ ಮಾಡಬೇಕು ಎನ್ನತಕ್ಕ ಮಾತನ್ನು ಮಂಡಲ್ ಕಮಿಷನ್ ಜಡ್ಜ್‌ಮೆಂಟ-ನಲ್ಲಿ ಹೇಳಿದ್ದಾರೆ. ಅವರ ಪ್ರಕಾರವಾಗಿಯೂ ಕೂಡ ಇವತ್ತು ನೀವು ನೋಟಿಫಿಕೇಷನ್ ಹೊರಡಿಸ-ಬೇಕಾಗುತ್ತದೆ. ನೀವು ತರತಕ್ಕ ರಿಸರ್ವೇಷನ್‌ಸಲ್ಲಿ ಅರ್ಧ ಭಾಗ ಹಾರಿಜಾಂಟಲ್ ರಿಸರ್ವೇಷನ್, ತಾವೇನು ಇವತ್ತು ಸರ್ಕಾರದಲ್ಲಿ 33 ಪರ್ಸೆಂಟ್ ಮಹಿಳೆಯರಿಗೆ ಮಾಡಬೇಕು ಎಂದು ಹೇಳುತ್ತಿ-

ದ್ದೀರಲ್ಲ; ಆ ಹಾರಿಜಾಂಟಲ್ ರಿಸರ್ವೇಷನ್‌ನಲ್ಲಿಯೂ ಕೂಡ ಈ ರಿಸರ್ವೇಷನ್‌ನಲ್ಲಿ ಆಗಬೇಕಾಗುತ್ತದೆ. ಅದನ್ನೂ ಕೂಡ ಮಾಡಬೇಕಾಗುತ್ತದೆ. ಆರ್ಟಿಕಲ್ 16(5) ಆಯಿತು, ಮತ್ತಾಯಿತು. ಎಸ್.ಸಿ.ಎಸ್.ಟಿ.ಗಳಲ್ಲಿ 22 ಪ್ಲಸ್ 5 ಪರ್ಸೆಂಟೇಜ್ ಕೊಟ್ಟರೆ ಆ 22 ಪರ್ಸೆಂಟ್‌ನಲ್ಲಿ 11 ಪರ್ಸೆಂಟ್ ಮಹಿಳೆಯರಿಗೆ ರಿಸರ್ವ್ ಆಗಬೇಕು ಎನ್ನುವುದನ್ನು ತಾವು ಮಾಡಬೇಕಾಗುತ್ತದೆ. ಬಾಯಲ್ಲಿ ಮಹಿಳೆಯರಿಗೆ ಕೊಡುತ್ತೇವೆ ಎಂದು ಹೇಳುತ್ತೀರಿ, ಆದರೆ ನೀವು ಮಾಡುತ್ತಾ ಇರತಕ್ಕ ಸಂದರ್ಭದಲ್ಲಿ ನೋಟಿಫಿಕೇಷನ್‌ನಲ್ಲಿ ಏನೂ ಮಾಡಿಲ್ಲ. ಆದ್ದರಿಂದ ಈಗ ಆಗಿರತಕ್ಕ ತಪ್ಪನ್ನು ಸರಿಪಡಿಸಿ ಇಲ್ಲಿ ಏನಾಗಿದೆ ಎನ್ನುವುದನ್ನು ನೀವು ಹೇಳಬೇಕು. ಲಾ, ಕಾನೂನು, ಪದವೀಧರರು ಎಂದು ಎಲ್ಲಾ ಬಹಳ ಚೆನ್ನಾಗಿ ಹೇಳಿದ್ದಾರೆ. ಕಾನೂನು ಅರ್ಥ ಮಾಡಿಕೊಂಡಿದ್ದೀರಿ. ಜಡ್ಜ್‌ಮೆಂಟಿನಲ್ಲಿ ಮಧ್ಯ ನೀವು ಹೇಳಲಿಲ್ಲ. ಇನ್ನೊಂದು ಯಾವುದೋ ಜಡ್ಜ್‌ಮೆಂಟಿದೆ ಎಂದು ನಿಲ್ಲಿಸಿಬಿಟ್ಟಿರಿ. ಅದು ಮಂಡಲ್ ಕಮಿಷನ್ ಜಡ್ಜ್‌ಮೆಂಟ್ ಎನ್ನುವುದನ್ನು ನಾನು ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ. ಅದನ್ನು ಒಂದು ಬುಕ್ಕೇ ಪಬ್ಲಿಷ್ ಮಾಡಿದ್ದಾರೆ. ದಯವಿಟ್ಟು ತರಿಸಿಕೊಂಡು ನೋಡಿ. ಹಾರಿಜಾಂಟಲ್ ರಿಸರ್ವೇಷನ್ ಮತ್ತು 18 ಪ್ಲಸ್ 5 ರಿಸರ್ವೇಷನ್ ಏನು ಮೊದಲಿತ್ತು 23 ಪರ್ಸೆಂಟ್ ಪ್ಲಸ್ 27 ಪರ್ಸೆಂಟ್ ಬ್ಯಾಕ್‌ವರ್ಡ್ ಕ್ಲಾಸಸ್‌ಗೆ, ಅದನ್ನು ಸರಿಸಮಾನವಾಗಿ ಜಾತಿ ಆಧಾರವಾಗಿ ಅವರ ಜನಸಂಖ್ಯೆ ಪ್ರಕಾರವಾಗಿ ತಾವು ಮಾಡಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ:- ಅರ್ಥ ಆಯಿತು ಮಾನ್ಯ ಸಭಾಧ್ಯಕ್ಷರೆ. ಆ ರಿಸರ್ವೇಷನ್‌ನಲ್ಲಿ 50 ಪರ್ಸೆಂಟ್ ಮಹಿಳೆಯರನ್ನು ಸೇರಿಸಿ ಎನ್ನುವುದು ಮೂಲ. ಮಹಿಳೆಯರಿಗೆ 50 ಪರ್ಸೆಂಟ್ ಎಂದು ಹೇಳುತ್ತಿದ್ದಾರೆ. ನಾವು 33 ಪರ್ಸೆಂಟ್ ಕೊಡಬೇಕು ಎಂದು ತೀರ್ಮಾನ ಮಾಡಿಬಿಟ್ಟಿದ್ದೇವೆ. ಈಗ ಟೀಚರ್ಸ್ ರೆಕ್ರೂಟ್‌ಮೆಂಟಿನಲ್ಲಿ 25 ಪರ್ಸೆಂಟ್ ಹಾಕೇಬಿಟ್ಟಿದ್ದೇವೆ ಮತ್ತು 33 ಪರ್ಸೆಂಟ್ ಮಹಿಳೆಯರಿಗೆ ಎಲ್ಲಾ ಹುದ್ದೆಗಳಲ್ಲಿ ಕೊಡಬೇಕು ಎನ್ನುವುದಕ್ಕೆ ಸರ್ಕಾರಿ ಆಜ್ಞೆಯೂ ಆಗಿದೆ. ಅದನ್ನು ಕೊಡಲೇಬೇಕು.

ಶ್ರೀಮತಿ ಪ್ರಮಿಳಾ ನೇಸರ್ಗಿ:- ಕೆ.ಎಸ್.ಆರ್.ಟಿ.ಸಿ.ಗೆ ಮೊನ್ನೆ ನೋಟಿಫಿಕೇಷನ್ ಹೊರಟಿದೆ. ಮಹಿಳೆಯರಿಗೆ ರಿಸರ್ವೇಶನ್ ಇಟ್ಟಿಲ್ಲ. ಕೆ.ಎಸ್.ಆರ್.ಟಿ.ಸಿ.ಯಲ್ಲಿ ರೆಕ್ರೂಟ್‌ಮೆಂಟಿಗೆ ನೀವು ನೋಟಿಫಿಕೇಷನ್ ಹೊರಡಿಸಿದ್ದೀರಿ. ಆದರೆ ಮಹಿಳೆಯರಿಗೆ ರಿಸರ್ವೇಷನ್ ಇಟ್ಟಿಲ್ಲ. ಡಿ.ವೈ.ಎಸ್..ಪಿ. ಪೋಸ್ಟಿಗೆ ಮೊನ್ನೆ ಪೋಲೀಸ್ ಡಿಪಾರ್ಟ್‌ಮೆಂಟಿನಲ್ಲಿ ತೆಗೆದುಕೊಂಡಾಗ ಮಾಡಿಲ್ಲ. ಯಾವುದರಲ್ಲೂ ಮಾಡಿಲ್ಲ.

ಶ್ರೀ ಎಂ.ಸಿ. ನಾಣಯ್ಯ:- ಯಾವ ಪೋಸ್ಟಿಗೆ? ಡ್ರೈವರ್ ಪೋಸ್ಟಿಗಾ?

ಉಪಾಧ್ಯಕ್ಷರು:- ಡ್ರೈವರ್ ಪೋಸ್ಟಿಗೆ ಹೆಣ್ಣುಮಕ್ಕಳು ಬರುತ್ತಾರೋ?

ಶ್ರೀಮತಿ ಪ್ರಮಿಳಾ ನೇಸರ್ಗಿ:- ಸಿ.ಇ.ಟಿ. ಎಗ್ಸಾಮಿನೇಷನ್ ಆಗಿದೆ. ನಾಳೆ ಮೆಡಿಕಲ್ ಕಾಲೇಜು ಮತ್ತು ಇಂಜಿನಿಯರಿಂಗ್ ಕಾಲೇಜಿಗೆ ರೆಕ್ರೂಟ್‌ಮೆಂಟ್ ಆಗಿ ಆಗಸ್ಟ್ 15ರೊಳಗೆ ರಿಸಲ್ಟ್

...ಪ್ಲಿಕೇಷನ್ ಆಗುತ್ತದೆ. ಅದರಲ್ಲೂ ಕೂಡ ತಾವು ಮಹಿಳೆಯರಿಗೆ ಕೊಟ್ಟಿಲ್ಲ. ತಾವು ಇಲ್ಲಿ ಹೇಳುತ್ತಿದ್ದೀರಿ, ಆದರೆ ನೋಟಿಫಿಕೇಷನ್ ಹೊರಡಿಸಿಲ್ಲ. ಮೆಡಿಕಲ್ ಕಾಲೇಜಿಗೆ ಮತ್ತು ಇಂಜಿನಿಯರಿಂಗ್ ಕಾಲೇಜ್‌ಗಳಿಗೆ ಮಹಿಳೆಯರಿಗೆ ಕೊಡಬೇಕು ಎನ್ನುವ ಬಗ್ಗೆ ಇದುವರೆಗೂ ನೋಟಿಫಿಕೇಷನ್ ಹೊರಡಿಸಿಲ್ಲ, ಒದ್ದಾಡುತ್ತಿದ್ದಾರೆ, ಸರ್ಕಾರ ಬಾಯಲ್ಲಿ ಹೇಳಿದೆ, ನೋಟಿಫಿಕೇಷನ್ ಮಾಡಿಲ್ಲವಲ್ಲ ಎಂದು. ದಯವಿಟ್ಟು ತಾವು ಮಾಡಬೇಕು.

ಶ್ರೀ ಎಂ.ಸಿ. ನಾಣಯ್ಯ:- ಕೆ.ಎಸ್.ಆರ್.ಟಿ.ಸಿ.ಯಲ್ಲಿ ಯಾವ ಹುದ್ದೆಗೆ ಎಂದು ಅರ್ಥವಾಗುತ್ತಿಲ್ಲ. ಡ್ರೈವರ್ ಹುದ್ದೆಗಾ ಎಂದು.

ಶ್ರೀಮತಿ ಪ್ರಮಿಳಾ ನೇಸರ್ಗಿ:- ಏಕೆ? ನಮಗೆ ಡ್ರೈವ್ ಮಾಡುವುದಕ್ಕೆ ಬರುವುದಿಲ್ಲವೇ?

ಶ್ರೀ ವಾಟಾಳ್ ನಾಗರಾಜ್:- ಈಗ ಮಹಿಳೆಯರ ಬಗ್ಗೆ ಮಾತನಾಡುವವರು ಇಲ್ಲಿ ಒಬ್ಬರೇ ಎಂದು ಕಾಣುತ್ತದೆ.

(ಆಡಳಿತ ಪಕ್ಷದ ಸದಸ್ಯರಾದ ಶ್ರೀಮತಿ ಜ್ಯೋತಿ ರೆಡ್ಡಿ, ಶ್ರೀಮತಿ ಬಿ.ಟಿ. ಲಲಿತಾ ನಾಯಕ್ ಅವರು ಕೈ ಎತ್ತಿದರು.)

ಉಪಾಧ್ಯಕ್ಷರು:- ಕೈ ಮಾಡುತ್ತಾರೆ ನೋಡಿ. ಜ್ಯೋತಿ ರೆಡ್ಡಿಯವರು ಕೈ ಮಾಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಸುಮ್ಮನೆ ಕೈ ಎತ್ತಿದರೆ ಆಯಿತೇ ನೀವು? ಇದಾಗುವುದಿಲ್ಲ ಇದು. ಶ್ರೀಮಾನ್ ನಾಣಯ್ಯನವರಿಗೆ ಒಂದು ಸಲಹೆ ಕೊಡುತ್ತೇನೆ. ಅವರು ಮರೆತಿದ್ದಾರೋ ಏನೋ ಗೊತ್ತಿಲ್ಲ. ಸಚಿವ ಸಂಪುಟ ರಚನೆ ಮಾಡುವಾಗ ಶೇಕಡ 35 ಭಾಗ ಮಹಿಳೆಯರಿಗೆ ಕೊಡಲಿಲ್ಲ. ಕೊಟ್ಟಿಲ್ಲ, ಎಲ್ಲಿ ಕೊಟ್ಟಿದ್ದೀರಿ ಹೇಳಿ. ಆಮೇಲೆ ವಿಧಾನಪರಿಷತ್ತಿಗೆ ಆಯ್ಕೆ ಮಾಡುವಾಗ 35 ಪರ್ಸೆಂಟ್ ಕೊಟ್ಟಿಲ್ಲ. ಇವರು ಬರೀ ನಾಟಕ ಆಡುತ್ತಿದ್ದಾರೆ ಪ್ರಮಿಳಾ ಅವರೆ. ನೀವು ಇವರ ಬಗ್ಗೆ ನಂಬಿಕೆ ಇಟ್ಟುಕೊಳ್ಳಬೇಡಿ. ಪಾಪ ನಮ್ಮ ನಾಲ್ಕು ಜನ ಮಹಿಳೆಯರು ಮೂಕ ಪ್ರೇಕ್ಷಕರಾಗಿ ಕುಳಿತಿದ್ದಾರೆ. ಅವರಿಗೆ ಬಾಯಿ, ಕಿವಿ, ಕಣ್ಣು ಎಲ್ಲವೂ ಮುಚ್ಚಿಹೋಗಿದೆ ಪಾಪ. ನನಗೆ ಅವರ ಬಗ್ಗೆ ಬಹಳ ಅನುಕಂಪ ಇದೆ. ಈಗ ಅವರು ನಿಜವಾಗಿಯೂ ಎದ್ದುನಿಂತು ಪ್ರತಿಭಟನೆ ಮಾಡಬೇಕು. ಏನು ನೀವೆಲ್ಲ ಹೀಗೆ ಕುಳಿತಿದ್ದೀರಿ? ಇದು ಸರಿಯಲ್ಲ, ಧೈರ್ಯವಾಗಿ ಹೇಳಬೇಕು. ನಮಗೆ ಅನ್ಯಾಯವಾಗಿದೆ ಎಂದು ಹೇಳಿ ಮಾನ್ಯ ನಾಣಯ್ಯನವರ ಮುಂದೆ ಈಗ ಧರಣಿ ಮಾಡಬೇಕು. ನೀವು ಈ ತರಹ ಕುಳಿತರೆ ಆಗುವುದಿಲ್ಲ. ನಿಮ್ಮ ಪರವಾಗಿ ನಾನು ಬರುತ್ತೇನೆ. ನೀವು ಧೈರ್ಯ ಮಾಡಿ ಬರುವುದಾದರೆ, ಶ್ರೀಮತಿ ಲಲಿತಾ ನಾಯಕ್‌ರವರೇ ನಿಮ್ಮ ನಾಯಕತ್ವದಲ್ಲಿ ನೀವು ಬರುತ್ತೀರಾ ನಾನು ನಿಮ್ಮ ಜೊತೆ ಬರುತ್ತೇನೆ. ಅನ್ಯಾಯವಾಗಿದೆಯೆಂದು ಹೇಳಿ ಸಭಾತ್ಯಾಗ ಮಾಡೋಣ.

ಶ್ರೀಮತಿ ಬಿ.ಟಿ. ಲಲಿತಾನಾಯಕ್:- ಸಭಾತ್ಯಾಗ ಮಾಡುವ ಅವಶ್ಯಕತೆಯೇ ಇಲ್ಲ. ಏಕೆಂದರೆ ನಿಮ್ಮೆಲ್ಲರ ಬೆಂಬಲವಿರುವಾಗ ಧರಣಿ ಮಾಡುವ ಅವಶ್ಯಕತೆ ಇಲ್ಲ. ನೀವುಗಳೆಲ್ಲ ನಮ್ಮ ಪರವಾಗಿ ಬೇಕಾದಷ್ಟು ಮಾತನಾಡುತ್ತೀರಿ, ಬೇಕಾದಷ್ಟು ವಾದ ಮಾಡುತ್ತೀರಿ.

ಶ್ರೀ ವಾಟಾಳ್ ನಾಗರಾಜ್:- ಈ ಸೋಬಾನ ಬೇಡಿ.

ಶ್ರೀಮತಿ ಜ್ಯೋತಿರೆಡ್ಡಿ:- ನೀವು ನಮಗೆ ಬೆಂಬಲ ಕೊಡದಿದ್ದರೂ ಸಹ ನಾವು ಭಯ ಬೀಳುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ವಸ್ತುಸ್ಥಿತಿ ಹೇಳಿ.

ಶ್ರೀಮತಿ ಎನ್. ಜ್ಯೋತಿರೆಡ್ಡಿ:- ನಮಗೆ ಬೆಂಬಲವನ್ನು ಮಾನ್ಯ ವಾಟಾಳ್ ನಾಗರಾಜ್‌ರವರು ಕೊಡದಿದ್ದರೂ ಸಹ ನಾವು ಭಯ ಬೀಳುವುದಿಲ್ಲ. ನೀವು ಮಾತನಾಡುತ್ತಿದ್ದೀರಿ ಅದಕ್ಕೋಸ್ಕರ ನಾವು ಸುಮ್ಮನಿದ್ದೇವೆ ಅದನ್ನು ಕೇಳುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್:- ಸುಮ್ಮನೆ ಕುಳಿತುಕೊಂಡಿದ್ದೀರಿ, ನಿಮ್ಮ ಪ್ರದರ್ಶನ ತೋರಿಸಲಿಲ್ಲವೆ? ನಿಮ್ಮ ಪ್ರದರ್ಶನ ತೋರಿಸಿದ್ದರೆ ನಾವು ಸಂತೋಷಪಡಬಹುದಾಗಿತ್ತು. ಬರೀ ಒಬ್ಬರೇ ಒಬ್ಬರು ಮಹಿಳೆ ಇಡೀ ಸದನದ ತುಂಬಾ ಮಹಿಳೆಯರ ಪರವಾಗಿ . . .

ಉಪಾಧ್ಯಕ್ಷರು:- ಮಾನ್ಯ ಸದಸ್ಯಿಣಿಯವರು ಮಾತನಾಡಲಿಕ್ಕೆ ಅವಕಾಶ ಕೊಡಿ.

ಶ್ರೀ ಹೆಚ್.ಡಿ. ಬಸವರಾಜ್:- ಜನತಾದಳ ಸರ್ಕಾರ ಬರೀ ಬುದ್ಧಿವಾದ ಹೇಳುತ್ತಿದೆಯೇ ವಿನಾಃ ಕಾರ್ಯಗತ ಮಾಡಲಿಲ್ಲ. ಮಾತಿನಲ್ಲಿ ಮಾತ್ರ ಹೇಳುತ್ತಾರೆ, ನಿಮಗೆ ಮಾಡುತ್ತೇವೆ ನಿಮಗೆ ಮಾಡುತ್ತೇವೆ ಎಂದು ಹೇಳಿ ಏನೂ ಮಾಡುವುದಿಲ್ಲ. ಮಂತ್ರಿಮಂಡಲ ರಚನೆ ಮಾಡಿದಾಗ 30 ಪರ್ಸೆಂಟ್ ಮಹಿಳೆಯರಿಗೆ ಕೊಡಬೇಕೆಂದು ಹೇಳುವವರು ಅಲ್ಲಿ ಸರಿಯಾದ ಯೋಚನೆ ಇಲ್ಲ. ಮುಂದೆ ಮಾಡುವಾಗ ನೀವು ಮಾಡಿ ಎಂದು ಹೇಳಲಿಕ್ಕೆ ಹೋಗುತ್ತಾರೆ ಅಷ್ಟೆ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಮಾನ್ಯ ಉಪಾಧ್ಯಕ್ಷರೆ, ರಾಜ್ಯಸಭೆಗೆ ಮಹಿಳೆಯರನ್ನು ಎಲೆಕ್ಟ್ ಮಾಡಿ ಕಳುಹಿಸಿದರು. ಆಮೇಲೆ ಅಲ್ಲಿ ಹೋಗುವುದು ಬೇಕಾಗಿರಲಿಲ್ಲ. ಎಲೆಕ್ಟ್ ಆದವರಿಂದ ರೆಸಿಗ್ನೇಷನ್ ಕೊಡಿಸಿದರು. ಏನಾಗಿದೆ ಅಂದರೆ, ಮಹಿಳೆಯರಿಗೆ ಅಂತ ತೋರಿಸುವುದು, ನಾವು ಸಣ್ಣಮಕ್ಕಳಿಗೆ ಪೆಪ್ಪರ್‌ಮೆಂಟ್ ಕೊಟ್ಟು ಅಳುವುದನ್ನು ನಿಲ್ಲಿಸಿದಹಾಗೆ ಆ ರೀತಿ ಮಹಿಳೆಯರಿಗೆ ಕೊಟ್ಟಿದ್ದೇವೆ. ಮಹಿಳೆಯರಿಗೆ ಕೊಟ್ಟಿದ್ದೇವೆ ಅಂತ ಭೂತ ತೋರಿಸುವುದು ಮತ್ತೆ ಅವರನ್ನು ವಾಪಸ್ಸು ಕರೆಸುವುದು. ಏನಾಯಿತು ಸ್ವಾಮಿ? ಈಗ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್‌ರವರನ್ನು ರಾಜ್ಯಸಭೆಗೆ ಎಲೆಕ್ಟ್ ಮಾಡಿ ಕಳುಹಿಸಿದಿರಲ್ಲ ಮತ್ತೆ ಏಕೆ ವಾಪಸ್ಸು ಕರೆಸಿಕೊಂಡಿರಿ? ಯೋಚನೆ ಮಾಡಿ? ಅವರು ರಾಜ್ಯಸಭೆಯಲ್ಲಿ ಇದ್ದಿದ್ದರೆ ಸೆಂಟ್ರಲ್ ಗೌರ್ನಮೆಂಟಿನಲ್ಲಿ ಇವತ್ತು ಮಂತ್ರಿಯಾಗಿರುತ್ತಿದ್ದರು. ಅವರು ಮಂತ್ರಿಯಾಗುವುದು ನಿಮಗೆ ಬೇಕಿರಲಿಲ್ಲ, ಆದ್ದರಿಂದ ಇಲ್ಲಿಗೆ ಕರೆಸಿಕೊಂಡಿರಿ.

ಶ್ರೀ ವಾಟಾಳ್ ನಾಗರಾಜ್:- ನಾನು ಈಗ ಈ ಮಾತನ್ನು ಹೇಳಿದರೆ, ನಮ್ಮ ಸಿಂಧ್ಯಾರವರು ಹೇಳುತ್ತಾರೆ ನಾವೆಲ್ಲ ಮಹಿಳೆಯರು ಇಲ್ಲವೆ ಅಂತ. ನಿಜ, ಆ ಪರಿಸ್ಥಿತಿಯಾಗಿದೆ. ನಾವೆಲ್ಲ ಮಹಿಳೆಯರು ಇಲ್ಲವೆ ಅಂದರೆ, ಅದು ಒಪ್ಪಿಕೊಳ್ಳುವಂತಹದ್ದು. ಏಕೆಂದರೆ ಶೇಕಡ 35ರಲ್ಲಿ ಇವರೆಲ್ಲ ಸೇರಿ-

ಬಿಟ್ಟಿದ್ದಾರೆ. ಅವರು ಈ ತರಹ ಅಂತ ಒಪ್ಪಿಕೊಳ್ಳುವುದಾದರೆ ನಾನೇನು ಮಾಡುವುದಕ್ಕಾಗುವುದಿಲ್ಲ. ಹೇಳಿ ನೀವು, ಪುರುಷರು ಅಂದರೆ, ನಾವು ಅಲ್ಲ ನೀವು ಮಹಿಳೆಯರು ಎಂದು ನನ್ನ ಮಾತಿಗೆ ಕುಳಿತಿ-ದ್ದೀರಿ. ಅದಕ್ಕೂ ನೀವು ಉತ್ತರ ಕೊಡುತ್ತಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ನಪುಂಸಕರು ಎಂದು ಹೇಳಿಬಿಟ್ಟಿದ್ದಾರಲ್ಲ ಅದರ ಬಗ್ಗೆ ಹೇಳಬೇಕು ಎಂದು ಕಾಣುತ್ತದೆ. ಎಲ್ಲಾ ವಿಚಾರಗಳು ನಿಮಗೆ ಗೊತ್ತಿದೆ. ನಾನು ಹೇಳಿದ್ದು ನಮ್ಮಲ್ಲೂ ಮಹಿಳೆಯರು ಇದ್ದಾರೆ ಎಂದು.

ಶ್ರೀ ವಾಟಾಳ್ ನಾಗರಾಜ್:- ಈಗ ಮಾನ್ಯ ಸಿಂಧ್ಯಾರವರು ಒಪ್ಪಿಕೊಂಡುಬಿಟ್ಟರು ನಿಜ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ನಮ್ಮ ಪಕ್ಷದ ಹಳೆಯ ಸದಸ್ಯರೆಲ್ಲ ಮಹಿಳೆಯರು ಅಂದರೆ ನಪುಂಸಕರಾಗಿದ್ದಾರೆಂದು ಹೊರಗಡೆ ಹೇಳಿದ್ದಾರಲ್ಲ ಅದಕ್ಕೋಸ್ಕರ ನಾವು ಸುಮ್ಮನೆ ಕುಳಿತಿದ್ದೇವೆ ನಾವು ಯಾರೂ ಪುರುಷರು ಅಲ್ಲ ಎಂದು ಹೇಳಿ ಸಾಬೀತು ಮಾಡಿಕೊಳ್ಳುತ್ತಿದ್ದಾರೆ ಅವರು. ಇರ-ಬಹುದಲ್ಲ, ಅದೇ ಇರಬಹುದೆಂದು ಕಾಣುತ್ತೆ.

ಶ್ರೀಕೆ.ಎಸ್. ಪುಟ್ಟಣ್ಣಯ್ಯ:- ಪುರುಷರು ಮತ್ತು ಮಹಿಳೆಯರ ಬಗ್ಗೆ ಮಾತ್ರ ಮೀಸಲಾತಿಯ ಬಗ್ಗೆ ಮಾತನಾಡುತ್ತಿದ್ದೇವೆ. ನಪುಂಸಕರ ಬಗ್ಗೆ ಯಾರೂ ಮೀಸಲಾತಿ ಮಾತನಾಡುತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಉಪಾಧ್ಯಕ್ಷರೆ, ಇದನ್ನು ಬೇಗ ಮುಗಿಸಿ. ಇದು ಸೀರಿಯಸ್ ಇದೆ. ಡಿಬೇಟ್ ಮಾಡುವುದು ಬೇಡ.

ಶ್ರೀ ಎಂ.ಸಿ. ನಾಣಯ್ಯ:- ಡಿಬೇಟ್ ಅಂದರೆ ಈ ತರಹ ಹಾಸ್ಯ ವ್ಯಂಗ್ಯ ಇರಬೇಕು ಇರಲಿ. Let us not go beyond that. Let us come to the issue now. ಈಗ ಒಂದು 1978ರ ಮೀಸಲಾತಿ ಮುಂಬಡ್ತಿಯಲ್ಲಿ ಯಾವರೀತಿ ಕೊಡಬೇಕೆನ್ನುವ ಆಜ್ಞೆ ಇವತ್ತಿನವರೆಗೂ ಜಾರಿಯಲ್ಲಿದೆ. ಸರ್ಕಾರ ಈ ಮೀಸಲಾತಿ ಯಾವುದು ಇದೆ ಅದನ್ನು ಮುಂದುವರಿಸಬೇಕೆಂದು ಹೇಳುವುದೇ ಸರ್ಕಾರದ ಚಿಂತನೆ. ಎರಡನೆಯದಾಗಿ, ಬ್ಯಾಕಲಾಗ್‌ಗೆ ಸಂಬಂಧಪಟ್ಟ ಹಾಗೆ 1992ರ ರೂಲ್ 8ಕ್ಕೆ ತಂದಿರತಕ್ಕ ತಿದ್ದುಪಡಿ ಯಾವುದು ಇತ್ತು ಆ ತಿದ್ದುಪಡಿಯನ್ನು ನಾಲ್ಕು ಅರ್ಜಿಗಳನ್ನು ನಮ್ಮ ಕೆ.ಎ.ಟಿ.ಯವರು ರದ್ದು ಮಾಡಿದ್ದಾರೆ. ಆ ನಾಲ್ಕು ಅರ್ಜಿಗಳನ್ನು ನಾವು ಸುಪ್ರೀಂಕೋರ್ಟ್‌ಗೆ ತೆಗೆದುಕೊಂಡು ಹೋಗಿ ಎಸ್.ಎಲ್.ಪಿ.ಯನ್ನು ನಾವು ಫೈಲ್ ಮಾಡಿದ್ದೇವೆ. ಆ ಎಸ್.ಎಲ್.ಪಿ. ಯಲ್ಲಿ ತೀರ್ಪು ಬರುವವರೆಗೆ ನಾವು ಕಾಯಬೇಕಾಗುತ್ತೆ. ಬಹುಶಃ ನಾಳೆ ಸುಪ್ರೀಂಕೋರ್ಟ್‌ನಲ್ಲಿ ಬ್ಯಾಕ್‌ಲಾಗ್ 1992ರಲ್ಲಿ ತಂದಿರತಕ್ಕದ್ದು ಸಿಂಧು ಅಂತ ಆದರೆ ಪುನಃ ನಾವು ಅದನ್ನು ಜಾರಿಗೆ ತರು-ತ್ತೇವೆ. ಅದರಲ್ಲಿ ನಾವು ಹಿಂದೆಮುಂದೆ ನೋಡುವುದಿಲ್ಲ. ಮೂರನೆಯದಾಗಿ, ಶ್ರೀಮಾನ್ ಮಲ್ಲಿ-ಕಾರ್ಜುನ ಖರ್ಗೆಯವರು ಎತ್ತಿರತಕ್ಕ ಇತರ ವಿಚಾರಗಳಲ್ಲಿ ನಮ್ಮ ರಾಜ್ಯಂಗಕ್ಕೆ ತಂದಿರತಕ್ಕ 77ನೇ ತಿದ್ದುಪಡಿ ಅದು ಆರ್ಟಿಕಲ್ 16 (4ಎ) ಅದಕ್ಕೆ ಸಂಬಂಧಪಟ್ಟ ಹಾಗೆ ಮತ್ತೆ ಅವರು ಎತ್ತಿರತಕ್ಕ ಇನ್ ಪ್ರಪೋರ್ಷನೇಟ್ ಟು ಪಾಪುಲೇಷನ್ ಎಂದು ಹೇಳತಕ್ಕದ್ದು ಎರಡು ಮತ್ತು ಇದರ ಜೊತೆಯಲ್ಲಿ

ನಮ್ಮ ಇಂದಿರಾ ಸಹಾನಿ ಪ್ರಕರಣದಲ್ಲಿ ನಮ್ಮ ಸುಪ್ರೀಂಕೋರ್ಟ್‌ನವರು ಕೊಟ್ಟಿರತಕ್ಕ ತೀರ್ಪು ಮತ್ತು ಅದರ ಜೊತೆಯಲ್ಲೆ ಇದೇ ತರಹ ಪ್ರಮೋಷನ್ಸ್‌ಗೆ ರಿಸರ್ವೇಷನ್ಸ್‌ನಲ್ಲಿ ಮತ್ತು ಅವರಿಗೆ ಕೊಡ-ಬೇಕಾಗಿರತಕ್ಕ ಪ್ರಮೊಷನ್‌ನ ಮಟ್ಟ ಎಷ್ಟೆಂದು ಹೇಳುವುದರಲ್ಲಿ ಆರ್.ಕೆ. ಸಬರ್‌ವಾಲ್ Vs ಪಂಜಾಬ್ ಸ್ಟೇಟ್ 1995ರ ಈವೊಂದು ತೀರ್ಪು, ಎಲ್ಲ ತೀರ್ಪುಗಳನ್ನು ನಾವು ಸಮಗ್ರವಾಗಿ ಪರಿ-ಶೀಲನೆ ಮಾಡಿ ನಾವು ಇನ್ನೂ ಹೆಚ್ಚಿಗೆ ಇದನ್ನು ಯಾವರೀತಿ ಮಾಡಲಿಕ್ಕೆ ಸಾಧ್ಯವೆಂದು ಹೇಳುವುದರ ಬಗ್ಗೆ ಸರ್ಕಾರ ಇದನ್ನೆಲ್ಲ ಕ್ರೋಢೀಕರಿಸಿ ನಾವು ಚಿಂತನೆ ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಕೆಲಸಕ್ಕೆ ನೀವು ಸುಪ್ರೀಂಕೋರ್ಟ್ ಹೈಕೋರ್ಟ್ ಕೇಳ-ಬೇಕಾಗಿಲ್ಲ. ಉದಾಹರಣೆಗೆ. Enhancement ಏನಿದೆ we have brought it to your notice ಸೆಂಟ್ರಲ್ ಗೌರ್ನಮೆಂಟಿನಲ್ಲಿದೆ, ಗುಜರಾತ್‌ನಲ್ಲಿದೆ, ಮಧ್ಯಪ್ರದೇಶದಲ್ಲಿದೆ. ಇದಕ್ಕೆ ಅಲ್ಲಿಂದ ರೂಲಿಂಗ್ ಬರತಕ್ಕದ್ದಲ್ಲ. It is the discretion of the State and naturally to give adequate representation the government can enhance or reduce. ಅವರು ಹೇಳಿದ ಹಾಗೆ ಏನಿದೆ ಅಂದರೆ certain sections which are not eligible have also been included for various political grounds. ನೀವು ಅದನ್ನು ಯಾವರೀತಿಯಾಗಿ ಮಾಡುತ್ತಿರೋ ಅದು ನಿಮಗೆ ಬಿಟ್ಟಿದ್ದುದು. But we want that this 22½% reser-vation should be given as per 1991 census. ಕಾರಣ ನಾನು ಏಕೆ ಹೇಳಿದೆ ಎಂದರೆ 1978ರಲ್ಲಿ ಏರಿಯಾ ರಿಸ್ಟ್ರಿಕ್ಷನ್ ರಿಮೂವಲ್ ಏನು ಮಾಡಿದರು ಷೆಡ್ಯೂಲ್ಡ್ ಕಾಸ್ಟ್ ಲಿಸ್ಟ್ ಎಕ್ಸ-ಪಾಂಡ್ ಮಾಡಿದರು, ಇದು 1978ರಲ್ಲಿ ಜಾರಿಯಲ್ಲಿ ಬಂತು. ಇದು ಜಾರಿಗೆ ಬಂದಮೇಲೆ ನ್ಯಾಚು-ರಲಿ ಉತ್ತರ ಕರ್ನಾಟಕದಲ್ಲಿರತಕ್ಕ ಲಂಬಾಣಿ, ಬೋಯಿ, ಕೊರಚ, ಕೊರಮ, that population was also included in scheduled caste. ಅದರಿಂದ 1991ರ ಪಾಪ್ಯುಲೇಷನ್ ಜಾಸ್ತಿಯಾಯಿತು. ನಮ್ಮ ಮತದಾರರ ಕ್ಷೇತ್ರದಲ್ಲಿಯೂ ಕೂಡ ಇದೇ ಆಗಿದೆ. ಫಾರ್ ಪಬ್ಲಿಕ್ ರೆಪ್ರಸೆಂಟೇಷನ್ ಅಂದರೆ ಎಂ.ಎಲ್.ಎ.ಗಳು, ಪಾರ್ಲಿಮೆಂಟ್ ಸದಸ್ಯರ ಚುನಾವಣೆ ಮಾಡಬೇಕಾ-ದರೆ ಜನಸಂಖ್ಯೆಯ ಆಧಾರದ ಮೇಲೆ ಅವರಿಗೆ ಸೀಟು ಕೊಡಬೇಕು. ಅದನ್ನು ಇಡೀ ರಾಜ್ಯದ ಟೋಟಲ್ ಪಾಪ್ಯುಲೇಷನ್ ನೋಡಿಕೊಂಡು ಮಾಡಬೇಕೆಂದು ಮಾಡಿದ್ದಾರೆ. ಅಂದಾಗ, ಅದೇ ಬೇಸ್ ಇಟ್ಟುಕೊಂಡು ನಾವು ಇದಕ್ಕೆ ಮಾಡಿದರೆ ಯಾರೂ ಕೂಡ ನಮಗೆ ಶೂಲಿಗೇರಿಸುವುದಿಲ್ಲ, ಯಾರೂ ತೊಂದರೆಯನ್ನು ಕೊಡುವುದಿಲ್ಲ, ಏನೂ ಮಾಡುವುದಿಲ್ಲ, ಅದಕ್ಕೆ ದಯವಿಟ್ಟು ಯಾವುದು ಮೊದಲು ಆಗುತ್ತದೆ ಅದನ್ನು ಮಾಡಿ. ಉಳಿದದ್ದು ಎಕ್ಸಾಮಿನ್ ಮಾಡತಕ್ಕದ್ದು ಏನಿದೆ ಅದು ಬೇಕಾ-ದರೆ ನೀವು ಎಕ್ಸಾಮಿನ್ ಮಾಡಿ ಅದಕ್ಕೊಂದು ಕಮಿಟಿ ಮಾಡಿ ಮತ್ತು ಬ್ಯಾಕ್‌ಲಾಗ್ ಫಿಲಪ್ ಮಾಡಲಿಕ್ಕೆ, till then either you get this stay order vacated or till some-thing happens, you continue them.

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಉಪಾಧ್ಯಕ್ಷರೆ ಒಂದು ಸಮಸ್ಯೆ.

ಉಪಾಧ್ಯಕ್ಷರು:- ಮಂತ್ರಿಗಳು ಹೇಳಿ ಮುಗಿಸಿಬಿಡುತ್ತಾರೆ. ತಾವು ಆಮೇಲೆ ಹೇಳಿ.

ಶ್ರೀ ಎಂ.ಸಿ. ನಾಣಯ್ಯ:- ನಾನು ಮುಗಿಸುತ್ತೇನೆ. ಸಾಮಾಜಿಕ ನ್ಯಾಯವನ್ನು ಕೊಡಬೇಕೆಂದು ಹೇಳುವುದರಲ್ಲಿ ನಮ್ಮ ಸರ್ಕಾರ ಬದ್ಧ. ಇದರಲ್ಲಿ ಎರಡು ಅಭಿಪ್ರಾಯಗಳು ಇಲ್ಲ. ಯಾರೇ ಏನೇ ಹೇಳಿದರೂ ಕೂಡ ಸಾಮಾಜಿಕ ನ್ಯಾಯವನ್ನು ಆ ಸಮಾಜದಲ್ಲಿರತಕ್ಕ ಎಲ್ಲ ವರ್ಗದ ಜನರಿಗೆ ಕೊಡ-ಬೇಕೆಂದು ಹೇಳತಕ್ಕ ಆವೊಂದು ತತ್ವಕ್ಕೆ ನಾವು ಬದ್ಧರಾಗಿದ್ದೇವೆ. ಆ ಹಿನ್ನೆಲೆಯಲ್ಲಿ ನಾವು ಕೆಲಸವನ್ನು ಮಾಡುತ್ತೇವೆ. ಆ ಹಿನ್ನೆಲೆಯಲ್ಲಿ ಮತ್ತು ಅದಕ್ಕೆ ಪೂರಕವಾಗಿ ಅಡಿಶನಲ್ ಚೀಫ್ ಸೆಕ್ರೆಟರಿಯವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿ ಸಮಗ್ರವಾಗಿ ಎಲ್ಲಾ ವಿಚಾರವನ್ನು ಒಳಗೊಂಡಂತೆ ಒಂದು ವರದಿಯನ್ನು ಕೊಡಲಿಕ್ಕೆ ನಾವು ಸರ್ಕಾರದವರು ಕ್ರಮವನ್ನು ಕೈಗೊಂಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಾನು ಹೇಳಿದ್ದೇನೆ, ಎನ್‌ಹ್ಯಾನ್ಸ್‌ಮೆಂಟ್ ಆಫ್ ಗೌರ್ನಮೆಂಟ್ ಆರ್ಡರ್ ಏನಿದೆ ಅದಕ್ಕೇನು ಅವರು ಎಕ್ಸಾಮಿನ್ ಮಾಡಬೇಕಾಗಿಲ್ಲ. ಅದು ನೇರ-ವಾಗಿ ನಾನು ಮಾಡುತ್ತೇನೆ ಎಂದು ಹೇಳಬಹುದು, 8-10 ದಿವಸ ಅಥವಾ ತಿಂಗಳೊಳಗೆ ಉಳಿ-ದಂತಹ ಸಮಸ್ಯೆಗೆ ಬೇಕಾದರೆ ಒಂದು ತಿಂಗಳು ಟೈಮ್ ತೆಗೆದುಕೊಂಡು ಕಮಿಟಿ ಕಾನ್‌ಸ್ಟಿಟ್ಯೂಟ್ ಮಾಡಲಿ, But atleast the earlier G.O. which was issued, should be re-stored. ಅದಕ್ಕೇ ಏನಿದೆ? ಆಲ್‌ರೆಡಿ ಒಂದು ಪ್ರಿಸಿಡೆಂಟ್ ಇದೆ. ಒಂದು ಗೌರ್ನಮೆಂಟ್ ಆರ್ಡರ್ ಇಸ್ಯು ಮಾಡಿದ್ದು ಇದೆ. ಅದನ್ನು ನಾನು ರೆಸ್ಟೋರ್ ಮಾಡುತ್ತೇನೆಂದು ಹೇಳಬಹುದು. ಅದಕ್ಕೇನೂ ತಾಪತ್ರಯವಿಲ್ಲ.

ಉಪಾಧ್ಯಕ್ಷರು :- ಸಮಗ್ರವಾಗಿ ಅಡಿಶನಲ್ ಸೆಕ್ರೆಟರಿಯವರ ಅಧ್ಯಕ್ಷತೆಯಲ್ಲಿ ಕಮಿಟಿ ಮಾಡಿ, ಸಮಗ್ರವಾಗಿ ಎಂದರೆ ಎಲ್ಲ ಅದರೊಳಗೇ ಬಂದುಬಿಡುತ್ತದೆ. ಮಾನ್ಯ ಖರ್ಗೆಯವರೇ, ಸಮಗ್ರವಾಗಿ ಚಿಂತನೆ ಮಾಡುತ್ತೇವೆ ಅಂದರೆ ಅದರೊಳಗೆ ಎಲ್ಲ ಬಂದುಬಿಡುತ್ತದೆಯಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಅಡಿಷನಲ್ ಸೆಕ್ರಟರಿಯವರೇ ಹಿಂದೆ ಇದರ ಬಗ್ಗೆ ಹೇಳಿದ್ದಾರೆ. ಮತ್ತೆ ನಾನು ಏಕೆ ಹೇಳುತ್ತಿದ್ದೇನೆಂದರೆ, ಅವರೇ ಒಂದು ಮೀಟಿಂಗ್ ಮಾಡಿ ಇದರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ. ಏನು ಹೇಳಿದ್ದಾನೆಂದರೆ, ಅಡಿಶನಲ್ ಚೀಫ್ ಸೆಕ್ರೆಟರಿಯವರನ್ನು ಛೇರ್ಮನ್ ಮಾಡಿ ನಾಲ್ಕು ಜನ ಸದಸ್ಯರನ್ನು ಸೇರಿಸಿ ಅವರೇ ಒಂದು ರಿಪೋರ್ಟ್ ಕೊಟ್ಟಿದ್ದಾರೆ. ರಿಪೋರ್ಟ್ ಏನು ಕೊಟ್ಟಿದ್ದಾರೆ ಅದನ್ನು ನಾನು ಹೇಳುತ್ತೇನೆ, ನಂ. ಡಿ.ಪಿ.ಎ.ಆರ್. 02 ಎಸ್.ಬಿ.ಸಿ. 96 ಸೀಕ್ರೇಟ್ ಎಂದು ಹೇಳಿ ಅವರದೇ ಡಾಕ್ಯುಮೆಂಟ್ ಇದೆ. The Committee has examined the matter and submitted its report. A copy of which is annexed to this note. The Committee has opined as follows:

4.20 ಪಿ.ಎಂ

There was a strong case for the Government to have issued the Government Order dated so and so which may not have been

adequately explained before the Karnataka Administrative Tribunal. ಆಮೇಲೆ The only way to save the promotional orders under the Government Order dated so and so is to obtain a temporary stay from the Karnataka Administrative Tribunal on the operation of their order dated 4-1-96.

ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಅವರು ಹೋಗಿಲ್ಲ ಎಂದು ಅಲ್ಲ. ಈ ಮ್ಯಾಟರ್ಸ್‌ನ್ನು ಕೂಡ ಅವರು ಎಕ್ಸಾಮಿನ್ ಮಾಡಿದ್ದಾರೆ. ಇದನ್ನು ಎನ್‌ಹಾನ್ಸ್ ಮಾಡುವುದಕ್ಕೆ ಫರ್ದರ್ ಎಕ್ಸಾಮಿನೇಶನ್ ಏನೂ ಬೇಕಾಗಿಲ್ಲ. 20-4-1994ರ ಆರ್ಡರ್‌ರನ್ನು ರೆಸ್ಟೋರ್ ಮಾಡುತ್ತೇವೆ, ಉಳಿದದ್ದು ಬೇಕಾದರೆ ಹೇಗೆ ನಾವು ಮಾಡುತ್ತೇವೆ ಎಂದರೆ ನಮ್ಮದೇನೂ ತಕರಾರು ಇಲ್ಲ. ಕೊನೆಯ ಪಕ್ಷ ಅದು ಒಂದಾದರೂ ಮಾಡಲಿ. ಮುಂದಕ್ಕೆ ಬೇಕಾದರೆ ನಾವು ಎಕ್ಸಾಮಿನ್ ಮಾಡಿ, ಏಳೆಂಟು ದಿವಸಗಳಲ್ಲಿ ಲಾ ಡಿಪಾರ್ಟ್‌ಮೆಂಟ್‌ನವರು, ಅವರು ಎಲ್ಲರೂ ಸೇರಿ ಮಾಡಬೇಕು. ಏಕೆಂದರೆ ಇದು ಕಾನ್ಸಿಟ್ಯೂಶನಲ್ ಆಬ್ಲಿಗೇಶನ್ ಇದೆ. ಇದನ್ನು ನೀವು ಫುಲ್‌ಫಿಲ್ ಮಾಡದೇಹೋದರೆ ಸಹಜವಾಗಿ ಇದು ಅನ್ಯಾಯ ಮಾಡಿದ ಹಾಗೆ ಆಗುತ್ತದೆ, ದಯವಿಟ್ಟು ಅದನ್ನು ರೆಸ್ಟೋರ್ ಮಾಡಿ ಎಂದು ನಾನು ಹೇಳುತ್ತೇನೆ.

SRI. M.C.NANAIAH:- I have already said it, the entire gamut of it has to be examined. As at the moment 1978 Notification is in force, in the matter of promotion. It will continue. ಬಾಕಿ ಇರತಕ್ಕಂಥ ಸಂಬಂಧಪಟ್ಟ ಹಾಗೆ Government will have to examine the whole matter, I think it will be done.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇಲ್ಲ. . .

ಉಪಾಧ್ಯಕ್ಷರು:- ಖರ್ಗೆಯವರೇ ಈಗಾಗಲೇ ಅವರು ಸ್ಪಷ್ಟವಾಗಿ ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಸಂವಿಧಾನ ಬದ್ಧವಾಗಿ, ಸಂವಿಧಾನದಲ್ಲಿರತಕ್ಕಂಥಾದ್ದನ್ನಾದರೂ ಕೂಡ ರಿಟೇನ್ ಮಾಡಿ ಎಂದು ಹೇಳಿದರೆ, ಅದಕ್ಕೇನು ತಾಪತ್ರಯ ಇದೆ? Twenty three percent should be retained. ಅಥವಾ 22 ಮತ್ತು ಹಾಫ್ ಮಾಡಿ ಇಶ್ಯು ಮಾಡಲಿ. ನಾನು It is proportionate to population ಎಂದಾಗ ಅದೇನೇ ಇರಲಿ.

ಶ್ರೀ ವೈ. ರಾಮಕೃಷ್ಣ:- ನಾವು ಭಿಕ್ಷೆ ಬೇಡುತ್ತಿಲ್ಲ. It is our right. It is our fundamental right. ನಾನು ಹೇಳುತ್ತಿದ್ದೇನೆ ಕೇಳಿ. ದಯವಿಟ್ಟು ಯಾವುದೇ ಮುಲಾಜು ಇಲ್ಲದೇ ಹೇಳುತ್ತಿದ್ದೇನೆ. It has to be restored in the interest of equity and justice.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇದಕ್ಕೆ ನಾವು ಸುಮ್ಮನೆ ಇದು ಮಾಡುವುದು ಬೇಡ. ಇಲ್ಲ ಎಂದರೆ, . . .

ಶ್ರೀ ವೈ. ರಾಮಕೃಷ್ಣ:- ಅದಕ್ಕಲ್ಲ, ಕನ್ಸಿಡರ್ ಮಾಡಿ ಹೇಳುತ್ತೇನೆ ಎಂದಾದರೂ ಹೇಳಲಿ. He cannot deny it.

SMT. PRAMEELA NESARGI:- It has to be done.

SRI. Y. RAMAKRISHNA:- Yes. It has to be done.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇದು ಸಂವಿಧಾನಬದ್ಧವಾಗಿ ಇರತಕ್ಕಂಥಾದ್ದು. ಸಂವಿಧಾನದಲ್ಲಿ ಅಮೆಂಡ್‌ಮೆಂಟ್ ಆಗತಕ್ಕಂಥಾದ್ದು. ಈಗ ಅಮೆಂಡ್‌ಮೆಂಟ್ ಕೂಡ ಆಗಿದೆ. ಪ್ರಪೋರ್ಷನೇಟ್‌ಲಿ ಸೆಂಟ್ರಲ್ ಗವರ್ನಮೆಂಟ್ ಈಗಾಗಲೇ 22 ಪರ್ಸೆಂಟ್ ಮಾಡಿದೆ. ನಾವು ಮಾಡಿದರೆ ನಮಗೇನೂ ತಾಪತ್ರಯ ಆಗುವುದಿಲ್ಲ. ಅದಕ್ಕಾಗಿ ಈ ಒಂದು ನಿಲುವನ್ನೇ ಅವರು ತಾಳಿದರೆ, ಕಷ್ಟವಾಗುತ್ತದೆ. ಆದ್ದರಿಂದ ದಯವಿಟ್ಟು . . .

ಉಪಾಧ್ಯಕ್ಷರು:- ವಾಟಾಳ್ ನಾಗರಾಜ್ ಅವರು ಏನೋ ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್:- ಅಡಿಶನಲ್ ಕಾರ್ಯದರ್ಶಿಯವರು ಕೊಡತಕ್ಕಂಥ ವರದಿಗೆ ಒಂದು ಕಾಲಮಿತಿಯನ್ನು ಅವರು ಹಾಕಬೇಕು. ಅಲ್ಲಿಯವರೆಗೆ ಅದನ್ನು ತಡೆ ಹಿಡಿಯಬೇಕು.

(ಸಭೆಯಲ್ಲಿ ಗೊಂದಲ ಅನೇಕ ಸದಸ್ಯರು ಏಕಕಾಲದಲ್ಲಿ ಎದ್ದುನಿಂತು ಮಾತನಾಡಲು ಪ್ರಾರಂಭಿಸಿದರು)

ಉಪಾಧ್ಯಕ್ಷರು:- ಒಬ್ಬೊಬ್ಬರೇ ನಿಂತು ಮಾತನಾಡಿ. ನೀವು ಇಬ್ಬಿಬ್ಬರು, ನಾಲ್ಕು ಮಂದಿ ನಿಂತು ಒಟ್ಟಿಗೆ ಮಾತನಾಡಿದರೆ ಹೇಗೆ?

ಶ್ರೀ ಡಿ. ಬಸವರಾಜ್:- ಎಸ್.ಎಸಿ/ಎಸ್.ಟಿ. ಪಾಪ್ಯುಲೇಶನ್ ಎಷ್ಟು ಇದೆಯೆಂಬ ಮಾಹಿತಿ ನಿಮ್ಮ ಹತ್ತಿರವೇ ಕಡತದಲ್ಲಿ ಇದೆಯಲ್ಲ? ಅದಕ್ಕೆ ಕಾಲಮಿತಿ ಹೆಚ್ಚುವರಿ ಬೇಕಾಗಿಲ್ಲ ಎಂದೇ ನಾನು ಹೇಳುತ್ತಾ ಇರುವುದು.

ಉಪಾಧ್ಯಕ್ಷರು:- ಕಾಗೋಡು ತಿಮ್ಮಪ್ಪನವರು . . .

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಉಪಾಧ್ಯಕ್ಷರೆ, ಸರ್ಕಾರದಿಂದ ಒಂದು ಆಶ್ವಾಸನೆ ಬೇಕಾಗುತ್ತದೆ. ಎಲ್ಲಕ್ಕಿಂತಲೂ ಹೆಚ್ಚಾಗಿ 1995ರಲ್ಲಿ ಆರ್ಟಿಕಲ್ 64(ಎ)ನೂ ತಿದ್ದುಪಡಿಯಾದ ಮೇಲೆ ಅದನ್ನು ಜಾರಿಗೊಳಿಸತಕ್ಕಂಥ ಕೆಲಸ ಎಲ್ಲ ಸರ್ಕಾರಗಳ ಜವಾಬ್ದಾರಿ ಇದೆ.

ಉಪಾಧ್ಯಕ್ಷರು:- ಅದಕ್ಕೆ ಅವರು ಒಲ್ಲೆ ಎಂದು ಹೇಳಿಲ್ಲ ಮಾಡುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ:- ಇಲ್ಲ, ಹೇಳಿಲ್ಲ. ಎಕ್ಸಾಮಿನ್ ಮಾಡುತ್ತೇವೆ ಎಂದು ಹೇಳುತ್ತಾರೆ. But the question of examination does not arise at all. It is the obligation on the part of every Government to implement it. The only question is there are hurdles. I too know. ಏಕೆಂದರೆ ಹಿಂದೆ ನಾವೇ ಒಂದು ಆರ್ಡರ್ ಮಾಡಿದ್ದೇವೆ. ಅದರ ಪ್ರಕಾರ, ಪ್ರಪೋರ್ಷನ್ ಟು ದಿ ಪಾಪ್ಯುಲೇಶನ್ ಪ್ರಕಾರ ಇಂಪ್ಲಿಮೆಂಟ್ ಮಾಡಲೇಬೇಕು. ಅದರಲ್ಲಿ ಬೇರೆ ಆಲ್ಟರ್‌ನೇಟಿವ್ ಇಲ್ಲ. ಲೇಟೆಸ್ಟ್ ಅಮೆಂಡ್‌ಮೆಂಟ್,

64(ಎ) ಪ್ರಕಾರ ನೀವು ಇಂಪ್ಲಿಮೆಂಟ್ ಮಾಡಲೇಬೇಕು. ಆದರೆ ಒಂದು ತೊಂದರೆ ಏನಿದೆ ಎಂದರೆ, ಇಂದಿರಾ ಸಹಾನಿ ಕೇಸ್ ಆದಮೇಲೆ ನಾವು ಒಂದು ಕಾನೂನು ತಂದಿದ್ದೇವೆ. ಏನೆಂದರೆ ನಮ್ಮ ಎಲ್ಲಾ ಮೀಸಲಾತಿಗಳನ್ನೂ 50ರೊಳಗೇ ತರಬೇಕೆಂದೂ ಮಾಡಿದ್ದೇವೆ. We have to get over from that. ಅದಕ್ಕೆ ಸಮಯ ಕೇಳಿದರೆ, We can understand that. So far as the implementation of Constitution amendment is concerned. . .

ಉಪಾಧ್ಯಕ್ಷರು:- ಅವರ ಹತ್ತಿರ ಇದೆ. ನೀವು ಏಕೆ ಓದುವುದಕ್ಕೆ ಹೋಗುತ್ತೀರಿ?

(INTERRUPTIONS)

ಶ್ರೀ ವೈ. ರಾಮಕೃಷ್ಣ:- ಈಗ Article 64 (A) says. . .

ಉಪಾಧ್ಯಕ್ಷರು:- ಅದು ಅವರ ಹತ್ತಿರ ಇದೆ. ನೀವು ಏಕೆ ಹೇಳುತ್ತೀರಿ.

SRI. Y. RAMAKRISHNA:- Article 64 (A) says,

Nothing under this Article shall prevent the State for making any provision for reservation to any class or classes of posts in the service under the State in favour of Scheduled Caste and Scheduled Tribe which in the opinion of the State are not adequately represented in the service under the State. It has given blank powers. This Article has given complete powers.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- 94ರ ಒರಿಜಿನಲ್ ಜಿ.ಒ.ನ್ನು ರೆಸ್ಟೋರ್ ಮಾಡುವುದಕ್ಕೆ ಯಾವ ತಾಪತ್ರಯವೂ ಇಲ್ಲ. You withdraw this G.O. and restore that G.O. ರಿಸರ್ವೇಶನ್ ಇನ್ ಪ್ರಮೋಶನ್ ಏಕೆ ಮಾಡಿದ್ದು ಎಂದರೆ, ಬ್ಯಾಕ್‌ಲಾಗ್ ಇದೆಯೆಂದು ಹೇಳಿಯೇ ಇದನ್ನು ತಂದಿದ್ದು. ಬ್ಯಾಕ್‌ಲಾಗ್ ವೇಕೆನ್ಸಿ ಪ್ರಕಾರ ಇವರಿಗೆ ಕೊಡಲಿಕ್ಕೆ ಒಂದು ಅನುಕೂಲ ಮಾಡಿ-ಕೊಡಬೇಕು ಎಂದು ಹೇಳಿ ನಿಮಗೆ 64(ಎ) ಮಾಡಿಕೊಟ್ಟದ್ದುದು. ಇಲ್ಲದಿದ್ದರೆ ಆದರ ಅವಶ್ಯಕತೆಯೇ ಇರಲಿಲ್ಲ. ಆದಕಾರಣ, ದಯವಿಟ್ಟು ಅದನ್ನು ಒಪ್ಪಿ, ಅದನ್ನು ಮಾಡಿಕೊಡಿ. ಇಲ್ಲ ನಾನು ಅದನ್ನು ಮಾಡಿಕೊಡುತ್ತೇನೆ ಎಂದು ಹೇಳಿದರೆ, ನಾವು ಇಲ್ಲೇ ಕುಳಿತುಕೊಳ್ಳುತ್ತೇವೆ. ಇಲ್ಲ, ನೀವು ಮಾಡಿ-ಕೊಡುವುದಿಲ್ಲ, ಮನಸ್ಸಿಗೆ ಬಂದಿದ್ದ ರೀತಿ ನಡೆದುಕೊಳ್ಳುತ್ತೇವೆ ಎಂದರೆ ಅನಿವಾರ್ಯವಾಗುತ್ತದೆ. ನಾವು ಇಲ್ಲೇ ಧರಣಿ ಕೂಡಬೇಕಾಗುತ್ತದೆ ಕೂಡುತ್ತೇವೆ.

ಶ್ರೀ ಎಂ.ಸಿ. ನಾಣಯ್ಯ:- ಇದೇ ಮಾಡುವುದಾದರೆ ಮಾಡಿ.

(ಗೊಂದಲ)

SRI. M. MALLIKARJUNA KHARGE:- He cannot get over like this.

ಉಪಾಧ್ಯಕ್ಷರು:- ಅವರು ಹೇಳುವುದನ್ನು ಕೇಳಿ. ಎಲ್ಲರೂ ಎದ್ದುನಿಂತು ಮಾತನಾಡಿದರೆ ಹೇಗೆ? ಮಂತ್ರಿಗಳು ಏನು ಹೇಳುತ್ತಾರೊ ಹೇಳಲಿ. ದಯಮಾಡಿ ತಾವು ಕೇಳಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜನ ಖರ್ಗೆ:- ನಾವು ರೆಸ್ಟೋರ್ ಮಾಡುತ್ತೇವೆ ಎಂದು ಹೇಳಲಿ 28.4.1994ರ ಆರ್ಡರ್‌ನ್ನು ರೆಸ್ಟೋರ್ ಮಾಡುತ್ತೇವೆ ಎಂದು ಹೇಳಲಿ. ಅದು ಒಂದು. ಎರಡನೆ-ಯದು ಆರ್ಟಿಕಲ್ 16(ಎ) ಪ್ರಕಾರ ನಾವು ಪ್ರಮೋಶನ್ಸ್ ಕಂಟಿನ್ಯೂ ಮಾಡುತ್ತೇವೆ ಎಂದು ಹೇಳಲಿ. ಮೂರನೆಯದು ಬ್ಯಾಕ್‌ಲಾಗ್ ವೆಕೆನ್ಸಿಯನ್ನು ಪ್ರತಿಯೊಂದು ಇಲಾಖೆಯಲ್ಲಿ ಏನು ನಿಲ್ಲಿಸಿ-ದ್ದಾರೆ, ಅವರಿಗೆ ನಾವು ಪ್ರಮೋಶನ್ ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಇವರು ಹೇಳಲಿ. ಉಳಿ-ದದ್ದು ಏನು ಲೀಗಲ್ ಮ್ಯಾಟರ್ ಇದೆ. ಎಸ್.ಎಲ್.ಪಿ. ಫೈಲ್ ಮಾಡುವುದು, ಸುಪ್ರೀಂಕೋರ್ಟ್ ಮುಂದೆ ಹೋಗುವುದು, ಅದು ಬೇಕಾದರೆ ಲಾ ಡಿಪಾರ್ಟ್‌ಮೆಂಟ್, ಅಡಿಶನಲ್ ಚೀಫ್ ಸೆಕ್ರೆಟರಿ, ಎಕ್ಸಾಮಿನ್ ಮಾಡಲಿ. The administrative matter which is in your purview or which the Government can do straight away. ಅದಕ್ಕೆ ಒಂದು ಕಮಿಟಿ ಹೋಗಿ ರಿಎಕ್ಸಾಮಿನ್ ಮಾಡತಕ್ಕಂಥದ್ದು ಇಲ್ಲ. ನಿಮ್ಮ ಕ್ಯಾಬಿನೇಟ್ ನೋಟ್‌ನ್ನೇ ಈಗ ನಾನು ಓದಿ ಹೇಳಿದೆ. ನಿಮ್ಮ ಅಡಿಶನಲ್ ಚೀಫ್ ಸೆಕ್ರೆಟರಿ, ಲಾ ಸೆಕ್ರೆಟರಿ ನೀವೆಲ್ಲ ಕೂಡಿ ಮಾಡಿದಂಥ ನೋಟ್-ನ್ನೇ ನಾನು ಸವಿಸ್ತಾರವಾಗಿ ನಿಮ್ಮ ಮುಂದೆ ಓದಿ ಹೇಳಿದ್ದೇನೆ. ಇದಕ್ಕಿಂತ ಜಾಸ್ತಿ ಏನು ಹೇಳಬೇಕು? ಈ ರೀತಿಯಾಗಿ ಅವರು ಮೊದಲೇ ತಯಾರು ಮಾಡಿಕೊಂಡು ಪ್ರಿಜ್ಯುಡಿಸ್ ಆಗಿ ನಾವು ಮಾಡಲೇ-ಬಾರದು ಎನ್ನತಕ್ಕಂಥಾದ್ದು ಇದ್ದಿದ್ದರೆ, ನಾವೇನೂ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕಾಗಿ ದಯ-ವಿಟ್ಟು ಅವರ ಈ ಆಟಿಟ್ಯೂಡ್‌ನ್ನು ಮತ್ತು ಈ ಒಂದು ಧೋರಣೆಯನ್ನು ನಾವು ಖಂಡಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

(ಕಾಂಗ್ರೆಸ್ (ಐ) ಪಕ್ಷದ ಸದಸ್ಯರು ಮತ್ತು ಬಿ.ಜೆ.ಪಿ. ಸದಸ್ಯರು ಸಭಾತ್ಯಾಗ ಮಾಡಿದರು)

SRI. C.H. VIJAYASHANKAR:- Our request is only to . . .

ಶ್ರೀ ಯು.ಆರ್. ಸಭಾಪತಿ:- ನೀವು ಬೇಕಾದದ್ದು ಮಾಡಿ ಎಂದು ಹೇಳುವಂಥಾದ್ದು, ಇದು ಸರಿಯಲ್ಲ. ಇದು ಖಂಡಿತವಾಗಿಯೂ ಸರಿಯಾದುದಲ್ಲ.

ಶ್ರೀ ಡಿ. ಬಸವರಾಜ್:- ದಯವಿಟ್ಟು ಸರ್ಕಾರ ಇದನ್ನು ಪ್ರತಿಷ್ಠೆಯಾಗಿ ತೆಗೆದುಕೊಳ್ಳಬಾರದು.

ಶ್ರೀ ಎಂ.ಸಿ. ನಾಣಯ್ಯ:- ಈಗಾಗಲೇ ಒಂದು ಆಜ್ಞೆ ಜಾರಿಯಲ್ಲಿದೆ. 1995ರ ಜನವರಿಯಿಂದ ಆ ಆಜ್ಞೆ ಜಾರಿಯಲ್ಲಿದೆ. ಇವರು ಹೇಳುತ್ತಾ ಇರತಕ್ಕಂಥದ್ದನ್ನು ಈಗ ಒಪ್ಪಿಕೊಂಡರೆ ಆ ಆಜ್ಞೆ ಏನಾಗ-ಬೇಕು? ಅದನ್ನು ವಿಚಾರ ಮಾಡಬೇಕೋ ಬೇಡವೋ?

ಶ್ರೀ ವಾಟಾಳ್ ನಾಗರಾಜ್:- ಸರ್ಕಾರ ಪ್ರತಿಷ್ಠೆಯನ್ನು ಬದಿಗೊತ್ತಿ ಇದರ ಬಗ್ಗೆ ಪ್ರಾಮಾಣಿಕ ಚಿಂತನೆಯಾಗಬೇಕು. ಅದರ ಬದಲಾಗಿ ನಾವು ಸರ್ಕಾರ ಹೇಳಿದ್ದೇ ನಡೆಯಬೇಕು ಎನ್ನತಕ್ಕಂಥ ನೀತಿ ಏನಿದೆ, ಈ ಮೊಸಳೆ ಕಣ್ಣೀರು ಸರಿಯಲ್ಲ. ಇದು ಸರಿಯಾದ ನೀತಿಯಲ್ಲ. ಇದನ್ನು ನಾನು ಸ್ಪಷ್ಟವಾಗಿ ವಿರೋಧ ಮಾಡುತ್ತ, ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು)

ಉಪಾಧ್ಯಕ್ಷರು:- ಮಾನ್ಯ ಪುಟ್ಟಣ್ಣಯ್ಯನವರು ಏನೋ ಪ್ರಸ್ತಾವನೆ ಮಾಡುತ್ತೇನೆ ಎಂದು ಹೇಳಿದ್ದರು.

ಆ) ಬನ್ನೇರಿಯಮ್ಮ ಸಕ್ಕರೆ ಕಾರ್ಖಾನೆಯಲ್ಲಿ ಚಳುವಳಿ.

+ ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ):- ಸನ್ಮಾನ್ಯ ಉಪಾಧ್ಯಕ್ಷರೇ, ಬನ್ನೇರಿಯಮ್ಮ ಸಕ್ಕರೆ ಕಾರ್ಖಾನೆ ಮುಂದೆ ಸುಮಾರು 10-12 ದಿವಸಗಳ ಚಳುವಳಿ ನಡೆಯುತ್ತಿದ್ದು, 2-3 ಸಾರಿ ಮಾತುಕತೆ ನಡೆದು, ಪರಿಣಾಮಕಾರಿಯಾಗಿ ತೀರ್ಮಾನವಾಗಿಲ್ಲ. ಸನ್ಮಾನ್ಯ ಉಪಮುಖ್ಯಮಂತ್ರಿಗಳ ನೇತೃತ್ವದಲ್ಲಿ ಮಾತುಕತೆಯಾಯಿತು. ಅವರ ನೇತೃತ್ವದಲ್ಲಿ ದರವನ್ನೂ ನಿಗದಿಮಾಡಲಾಯಿತು. ಆದರೆ, 700 ರೂಪಾಯಿ ಪೇಮೆಂಟಿನಲ್ಲಿ 550 ರೂಪಾಯಿ ದುಡ್ಡು ಕೊಟ್ಟಿದ್ದಾರೆ, ಇನ್ನೂ 150 ರೂಪಾಯಿ ಬಾಕಿ ಕೊಡಬೇಕು; ಬನ್ನೇರಿಯಮ್ಮ ಸಕ್ಕರೆ ಕಾರ್ಖಾನೆಗೆ ಸಂಬಂಧಪಟ್ಟ ಹಾಗೆ ಹೇಳುತ್ತಿದ್ದೇನೆ. ಈಗ್ಗೆ 4 ದಿವಸದಲ್ಲಿ ಮಾತುಕತೆ ನಡೆದು, 5 ಅಥವಾ 6ನೇ ತಾರೀಖು ಯಾರು ಯಾರು ಬಾಕಿ ಕೊಡಬೇಕೋ ಆ ಕಾರ್ಖಾನೆಯವರನ್ನೆಲ್ಲಾ ಕರೆದು ಒಂದು ಸುತ್ತು ಮಾತುಕತೆ ಆಡಬೇಕು, ಮಾತುಕತೆ ಮಾಡಿ ಒಂದು ತೀರ್ಮಾನಕ್ಕೆ ಬರೋಣ ಎಂದು ಹೇಳಿದ್ದರು. ಇವತ್ತು ಅವರು ರಿಪ್ಲೈ ಕೊಡುತ್ತಾರೆಂದು ನಾವು ತಿಳಿದುಕೊಂಡಿದ್ದೆವು. ಈ ಕಾರ್ಯಕ್ರಮ ಬುಧವಾರದವರೆಗೂ ಮುಂದೂಡಲಾಗಿದೆ. ಮಂಗಳವಾರ ಮಾತುಕತೆ ಇಲ್ಲ, ದಿನನಿತ್ಯ ಅಲ್ಲಿ ಚಳುವಳಿ ಮಾಡುತ್ತಿದ್ದಾರೆ. ಆದಕ್ಕೋಸ್ಕರ ಸರ್ಕಾರ ಮಧ್ಯೆ ಪ್ರವೇಶ ಮಾಡಿ, ಏನು ರೈತರಿಗೆ ಕೊಡಬೇಕಾದ ಬಾಕಿ ಕೊಡುವುದರಲ್ಲಿ ಬಡ್ಡಿ ಸಮೇತ ಕೊಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅದಲ್ಲದೆ ಖೋಡೇಸ್‌ನವರನ್ನು ಯಾರೂ ಬಗ್ಗಿಸುವುದಕ್ಕಾಗುವುದಿಲ್ಲ. ನನಗನಿಸುತ್ತದೆ, ಸರ್ಕಾರ ಅವನಿಗೆ ಏನು ಮಾಡುತ್ತದೆಂದು ಗೊತ್ತಾಗುವುದಿಲ್ಲ. ಒಂದು ಸರ್ಕಾರವನ್ನೇ ಒಬ್ಬ ಖೋಡೇಸ್ ಹೆದರಿಸುತ್ತಾನೆ ಎಂದರೆ, ಅವನೇನು ದೇವಲೋಕದಿಂದ ಬಂದಿಳಿದಿದ್ದಾನೋ ಏನೋ ನನಗೆ ಅರ್ಥವಾಗುವುದಿಲ್ಲ. ರೈತರಿಗೆ ನೂರು ರೂಪಾಯಿ ಪೇಮೆಂಟ್ ಕೊಟ್ಟಿರುವುದು. 6 ಲಕ್ಷ ಟನ್ ಕಬ್ಬು ಅರೆಯಬೇಕಾದ ಬಾಕಿಗೆ, ಒಂದು ಲಕ್ಷದ 80 ಸಾವಿರ ಟನ್ ಕಬ್ಬು ಅರೆದು, ಅದರಲ್ಲೂ ಒಟ್ಟಿಗೆ ಕಬ್ಬು ಅರೆಯದೇ, ಏನು ಷುಗರ್ ಕೇನ್ ಕಂಟ್ರೋಲ್ ಆರ್ಡರ್ ಇದೆ, ಅದೆಲ್ಲವನ್ನೂ ತಿರಸ್ಕಾರ ಮಾಡಿ, ರೈತರಿಗೆ ಮೂರು ತರದ ಪೇಮೆಂಟ್ ಕೊಟ್ಟಿದ್ದಾರೆ. ಒಬ್ಬರಿಗೆ 400, ಒಬ್ಬರಿಗೆ 500, ಒಬ್ಬರಿಗೆ 600 ರೂಪಾಯಿ ಕೊಡುತ್ತೇನೆಂದು ಹೇಳಿ 6-6 ತಿಂಗಳಾಗಿದ್ದರೂ ಇನ್ನೂ ಕಬ್ಬಿನ ಹಣವನ್ನು ಬಾಕಿ ಕೊಟ್ಟಿಲ್ಲ. ನನಗನಿಸುತ್ತದೆ, ಸರ್ಕಾರ ಏನಾದರೂ ಅವನಿಗೆ ಶರಣಾಗಿರುತ್ತದೋ ಅಥವಾ ಅವನಿಗೆ ಏನಾದರೂ ಪಾಠ ಕಲಿಸುತ್ತದೋ. ಉತ್ತರ ಪ್ರದೇಶದಲ್ಲಿ ಈ ತರಹ ಆಟವಾಡತಕ್ಕಂಥ ಕಾರ್ಖಾನೆಗಳನ್ನು ಕಾನೂನು ಪ್ರಕಾರ ಸರ್ಕಾರ ಮುಟ್ಟುಗೋಲು ಹಾಕಿಕೊಂಡಿದೆ. ಆ ಶಕ್ತಿ ನಿಮಗಿದೆಯೇ ಇಲ್ಲವೇ ರೈತರು ಇದೇ ರೀತಿ ಸಾಯಬೇಕೇ? ಇಲ್ಲವೇ ರೈತರೇ ಕಾರ್ಖಾನೆಯನ್ನು ಜಪ್ತಿ ಮಾಡುವಂಥ ಕೆಲಸ ಮಾಡಬೇಕೆ? ಇಲ್ಲವೇ ಚಳುವಳಿ ಮೂಲಕ ನಮ್ಮ ಸಮಸ್ಯೆ ಬಗೆಹರಿಸಿಕೊಳ್ಳಬೇಕೇ? ಆಗ ನೀವು ಮಧ್ಯೆ ಪ್ರವೇಶ ಮಾಡುತ್ತೀರಿ. ಅದರಿಂದ ನಿಮಗೇನಾದರೂ